# ೨. ಶ್ರುತಧರ ಆಚಾರ್ಯಾನುಕ್ರಮ

ನಮ್ಮ ಈ ಭರತಕ್ಷೇತ್ರದಲ್ಲಿ ಕಾಲ ಪರಿವರ್ತನೆಯೊಡನೆ ಮನುಷ್ಯನ ಬದುಕಿನಲ್ಲಿ ಏರಿಳಿತದ ಬದಲಾವಣೆಯಾಗುತ್ತಿರುತ್ತದೆ. ಕಾಲಗತಿಯನ್ನು ಚಕ್ರದ ಹೋಲಿಕೆಯೊಡನೆ ನಿರೂಪಿಸಲಾಗಿದೆ. ಈ ಚಕ್ರಕ್ಕೆ ೧೨ ಅರೆಗಳಿವೆ, ಚಕ್ರ ಉರುಳಿದಂತೆ ಆರು ಆರೆಗಳು ಮೇಲ್ಮುಖವಾಗಿ (ಊರ್ಧ್ವಮುಖವಾಗಿ) ಮತ್ತು ಇತರ ಆರು ಆರೆಗಳು ಕೆಳಮುಖವಾಗಿ (ಅಧೋಮುಖವಾಗಿ) ಚಲಿಸುತ್ತವೆ. ಊರ್ಧ್ವಮುಖ ಚಲನೆಯ ಕಾಲವನ್ನು ಉತ್ಸರ್ಪಿಣಿ ಎಂದು ಮತ್ತು ಅಧೋಮುಖಚಲನೆಯ ಅವಧಿಯನ್ನು ಅವಸರ್ಪಿಣಿಯೆಂದು ಕರೆಯಲಾಗಿದೆ. ಇವು ಒಂದೊಂದೂ ಹತ್ತು ಕೋಟಾಕೋಟಿ ಸಾಗರೋಪಮ ಕಾಲದ ಅವಧಿಯುಳ್ಳವಾಗಿವೆ, ಈ ಎರಡು ಕಾಲಗಳೂ ಆರು ಆರು ಪ್ರಕಾರದ ವಿಭಾಗವುಳ್ಳವಾಗಿವೆ. ಅವಸರ್ಪಿಣಿಯು ಸುಷಮ ಸುಷಮ, ಸುಷಮ ಸುಷಮದುಷಮ, ದುಷಮ ಸುಷಮ, ದುಷಮ ಮತ್ತು ದುಷಮ ದುಷಮ ಎಂಬ ಪ್ರಕಾರದ ಆರು ವಿಭಾಗಗಳುಳ್ಳದ್ದಾಗಿದೆ. ಉತ್ಸರ್ಪಿಣಿಯು ದುಷಮ ದುಷಮದಿಂದಾರಂಭವಾಗಿ ಸುಷಮ ಸುಷಮದೊಡನೆ ಅಂತ್ಯವಾಗುವ ಪ್ರಕಾರದ –ಆರು ವಿಭಾಗಗಳುಳ್ಳದ್ದಾಗಿದೆ. ಉತ್ಸರ್ಪಿಣಿಯ ಮೂರನೇ ವಿಭಾಗದಲ್ಲಿ ಮತ್ತು ಅವಸರ್ಪಿಣಿಯ ನಾಲ್ಕನೇ ವಿಭಾಗದಲ್ಲಿ ತೀರ್ಥಂಕರರು ಜನಿಸಿ ತೀರ್ಥಪ್ರವರ್ತನೆ ಮಾಡುವರು. ಈಗ ಪ್ರವರ್ತಿಸುತ್ತಿರುವ ಅವಸರ್ಪಿಣಿಯ ನಾಲ್ಕನೇ ವಿಭಾಗ ದುಷಮ ಸುಷಮಕಾಲದಲ್ಲಿ ವೃಷಭಾದಿ ಮಹಾವೀರ ವರ್ಧಮಾನಾಂತ್ಯರಾದ ಇಪ್ಪತ್ತನಾಲ್ಕು ತೀರ್ಥಂಕರರು ಜನಿಸಿ ತೀರ್ಥ ಪ್ರವರ್ತನೆ ಮಾಡಿದ್ದಾರೆ.೧ ಪ್ರತಿಯೊಬ್ಬ ತೀರ್ಥಂಕರನ ಕಾಲದಲ್ಲಿಯೋ ಗಣಧರರು ದ್ವಾದಶಾಂಗ ಶ್ರುತದ ರಚನೆ ಮಾಡುತ್ತಾರೆ ಮತ್ತು ಪ್ರತಿಯೊಬ್ಬ ತೀರ್ಥಂಕರರ ತೀರ್ಥಕಾಲವು ಮುಂದಿನ ತೀರ್ಥಂಕರನ ನಿರ್ವಾಣ ಪರ್ಯಂತದ ಅವಧಿಯುಳ್ಳದ್ದಾಗಿರುವುದು. ಉದಾಹರಣೆಯಾಗಿ ಇಪ್ಪತ್ತಮೂರನೇ ತೀರ್ಥಂಕರ ಭಗವಾನ್ ಪಾರ್ಶ್ವ ನಾಥನ ತೀರ್ಥಕಾಲವು ಅಂತಿಮತೀರ್ಥಂಕರ ಭಗವಾನ್ ಮಹಾವೀರ–ವರ್ಧಮಾನನ

ನಿರ್ವಾಣಪರ್ಯಂತ ಪ್ರವರ್ತಿತವಿದ್ದಿತು. ಈಗ ಭಗವಾನ್ ಮಹಾವೀರ ತೀರ್ಥಂಕರನ ತೀರ್ಥವು ಪ್ರವರ್ತಿತವಿದೆ.

ಬಿಹಾರ್ ಪ್ರಾಂತ್ಯದ ಕುಂಡಲಪುರದಲ್ಲಿ ಸಿದ್ಧಾರ್ಥರಾಜನು ಕ್ರಿ. ಪೂ. ಏಳನೇ– ಆರನೇ ಶತಮಾನಗಳ ಮಧ್ಯಕಾಲದಲ್ಲಿ ರಾಜನಾಗಿದ್ದನು. ವೈಶಾಲಿಯ ರಾಜ ಚೇಟಕನ ಮಗಳು ೨ ಪ್ರಿಯಕಾರಿಣೀದೇವಿಯು ಇವನ ಪತ್ನಿ. ಇವರಿಗೆ ಭಗವಾನ್ ಮಹಾವೀರನು ಕ್ರಿ. ಪೂ. ೫೯೮ರ ಚೈತ್ರ ಶುಕ್ಲ ತ್ರಯೋದಶಿಯಂದು ೩ ಮಗನು ಜನಿಸಿದನು. ಇವನಿಗೆ 'ವೀರ' ಮತ್ತು 'ವರ್ಧಮಾನ' ಎಂಬ ಎರಡು ಹೆಸರುಗಳನ್ನಿರಿಸಿ ನಾಮಕರಣ ಮಾಡಲಾಯಿತು. ಇವನು ತೊಟ್ಟಿಲ ಶಿಶುವಾಗಿರುವಾಗ ಒಂದು ದಿನ ಸಂಜಯ ಮತ್ತು ವಿಜಯ ಎಂಬ ಚಾರಣ ಋಷಿಗಳಿಬ್ಬರು ಇವನ ದರ್ಶನ ಮಾಡಿದರು. ಆ ದರ್ಶನ ಮಾತ್ರದಿಂದ ಅವರಲ್ಲಿ ಮುಂಚಿತವಾಗಿ ಮೂಡಿದ್ದ ಅರ್ಥವೊಂದರ ಸಂದೇಹ ನಿವಾರಣೆಯಾಯಿತಾಗಿ ಅವರು ಭಕ್ತಿಯಿಂದ ಇವನನ್ನು 'ಸನ್ಮತಿ' ಎಂದು ಹೆಸರಿಸಿದರು. ಇವನು ಬಾಲಕಾವಸ್ಥೆಯಲ್ಲಿ ಬಾಲಕರೊಡಗೂಡಿ ಆಟವಾಡುತ್ತಿರುವಾಗ ಘಟ ಸರ್ಪವೊಂದು ಗೋಚರಿಸಿತು. ಇತರ ಬಾಲಕರೆಲ್ಲರೂ ಹೆದರಿ ಓಡಿಹೋದರು. ಬಾಲಕವರ್ಧಮಾನು ಹೆದರದೆ ಅದನ್ನು ದಮನ ಮಾಡಿದುದರಿಂದ ಅವನಿಗೆ ಮಹಾವೀರ ಎಂಬ ಹೆಸರಾಯಿತು. ಉತ್ತಮ ದಿವ್ಯಸುಖಾನುಭವದೊಡನೆ ಇಪ್ಪತ್ತೆಂಟು ವರ್ಷ ಏಳು ತಿಂಗಳು ಮತ್ತು ಹನ್ನೆರಡು ದಿವಸಗಳು ಕಳೆದಿರಲು ಭಗವಾನ್ ಮಹಾವೀರನು ಅಭಿನಿಭೋಧಿಕ ಜ್ಞಾನ ಸಂಪನ್ನನಾಗಿ ಬೋಧಿ ಪಡೆದವನಾಗಿ ಷಷ್ಠೋಪವಾಸಪೂರ್ವಕ ಕ್ರಿ. ಪೂ. ೫೭೦ರಲ್ಲಿ ಮಾರ್ಗಶಿರ ಕೃಷ್ಣಪಕ್ಷ ದಶಮಿಯಂದು ನಿಷ್ಕ್ರಾಂತನಾಗಿ ಮುನಿದೀಕ್ಷೆ ಪಡೆದನು.ಒಂದು ದಿನ ಭ. ಮಹಾವೀರನುಉಜ್ಜಯಿನಿಯ ಅತಿಮುಕ್ತಕ ಶ್ಮಶಾನದಲ್ಲಿ ಪ್ರತಿಮಾಯೋಗಧಾರಿಯಾಗಿ ತಪಸ್ಸಿನಲ್ಲಿರಲು ಅವನ ಸತ್ವ ಪರೀಕ್ಷಿಸಲು ರುದ್ರನು ನಾನಾ ಪ್ರಕಾರದಿಂದ ಉಪಸರ್ಗ ಮಾಢಿದನು. ಇದರಿದ ವಿಚಲಿತನಾಗದಿದ್ದ ಆ ಸ್ವಾಮಿಗೆರಗಿ ಅವನನ್ನು 'ಮಹತಿ ಮಹಾವೀರ' ಎಂದು ಹೆಸರಿಸಿ ಕೊಂಡಾಡಿದನು. ಬಳಿಕ ಹನ್ನೆರಡು ವರ್ಷ ಐದು ತಿಂಗಳು ಹದಿನೈದು ದಿನಗಳ ಕಾಲ ತಪಸ್ಸಿನಲ್ಲಿ ನಿರತನಾಗಿದ್ದು ಛದ್ಮ ಅವಸ್ಥೆಯನ್ನು ಕಳೆದು ಪರಿಶುದ್ಧ

ರತ್ನತ್ರಯಸಂಪನ್ನನಾದ ಭ. ಮಹಾವೀರನು ಜೃಂಭಿಕಗ್ರಾಮದ ಬಳಿಯ ಋಜುಕೂಲಾ ನದಿಯ ತಟದಲ್ಲಿದ್ದ ಶಿಲಾಪಟ್ಟದ ಮೇಲೆ ಅತಾಪಯೋಗಸ್ಥನಾದನು.

ಕ್ರಿ.ಪೂ. ೫೫೭ರ ವೈಶಾಖ ಶುದ್ಧ ದಶಮಿಯ ಆ ದಿನ ನೆರಳು ಪಾದ ಪ್ರಮಾಣವಾಗಿದ್ದ ಮಧ್ಯಾಹ್ನದ ಸಮಯಕ್ಕೆ ಭಗವಾನ್ ಮಹಾವೀರನು ಕ್ಷಪಕಶ್ರೇಣ್ಯಾರೂಢನಾಗಿ ನಾಲ್ಕು ಘಾತಿಕರ್ಮಗಳನ್ನು ನಿರ್ಮೂಲಗೊಳಿಸಿ ಕೇವಲಜ್ಞಾನಸಂಪನ್ನನಾಗಿ ಸಮ ವಸರಣದಲ್ಲಿ ವಿರಾಜಮಾನನಾದನು.

ಅದೊಂದು ವೈಚಿತ್ರ್ಯ : ಸಮವಸರಣದ ರಚನೆಯಾದ ಅನಂತರವೂ ದಿವ್ಯಧ್ವನಿ ಹೊರಡಲಿಲ್ಲ ; ಭಗವಂತನು ಅರವತ್ತಾರು ದಿನಗಳ ಕಾಲ ಮೌನ ವಿಹಾರ ನಡೆಸಿದನು. ವಿಹಾರ ಮಾಡುತ್ತ ಒಂದು ದಿನ ಭಗವಂತನು. ವಗಧದೇಶದ ರಾಜಧಾನಿಯಾಗಿದ್ದ ರಾಜಗೃಹದ ಬಳಿಯ ವಿಪುಲಾಚಲದ ಮೇಲೆ ನಿಂತನು. ಈ ಸಮಯದಲ್ಲಿ ಷಡಂಗ ಸಹಿತನಾದ ಚತುರ್ವೇದ ಪಾರಂಗತನೂ ಶೀಲವಂತನೂ ಗೊತ್ರದಿಂದ ಗೌತಮ ವಿಪ್ರನೂ. ಬ್ರಾಹ್ಮಣೋತ್ತಮನೂ ಆದ ಇಂದ್ರಭೂತಿಯು ಗೌತಮಗ್ರಾಮದಲ್ಲಿ ಐದುನೂರು ಶಿಷ್ಯರಿಗೆ ವೇದ ವೇದಾಂಗದ ಅಧ್ಯಯನ ಮಾಡಿಸುತ್ತಿರುತ್ತಾನೆ. ಇವನಲ್ಲಿಗೆ ಸುತ್ರಾಮನು ಕಬಲಿಕಾಛಾತ್ರ ವೇಷದಿಂದ ಬಂದು ಗೌತಮನ ವ್ಯಾಖ್ಯಾನವನ್ನು ಕೇಳುತ್ತಾ ಸೌನಾಸಿಕಾಗ್ರಭಂಗದಿಂದ ತನ್ನ ಅರುಚಿಯನ್ನು ವ್ಯಕ್ತಪಡಿಸುತ್ತಿರುತ್ತಾನೆ. ಇದನ್ನು ಗಮನಿಸಿದ ಶಿಷ್ಯರು ತಮ್ಮ ಗುರುವಿಗೆ ತಿಳಿಸುತ್ತಾರೆ. ಆಗ ಇಂದ್ರಭೂತಿ ಗೌತಮನು 'ಶಾಸ್ತ್ರಗಳೆಲ್ಲನ್ನೂ ಕರತಲಾ ಮಲಕದಂತಾಗಿಸಿಕೊಂಡಿರುವ ಮತ್ತು ವಾದಿಗಳೆಲ್ಲರನ್ನೂ ನಷ್ಟ ದುಷ್ಟಮದರನ್ನಾಗಿಸಿ ಆಶ್ರಿತರನ್ನಾಗಿಸಿಕೊಂಡಿರುವ ನನ್ನ  ವ್ಯಾಖ್ಯಾನ ನಿನಗೆ ಏಕೆ ರುಚಿಸದು ?' ಎಂದು ಕೇಳುತ್ತಾನೆ. ಆಗ ಸುತ್ರಾಮನು ಎಲ್ಲಾ ಶಾಸ್ತ್ರತತ್ವಗಳನ್ನೂ ತಿಳಿದಿದ್ದಲ್ಲಿ ಈ ಆರ್ಯೆಯ ಅರ್ಥ ಹೇಳಿ' ಎಂದು ಈ ಮುಂದಿನಂತೆ ಹೇಳುತ್ತಾನೆ.

ಷಡ್ ದ್ರವ–ನವಪದಾರ್ಥ–ತ್ರಿಕಾಲ– ಪಂಚಾಸ್ತಿಕಾಯ– ಷಟ್ಕಾಯಾನ್।

ವಿದುಷಾಂವರಸ್ಸ ಏವ ಹಿಯೋ ಜಾನಾತಿ ಪ್ರಮಾಣ ನಯೈಃ॥

ಇಂದ್ರಭೂತಿಯು, ಸುತ್ರಾಮನ ಗುರುವಾದ, ವರ್ಧಮಾನ ಸ್ವಾಮಿಯೊಡನೆಯೇವಾದ ಮಾಡುವುದಾಗಿ ಹೇಳಿ ವಾಯುಭೂತಿ ಮತ್ತು ಅಗ್ನಿಭೂತಿ ಎಂಬ ತನ್ನ ಭ್ರಾತೃಗಳೊಡಗೂಡಿ ಸಮವಸರಣಕ್ಕೆ ಬರುತ್ತಾನೆ. ಅಲ್ಲಿ ಮಾನಸ್ತಂಭದ ದರ್ಶನದಿಂದಲೇ ಇಂದ್ರಭೂತಿಯ ಮಾನಕಷಾಯ ಕಳಚಿ ಹೋಗುತ್ತದೆ. ಅನಂತರ ಭಗವಂತನ ಬಳಿ ಸಾರಿ ಮುನಿದೀಕ್ಷಾಸಂಪನ್ನನಾಗಿ ಸಪ್ತಋದ್ಧಿ ಸಂಪನ್ನನಾಗಿ ಗಣಧರ ಪದವಿಯನ್ನಲಂಕರಿಸಿದನು.

ಅಥ ಭಗವನ್ ಕಿಂ ಜೀವೋಸ್ತಿ ನಾಸ್ತಿ ವಾ ಕಿಂ ಗುಣಃ ಕಿಯಾನ್ ಕೀದೃಗಿತ್ಯಾದಿ।

ಷಷ್ಟಿಸಹಸ್ರಪ್ರಮಿತಂ ತದ್ಗಣೇಟ್ ಪ್ರಶ್ನಪರ್ಯಂತೇ॥

ಬಳಿಕ, ಭಗವಂತನೆ, ಏನು ಜೀವನಿದ್ದಾನೆಯೆ, ವಾ, ಇಲ್ಲವೆ ಅವನ ಗುಣವೇನು ಅವು ಎಷ್ಟು, ಅವನು ಎಂತಹವನು, ಎಂದು ಮುಂತಾದ ಅರವತ್ತು ಸಾವಿರ ಪ್ರಮಿತವಾದ ಗಣಾಧೀಶನ ಪ್ರಶ್ನೆಗಳ ಕೊನೆಗೆ ದಿವ್ಯಧ್ವನಿಯ ಮೂಲಕ ಭಗವಂತನು ಉತ್ತರ ಹೇಳಿದನು, ಇದು ಭಗವಾನ್ ಮಹಾವೀರರ ಧರ್ಮಾತೀರ್ಥದ ಉತ್ಪತ್ತಿ :

ವಾಸಸ್ಸ ಪಢಮಮಾಸೇ ಪಢಮೇ ಪಕ್ಖಮ್ಹಿ ಸಾವಣೇ ಬಹುಲೇ।

ಪಾಡಿವದಪುವ್ವದಿವಸೇ ತಿತ್ಥುಪ್ಪತ್ತೀದು ಅಭಿಜಿಮ್ಹಿ ॥ ೫೬॥

(ಷ.ಆ. ಧವಲಾ, ಸತ್ ೧ ಪು. ೬೩)

ವರ್ಷದ ಮೊದಲನೆ ತಿಂಗಳಾದ ಶ್ರಾವಣ ಮಾಸದ ಪ್ರಥಮ ಪಕ್ಷ ಬಹುಲದ (ಕೃಷ್ಣಪಕ್ಷದ) ಪಾಡ್ಯ ತಿಥಿಯ ಬೆಳಗಿನ ಸಮಯದಲ್ಲಿ ಅಭಿಜಿತ್ ನಕ್ಷತ್ರದಲ್ಲಿ ಧರ್ಮತೀರ್ಥದ ಉತ್ಪತ್ತಿಯಾಯಿತು.

ಶ್ರಾವಣ್ಯ–ಬಹುಳ–ಪ್ರತಿಪದುದಿತೇರ್ಕೇ ರುದ್ರನಾಮನಿ ಮುಹೂರ್ತೇ।

ಅಭಿಜಿತಿಗತೇ ಶಶಾಂಕೇ ತೀರ್ಥೋತ್ಪತ್ತಿ ರ್ಬಭೂವ ಗುರೋಃ ॥೬೫॥(ಶ್ರುತಾವತಾರ)

ಶ್ರಾವಣ ಮಾಸ ಬಹುಳ ಪಕ್ಷ ಪಾಡ್ಯದಂದು ಸೂರ್ಯೋದಯವಾಗಿರಲು ರುದ್ರ ಮುಹೂರ್ತದಲ್ಲಿ. ಚಂದ್ರನು ಅಭಿಜಿತ್ ನಕ್ಷತ್ರದಲ್ಲಿರುವಾಗ ಗುರುವಿನಿಂದ ಧರ್ಮ ತೀರ್ಥದುತ್ಪತ್ತಿಯಾಯಿತು.

ಸುವಣಬಹುಲಪಡಿವದೇ ರುದ್ದಮುಹೂತ್ತೇ ಸುಹೋದಏ ರವಿಣೋ।

ಅಭಿಜಿಸ್ಸ ಪಢಮಜೋಏ ಜತ್ಥ ಜುಗಾದೀ ಮುಣೇಯವ್ವೋ॥ ೫೭ ॥ (ಧವಲಾ. ಪು. ೬೩)

ಯಾವ ಸಮಯದಲ್ಲಿ ಯುಗಾದಿಯಾಗಿದ್ದಿತೋ ಆ ಶ್ರಾವಣ ಬಹುಲ ಪಾಡ್ಯದಲ್ಲಿ ರುದ್ರಮುಹೂರ್ತದಲ್ಲಿ ಸೂರ್ಯನ ಶುಭುಉದಯದಲ್ಲಿ ಅಭಿಜಿತ್ ನಕ್ಷತ್ರದ ಪ್ರಥಮ ಯೋಗದಲ್ಲಿ ಧರ್ಮತೀರ್ಥದ ಉತ್ಪತ್ತಿಯಾಯಿತು.

ಭಗವಂತನ ದಿವ್ಯವಾಣಿಯಿಂದ ಭಾವಶ್ರುತಪರ್ಯಾಯಪರಿಣತನಾದ ಗೌತಮ ಇಂದ್ರಭೂತಿಗಣಧರನಿಂದ ಹನ್ನೆರಡು ಅಂಗ ಚತುರ್ದಶಪೂರ್ವಗಳ ಗ್ರಂಥಗಳು ಅದೇ ದಿನ ಮಧ್ಯಾಹ್ನ ಒಂದು ಮುಹೂರ್ತದಲ್ಲಿಯೇ ರಚಿತವಾದುವು. ಈ ಶ್ರುತವನ್ನು ತನ್ನ ಸಧರ್ಮನಾದ ಸುಧರ್ಮನಿಗೆ ಪ್ರತಿಪಾದನೆ ಮಾಡಿದನು.

ಭಗವಾನ್ ಮಹಾವೀರನು ಕೇವಲಜ್ಞಾನೋತ್ಪತ್ತಿಯ ಬಳಿಕ ಇಪ್ಪತ್ತೊಂಭತ್ತು ವರ್ಷ, ಐದು ತಿಂಗಳು ಮತ್ತು ಇಪ್ಪತ್ತು ದಿನಗಳ ಕಾಲ ನಾಲ್ಕು ಪ್ರಕಾರದ ಅನಗಾರರೊಡಗೊಂಡ ಹನ್ನೆರೆಡುಗಣಸಹಿತ ವಿಹಾರ ಮಾಡಿ ಭವ್ಯಜನಕ್ಕೆ ಧರ್ಮ ಬೋಧೆ ಮಾಡಿದನು. ಅಂತಿಮವಾಗಿ ಕ್ರಿ. ಪೂ. ೫೨೮ರಲ್ಲಿ(ಕ್ರಿ. ಪೂ. ದ ೫೨೭ವರ್ಷಮತ್ತು ೨ ತಿಂಗಳುಗಳ ಪರಿಧಿಯ) ಕಾರ್ತಿಕ ಮಾಸ, ಕೃಷ್ಣ ಪಕ್ಷ. ಚತುರ್ದಶೀ ರಾತ್ರಿ ಸ್ವಾತೀ ನಕ್ಷತ್ರ ಕೂಡಿರುವಲ್ಲಿ ಪಾವಾಪುರದಲ್ಲಿ ನಾಲ್ಕು ಅಘಾತಿಕರ್ಮಗಳನ್ನು ನಿರ್ಮೂಲಗೊಳಿಸಿ ನಿರ್ವಾಣ ಸಿದ್ಧಿ ಪಡೆದನು. (ಈ ನಿರ್ವಾಣ ಕಾಲದ ಬಗ್ಗೆ ಪರಿಶಿಷ್ಟ ೨ ನೋಡಿ).

ಭಗವಾನ್ ಮಹಾವೀರನು ನಿರ್ವಾಣ ಹೊಂದಿದ ದಿನದಂದೇ ಗೌತಮಗಣಧರನು ಕೇವಲಜ್ಞಾನಸಂಪನ್ನನಾದನು. ಇವನು ಹನ್ನೆರಡು ವರ್ಷಕಾಲ ವಿಹಾರಮಾಡಿ ನಿರ್ಮಾಣ ಹೊಂದಿದನು. ಅದೇ ಸಮಯದಲ್ಲಿ ಗಣಧರ ಸುಧರ್ಮಸ್ವಾಮಿಯು ಕೇವಲಜ್ಞಾನ ಸಂಪನ್ನನಾದನು. ಸುಧರ್ಮ ಸ್ವಾಮಿಯಿಂದ ಶ್ರುತಬೋಧೆ ಹೊಂದಿದ ಜಂಬೂ ಸ್ವಾಮಿಯು ಶ್ರುತಧರರಲ್ಲಿ ಪ್ರಧಾನನಾದನು. ಸುಧರ್ಮಸ್ವಾಮಿಯು ಕೇವಲಜ್ಞಾನಿಯಾಗಿ ಹನ್ನೆರಡು ವರ್ಷಕಾಲ ವಿಹಾರ ನಡೆಸಿ ಮೋಕ್ಷಸಿದ್ಧಿ ಪಡೆದನು ಅದೇ ಸಮಯದಲ್ಲಿ ಕೇವಲಜ್ಞಾನ ಸಂಪನ್ನನಾದ ಜಂಬೂಸ್ವಾಮಿಯು ಮೂವ್ವತ್ತೆಂಟು ವರ್ಷಕಾಲ ವಿಹಾರ ಮಾಡಿ ಮುಕ್ತಿ ಪದವಿ ಹೊಂದಿದನು. ಹೀಗೆ ಭಗವಾನ್ ಮಹಾವೀರನ ನಿರ್ವಾಣಾನಂತರದ ಅರವತ್ತೆರಡು ವರ್ಷಗಳ ಅವಧಿಯಲ್ಲಿ ಗೌತಮ ಇಂದ್ರಭೂತಿ

ಗಣಧರ, ಸುಧರ್ಮಸ್ವಾಮಿ ಮತ್ತು ಜಂಬೂಸ್ವಾಮಿ ಎಂಬ ಮೂವರು ಅನುಬದ್ಧ ಕೇವಲಿಗಳಾದರು. ಈ ಭರತಕ್ಷೇತ್ರದಲ್ಲಿ ಜಂಬೂಸ್ವಾಮಿಯ ಮುಕ್ತಿಯೊಡನೆ ಕೇವಲಜ್ಞಾನಧರರ ಪರಂಪರೆ ಕೊನೆಗೊಂಡಿತು.

ಭಗವಾನ್ ಮಹಾವೀರನ ಅನಂತರಕಾಲದ ಶ್ರುತಧರ– ಆಚಾರ್ಯಾನುಕ್ರಮದ ಐತಿಹಾಸಿಕ ಸಾಹಿತ್ಯವಿದೆಯೆ? ಇದ್ದಲ್ಲಿ ಅದರ ವಿಶ್ವಾಸಾರ್ಹತೆ ಹೇಗೆ? ಎಂದು ಮುಂತಾದ ಪ್ರಶ್ನೆಗಳು ಮೂಡುವುದು ಸಹಜ. ಆದರಿಂದ ಈ ಬಗ್ಗೆ ಈಗ ವಿವೇಚನೆ ಮಾಡಬೇಕಾದ ಅಗತ್ಯವಿದೆ.

ಪ್ರೊ.ಎ.ಎಫ್. ರುಡೋಲ್ಫ್ ಹೊಎರ್ನಲ್ ಅವರು ‘ಇಂಡಿಯನ್ ಆಂಟಿಕ್ವೆರಿ ೪’ ಯಲ್ಲಿ ‘ದಿ ಪಟ್ಟಾವಲಿಸ್ ಆಫ್ ದಿ ಸರಸ್ವತೀಗಚ್ಛ’ ಎಂಬ ಹೆಸರಿನಲ್ಲಿ ಎ,ಬಿ,ಸಿ, ಡಿ, ಮತ್ತು ಇ ಎಂಬ ಸಂಕೇತಗಳೊಡನೆ ಐದು ಪಟ್ಟಾವಲಿಗಳನ್ನು ಪ್ರಕಟಪಡಿಸಿದ್ದಾರೆ. ಇವುಗಳಲ್ಲಿ ‘ಸಿ’ ಯು ಸು. ೧೪೫೦ ರಲ್ಲಿ ರಚಿತವಾದುದಾಗಿದ್ದು ಇನ್ನಿತರ ಪಟ್ಟಾವಲಿ ಗಳಿಗಿಂತ ಪ್ರಾಚೀನತರವಾಗಿದೆ. ಇವುಗಳಲ್ಲಿ ಭಗವಾನ್ ಮಹಾವೀರನ ನಿರ್ವಾಣಾ ನಂತರ ಆರು ನೂರ ಎಂಭತ್ತಮೂರು ವರ್ಷಗಳ ಅವಧಿಯಲ್ಲಿ ಆದ ಶ್ರುತಧರ ಆಚಾರ್ಯ ಅನುಕ್ರಮವನ್ನೂ ಅವರ ಪಟ್ಟಕಾಲವನ್ನೂ ಪ್ರಾಕೃತಗಾಹೆಗಳಲ್ಲಿ ಹೇಳಿದೆ. ಮುಂದಿನ ಆಚಾರ್ಯಾನುಕ್ರಮ ಹಾಗೂ ಅವರಿಗೆ ಸಂಬಂಧಿಸಿದ ಮತ್ತಿತರ ಸಂಗತಿಗಳ ಕಾಲಗಣನೆಯನ್ನು ಚೌಕಟ್ಟಿನಲ್ಲಿ (ಟೇಬಲ್ ಫಾರಂನಲ್ಲಿ) ಕೊಟ್ಟಿದೆ. ಈ ಪಟ್ಟಾವಲಿಗಳ ರಚನಾ ಕಾಲ ಕ್ರಿ. ಶ. ಸುಮಾರು ಹದಿನಾಲ್ಕನೇ ಶತಮಾಮಕ್ಕಿಂತ ಹಿಂದೆ ಹೋಗುವುದಿಲ್ಲ. ಪ್ರಾಚೀನ ಕಾಲದ ಈ ಐತಿಹಾಸಿಕತೆಯ ಪ್ರಾಮಾಣಿಕತೆಯನ್ನು ಶಂಕಿಸುವುದು ಸಹಜ ೫ ! ಈ ಬಗ್ಗೆ ಒಂದು ವಿವರಣೆಯ ಅಗತ್ಯವಿದೆ. ಪಟ್ಟಾವಲಿಗಳಲ್ಲಿ ಹೇಳಲಾಗಿರುವ ಪ್ರಾಚೀನ ಶ್ರುತಧರ ಆಚಾರ್ಯ ಪರಂಪರೆ ಬಗ್ಗೆ ಹಾಗೂ ಇತರ ಕುಂದಕುಂದರೇ ಮುಂತಾದ ಅನೇಕ ಆಚಾರ್ಯರ ಬಗ್ಗೆ. ಈ ಪಟ್ಟಾವಲಿಗಳಿಂದ ಪೂರ್ವಕಾಲೀನವಾಗಿರುವ ಶಾಸನಗಳೇ ಮುಂತಾದ ದಾಖಲಾತಿಗಳು ದೊರೆಯುತ್ತವೆ. ಉದಾಹರಣೆಯಾಗಿ ಶ್ರವಣಬೆಳಗುಳದ ಅನೇಕ ಶಾಸನಗಳಲ್ಲಿ ಆಚಾರ್ಯನುಕ್ರಮದ ಪ್ರಸ್ತುತಿ ಇದೆ. ಇವುಗಳಲ್ಲಿ ನಾಲ್ಕು ಶಾಸನಗಳು ಕ್ರಿ. ಶ. ೧೨ನೇ ಶತಮಾನದವುಗಳು. ೬ ಇಷ್ಟು ಮಾತ್ರವಲ್ಲ. ಶ್ರವಣಬೆಳಗುಳದ. ಕನಿಷ್ಠ ಮಿತಿಯಿಂದ ೬ನೇ ಶತಮಾನದ್ದೆಂದು ಪರಿಗಣಿತವಾಗಿರುವ ೧ನೇ

ಶಾಸನದಲ್ಲಿ ಭ. ಮಹಾವೀರನ ನಿರ್ವಾಣಾನಂತರದ ಗೌತಮಾದಿ ಮೂವರು ಕೇವಲಿಗಳು, ವಿಷ್ಣು ಮೊದಲಾದ ಐವರು ಶ್ರುತಕೇವಲಿಗಳು ಹಾಗೂ ಇವರ ಅನಂತರ ಕಾಲೀನರಾದ ವಿಶಾಖಾರ್ಯಾದಿ ಒಂಭತ್ತು ದಶಪೂರ್ವಿಗಳ ಅನುಕ್ರಮ ಕಂಡರಿಸಲ್ಪಟ್ಟಿದೆಯಲ್ಲದೆ ಮುಂದೆ 'ಭದ್ರಬಾಹು' ಮತ್ತು ಪ್ರಭಾಚಂದ್ರರ ಹೆಸರುಗಳಿವೆ. ಈ ಶಾಸನಗಳಲ್ಲದೆ, ಶ್ರುತಾವತಾರ, ಮಹಾಪುರಾಣ (ಪೂರ್ವಪುರಾಣ ಮತ್ತು ಉತ್ತರಪುರಾಣ), ಹರಿವಂಶಪುರಾಣ, ಷಟ್ ಖಂಡಾಗಮದ ಧವಲಾ ಟೀಕೆಗಳಲ್ಲಿಯೂ ಶ್ರುತಧರ ಆಚಾರ್ಯ ಸಂತತಿ ಮತ್ತು ಇತರ ಅಚಾರ್ಯನುಕ್ರಮವು ಉಕ್ತವಾಗಿದೆ. ಇದಲ್ಲದೆ ಕನಿಷ್ಠಮಿತಿಯಿಂದ ಕ್ರಿ. ಶ. ೨ನೇ ಶತಮಾನದಲ್ಲಿ ಜೀವಿಸಿದ್ದ ಕುಂದಕುಂದಾಚಾರ್ಯರು, ಪ್ರಾಸಂಗಿಕವಾಗಿ ತಮ್ಮ ಬೋಧಪಾಹುಡದಲ್ಲಿ 'ಭದ್ರಬಾಹು' ಎಂಬ ಹೆಸರಿನ ಇಬ್ಬರು ಆಚಾರ್ಯರನ್ನು ಹೆಸರಿಸಿರುವುದು ಪ್ರಸ್ತುತದಲ್ಲಿ ಗಮನಾರ್ಹವಾಗಿದೆ. ಈ ಸಾಕ್ಷ್ಯಾಧಾರಗಳಿಂದ ಶ್ರುತಧರ ಆಚಾರ್ಯರ ಅನುಕ್ರಮ ಮತ್ತು ಇತರ ಅಚಾರ್ಯರ ಅನುಕ್ರಮವನ್ನು ಗುರುತಿಸಲಾಗಿದ್ದ ಸಾಹಿತ್ಯ ಕಾಲಾನು ಕ್ರಮದಲ್ಲಿ ರಚಿತವಾಗುತ್ತಿದ್ದು ಅಂತಹ ಸಹಿತ್ಯದ ಆಧಾರದಿಂದ ಪಟ್ಟಾವಲಿಗಳ ರಚನೆಯಾಗಿದೆಯೆಂದು ಮತ್ತು ಈ ಪಟ್ಟಾವಲಿಗಳಲ್ಲಿ ಹೇಳಲಾಗಿರುವ ವಿಷಯವು ಕೇವಲ ಕಲ್ಪನೆಯದಾಗಿರದೆ ಐತಿಹಾಸಿಕ ದಾಖಲಾತಿಯಾಗಿದೆಯೆಂದು ಪರಿಗ್ರಹಿಸ ಬೇಕಾಗುವುದು. ಇಷ್ಟಾದರೂ ಈ ಪಟ್ಟಾವಲಿಗಳಲ್ಲಿ ಹೇಳಿರುವುದೆಲ್ಲವೂ ದೋಷ ರಹಿತವಾಗಿದೆಯೆಂದೇನೂ ಹೇಳುವಂತಿಲ್ಲ. ಏಕೈಕ ನಂದಿ ಅಮ್ನಾಯದ ವಿಷಯವನ್ನು ಪ್ರರೂಪಿಸುವ ಐದು ಪದ್ಧತಿಯ ಪಟ್ಟಾವಲಿಗಳದ್ದು ಇವುಗಳ ಮಧ್ಯೆ ಸಾಧಾರಣವಾಗಿ ಸಹಮತವಿರುವುದಾದರೂ ಅಲ್ಲಲ್ಲಿ ಮತಭೇದಗಳೂ ಇವೆ. ಆದ್ದರಿಂದ ಇತರ ಆಧಾರಗಳ ಸಮೀಕ್ಷೆಯೊಡನೆ, ವಿವೇಚನೆಯೊಡನೆ ಇವುಗಳಲ್ಲಿರುವ ವಿಷಯದ ತಥ್ಯ ನಿರ್ಣಯ ಮಾಡಿಕೊಳ್ಳಬೇಕಾದ ಅಗತ್ಯವಿದೆ. ಉಪಲಬ್ಧವಿರವ ಆಧಾರಗಳಿಂದ ಪರಿಷ್ಕರಣ ಮಾಡಲಾದ ೭ ಶ್ರುತಧರ ಆಚಾರ್ಯನುಕ್ರಮವು ಮುಂದಿನಂತಿದೆ.

ಭ. ಮಹಾವೀರನ ನಿರ್ವಾಣಾನಂತರ ಅರವತ್ತೆರಡು ವರ್ಷಗಳ ಅವದಿಯಲ್ಲಿದ್ದ ಗೌತಮಗಣಧರ, ಸುಧರ್ಮಸ್ವಾಮಿ ಮತ್ತು ಜಂಬೂಸ್ವಾಮಿ– ಈ ಮೂವರು ಅನುಬದ್ದ ಕೇವಲಿಗಳ ಅನುಕ್ರಮವನ್ನು ಹಿಂದೆ ತಿಳಿಸಿದೆ. ಜಂಬೂಸ್ವಾಮಿಯವರು ಮುಕ್ತಿಗೆ ಸಂದ ಸಮಯದಾದಿಯಾಗಿ

ಒಂದುನೂರು ವರ್ಷಗಳ ಅವಧಿಯಲ್ಲಿ ವಿಷ್ಣು, ದೇವ ೮ ಅಪರಾಜಿತ, ಗೋವರ್ಧನ ಮತ್ತು ಭಾದ್ರಬಾಹು ಎಂಬ ಐವರು ಅನುಬದ್ಧ ದ್ವಾದ ಶಾಂಗ ಚತುರ್ದಶಪೂರ್ವಿಗಳಾದರು.೯ ಇವರು ಅತ್ಯಂತ ವಿಶಾಲವಾದ ಚತುರ್ದಶ ಪೂರ್ವಗಳಿಂದೊಡಗೂಡಿದ ಸಮಸ್ತ ದ್ವಾದಶಾಂಗವನ್ನು ಯಾವುದೇ ರೀತಿಯದಾದ ಚ್ಯುತಿಯಿಲ್ಲದೆ, ಪದಶಃ ಮತ್ತು ಅರ್ಥಶಃ ಪರಿಪೂರ್ಣವಾಗಿ ತಿಳಿದಿದ್ದರು ಇವರನ್ನು 'ಶ್ರುತಕೇವಲಿ' ಗಳೆಂದು ಹೆಸರಿಸುವ ರೂಢಿಯೂ ಇದೆ.

ಶ್ರುತಕೇವಲಿ ಭದ್ರಬಾಹು ಸ್ವಾಮಿಯವರ ತರುವಾಯ ೧೮೩ ವರ್ಷಗಳ ಅವಧಿಯಲ್ಲಿ ವಿಶಾಖ, ಪ್ರೋಷ್ಠಿಲ, ಕ್ಷತ್ರಿಯ, ಆರ್ಯ, ಜಯ, ನಾಗ (ಅಥವಾ ನಾಮ), ಸಿದ್ಧಾರ್ಥ, ದೃತಿಸೇನ ಮತ್ತು ಬುದ್ಧಿಲಿಂಗ ಎಂಬ ಒಂಭತ್ತು ದಶಪೂರ್ವಿ ಆಚಾರ್ಯರಾದರು.೧೦ ಈ ದಶಪೂರ್ವಿಗಳ ಬಗ್ಗೆ ಒಂದು ವಿವರಣೆಯ ಅಗತ್ಯವಿದೆ. ಹನ್ನೆರಡನೆಯ ದೃಷ್ಟಿವಾದಾಂಗದಲ್ಲಿ ಅಂತರ್ಗತವಾಗಿರುವ ಹದಿನಲ್ಕು ಪೂರ್ವಗಳಲ್ಲಿ ಹತ್ತು ಪೂರ್ವಗಳ ಪರ್ಯಂತದ ಶ್ರುತವನ್ನು ಅಭಿನ್ನರೀತಿಯಿಂದ ಎಂದರೆ ಯಾವ ನ್ಯೂನತೆಯಿಲ್ಲದೆ ಪದಶಃ ಅರ್ಥಶಃ ತಿಳಿದವರು ಇವರು. ಆದ್ದರಿಂದ ಇವರನ್ನು ಅಭಿನ್ನದಶ ಪೂರ್ವಿಗಳೆಂದು ನಿರ್ದೇಶಿಸುವ ರೂಢಿಯಿದೆ. ಇವರು ದಶಪೂರ್ವಗಳ ಪರ್ಯಂತದ ಪೂರ್ಣ ಶ್ರುತವನ್ನು ತಿಳಿದಿದ್ದಲ್ಲದೆ, ದಶಪೂರ್ವಗಳ ಅನಂತರದ ನಾಲ್ಕು ಪೂರ್ವಗಳು ಮತ್ತು ಚೂಲಿಕೆಗಳನ್ನೂ ಏಕದೇಶರೀತಿಯಿಂದ ಎಂದರೆ, ಭಾಗಶಃ ತಿಳಿದಿದ್ದರು.

ಪ್ರಸ್ತುತ ಪ್ರಸಂಗದಲ್ಲಿ ಚತುರ್ದಶಪೂರ್ವಿ ಶ್ರುತಕೇವಲಿಗಳು ಮತ್ತು ದಶಪೂರ್ವಿಗಳನ್ನು ಕುರಿತಂತೆ ಸ್ವಲ್ಪ ವಿಶೇಷ ವಿವರಣೆ ಕೊಡಬೇಕಾಗಿದೆ.೧೧ ವೇದನಾಖಂಡದ ಮೊದಲಲ್ಲಿರುವ ಮಂಗಲಾಚರಣವು ಸ್ವತಃ ಇಂದ್ರಭೂತಿ ಗೌತಮ ಗಣಧರನಿಂದ ರಚಿತವಾಗಿದ್ದು ಮಹಾಕಮ್ಮ ಪಯಡಿ ಪಾಹುಡದ ಆದಿಯಲ್ಲಿ ನಿಬದ್ಧವಾಗಿದ್ದಿತೆಂದು ಹೇಳಿದೆ. ಅಲ್ಲಿಂದ ಇದನ್ನು ಯಥಾವತ್ತಾಗಿ ತೆಗೆದು ಭೂತಬಲಿ ಆಚಾರ್ಯನು ವೇದನಾ ಖಂಡದ ಮೊದಲಲ್ಲಿರಿಸಿದನು, ಎಂದು ಧವಲಾಕಾರರಿಂದ ಸುಚಿತವಾಗಿದೆ. ಈ ಮಂಗಲಾಚರಣದಲ್ಲಿ ನಲವತ್ತನಾಲ್ಕು ನಮಸ್ಕಾರಾತ್ಮಕ ಸೂತ್ರ ಯಾ ವಾಕ್ಯಗಳಿವೆ. ಇವುಗಳಲ್ಲಿ ಹನ್ನೆರಡನೆಯ ಮತ್ತು ಹದಿಮೂರನೆಯ ಸೂತ್ರಗಳಲ್ಲಿ

ಅನುಕ್ರಮವಾಗಿ ದಶಪೂರ್ವಿಗಳಿಗೆ ಮತ್ತು ಚತುರ್ದಶ ಪೂರ್ವಿಗಳಿಗೆ ಬೇರೆ ಬೇರೆಯಾಗಿ 'ಣಮೋದಸ ಪುವ್ವಿಯಾಣಂ' 'ಣಮೋಚೊದ್ದಸಪುವ್ವಿಯಾಣಂ' ಎಂದು ನಮಸ್ಕಾರ ಮಾಡಲಾಗಿದೆ.

ಇದರ ಅಂತರಾರ್ಥವು, ಧವಲಾಕಾರರ ವಿವರಣೆಯನುಗುಣ ಸಂಗ್ರಹವಾಗಿ ಮುಂದಿನಂತಿದೆ. ಶ್ರುತಪಾಠಿಯು ಆಚಾರಾಂಗಾದಿ ಹನ್ನೊಂದು ಅಂಗಗಳ ಅಧ್ಯಯನವನ್ನು ಪೂರಯಿಸಿ ಮುಂದೆ ಪರಿಕರ್ಮ, ಸೂತ್ರ ಪ್ರಥಮಾನುಯೋಗ, ಪೂರ್ವಗತ ಮತ್ತೂ ಚೂಲಿಕಾ ಎಂಬ ಐದು ಅಧಿಕಾರಗಳುಳ್ಳ ಹನ್ನೆರಡನೆಯ ದೃಷ್ಟಿ ವಾದಾಂಗದ ಅಧ್ಯಯನ ನಡೆಸುವಲ್ಲಿ ಕ್ರಮದಿಂದ ಉತ್ಪಾದ ಮೊದಲಾದ ಪೂರ್ವಗಳ ಪಠನ ಮಾಡುತ್ತಾ ಹತ್ತನೆಯದಾದ ವಿದ್ಯಾನುವಾದ ಪ್ರವಾದ ಪೂರ್ವದ ಪಠನವನ್ನು ಪೂರ್ಣಗೊಳಿಸುವನು. ಆಗ ರೋಹಿಣೀ ಮುಂತಾದ ಐದುನೂರು ಮಹಾ ವಿದ್ಯೆಗಳು ಮತ್ತು ಅಂಗುಷ್ಠ ಸೇನಾದಿ ಏಳುನೂರು ಅಲ್ಪ ವಿದ್ಯೆಗಳು ಬಂದು 'ಎಲೈ ಭಗವಂತನೆ ಏನಪ್ಪಣೆ' ಎಂದು ಕೇಳುತ್ತವೆ. ಈ ಸನ್ನಿವೇಶದಲ್ಲಿ ಲೋಭವಶನಾಗುವಂತಹವನು 'ಭಿನ್ನದಶಪೂರ್ವೀ' ಎನ್ನಿಸಿಕೊಳ್ಳುವನು, ಹಾಗಲ್ಲದೆ ಲೋಭವಶನಾಗದಿದ್ದು ಕರ್ಮ ಕ್ಷಯಾರ್ಥಿಯಾಗಿರುವವನು 'ಅಭಿನ್ನದಶಪೂರ್ವೀ' ಎನಿಸುವನು. ಈ ಅಭಿನ್ನದಶ ಪೂರ್ವಿಗಳೇ 'ಜಿನ' ಸಂಜ್ಞೆಯನ್ನು ಹೊಂದುವರು ಮತ್ತು ಅವರಿಗೇ ಇಲ್ಲಿ ನಮಸ್ಕಾರ ಮಾಡಲಾಗಿದೆ. ಆದರೆ ಮಹಾವ್ರತಗಳನ್ನು ಭಂಗಮಾಡಿಕೊಳ್ಳುವ ಕಾರಣದಿಂದ 'ಜಿನ' ಸಂಜ್ಞೆ ಹೊಂದದಿರುವವರಿಗೆ ನಮಸ್ಕಾರ ಮಾಡಲಾಗುವುದಿಲ್ಲ.

ಇಲ್ಲೊಂದು ಪ್ರಶ್ನೆಯಿದೆ : ದಶಪೂರ್ವಿಗಳಿಗೆ ಮತ್ತು ಚತುರ್ದಶಪೂರ್ವಿಗಳಿಗೆ ಪ್ರತ್ಯೇಕವಾಗಿ ನಮಸ್ಕಾರ ಹೇಳಿದೆ. ಆದರೆ ಮಧ್ಯವರ್ತಿಗಳಾದ ಹನ್ನೊಂದು, ಹನ್ನೆರಡು, ಹದಿಮೂರು ಪೂರ್ವಗಳ ಧಾರಕರಿಗೂ ಪ್ರತ್ಯೇಕವಾಗಿ ನಮಸ್ಕಾರ ಹೇಳಿಲ್ಲವೇಕೆ ? ಎಂಬುದು ಪ್ರಶ್ನೆ. ಇದಕ್ಕೆ ಉತ್ತರವಾಗಿ ಈ ಮಧ್ಯವರ್ತಿಪೂರ್ವಿಗಳೂ ಚತುರ್ದಶ ಪೂರ್ವಿಗಳಿಗೆ ಸಲ್ಲುವ ನಮಸ್ಕಾರದಲ್ಲಿ ಒಳಗೊಳ್ಳುವರು ಎಂದು ತಿಳಿಯಬೇಕು. ಇದಲ್ಲದೆ 'ಜಿನ' ಎಂಬ ಸಂಜ್ಞೆಯು ಹತ್ತನೆಯದಾದ ವಿದ್ಯಾನುವಾದ ಪ್ರವಾದ ಪೂರ್ವದ ಅಧ್ಯಯನ ಸಮಾಪ್ತಿಯಲ್ಲಿ ಸಲ್ಲುವಂತೆ ಹದಿನಾಲ್ಕು ಪೂರ್ವಗಳ ಅಧ್ಯಯನ ಸಮಾಪ್ತಿಯಲ್ಲಿ ಸಂಘಟಿತವಾಗುವುದು. ಹದಿನಲ್ಕು (ಚತುರ್ದಶ) ಪೂರ್ವಗಳ ಅಧ್ಯಯನವನ್ನು ಪೂರ್ಣಗೊಳಿಸಿ

ರಾತ್ರಿಯಲ್ಲಿ ಶ್ರುತಕೇವಲಿಯು ಕಾಯೋತ್ಸರ್ಗದಲ್ಲಿ ವಿರಾಜಮಾನರಾಗಿರಲು ಪ್ರಭಾತ ಸಮಯಕ್ಕೆ ಭವನವಾಸಿ ವಾಣವ್ಯಂತರ, ಜೊತಿಷ್ಕ ಮತ್ತು ಕಲ್ಪವಾಸೀ ದೇವತೆಗಳು ಬಂದು ಶಂಖತೂರ್ಯದೊಡನೆ ಮಹತ್ತರವಾಗಿ ಪೂಜಿಸುವರು. ಈ ರೀತಿಯಾಗಿ 'ಜಿನ' ವಚನದ ಅಪೇಕ್ಷೆಯಿಂದ ಎಲ್ಲ ಪೂರ್ವಗಳೂ ಸಮಾನತರವಾಗಿದ್ದರೂ ವಿದ್ಯಾನುವಾದ ಮತ್ತು ಲೋಕಬಿಂದುಸಾರಗಳ ಮಹತ್ವವು, ಇವುಗಳ ಸಂಪ್ರಾಪ್ತಿಯಲ್ಲಿ ಮಾತ್ರ ದೇವತೆಗಳಿಂದ ಪೂಜಿಸಲ್ಪಡುವ ಕಾರಣದಿಂದ, ವಿಶೇಷಪೂರ್ಣವಾಗಿದೆ. ಇದಲ್ಲದೆ ದಶಪೂರ್ವಿ ಮತ್ತು ಚತುರ್ದಶಪೂರ್ವಿ ಅವಸ್ಥೆಗಳ ಮಧ್ಯೆಯೂ ವಿಶೇಷವೊಂದಿದೆ : ಅದೇಂದರೆ, ಚತುರ್ದಶಪೂರ್ವಿಗಳು ಮರಳಿ ಮಿಥ್ಯಾ ತ್ವಕ್ಕೆ ಸಿಲುಕುವುದಿಲ್ಲವೆಂಬುದಲ್ಲದೆ ಆ ಭವದಲ್ಲಿ ಅಸಂಯಮಕ್ಕೂ ಒಳಗಾಗುವುದಿಲ್ಲ [೧೧]' ಇನ್ನು ಭಿನ್ನ ಮತ್ತು ಅಭಿನ್ನ ದಶಪೂರ್ವಿಗಳ ಮಧ್ಯೆ ಇರುವ ಭೇದವು ಧವಲಾ ಟೀಕಾಕಾರ ರಿಂದ ನಿರೂಪಿತವಾಗಿರುವಂತೆ ಸಂಗ್ರಹದಿಂದ ಮುಂದಿನಂತಿದೆ: "ಸವ್ಯಗ್ ದೃಷ್ಟಿಯಾದವನು ಪೂರ್ಣದಶಪೂರ್ವಗಳ ಅಧ್ಯಯನ ಮಾಡುವನು ಮತ್ತು ಮುಂದಿನ ಪೂರ್ವಗಳ ಅಧ್ಯಯನದಲ್ಲಿಯೂ ಮುಂದುವರಿಯುವನು; ಆದರೆ ಮಿಥ್ಯಾ ದೃಷ್ಟಿಯಾದವನು ದಶಪೂರ್ವಗಳ ಪೂರ್ಣತೆ ಮಾಡಲಾಗದೆ ಸ್ವಲ್ಪ ಕಡಿಮೆಯದಾಗಿ ಅಧ್ಯಯನ ಮಾಡುವನು, ಈ ರೀತಿಯಿಂದ ದಶಪೂರ್ವಗಳ ಪರಿಪೂರ್ಣ ಅಧ್ಯಯನ ಮಾಡಿದವರು ಅಭಿನ್ನ ದಶಪೂರ್ವಿ ಎಂದು ಮತ್ತು ಇದರ ಪೂರ್ಣ ಅಧ್ಯಯನ ಮಾಡಲಾಗದವರು ಭಿನ್ನದಶಪುರ್ವಿ ಎಂದೆನ್ನಿಸಿಕೊಳ್ಳುವರು."

ಹಿಂದೆ ಹೆಸರಿಸಿರುವ ದಶಪೂರ್ವಿಗಳ ಸಂತತಿಯ ಬಳಿಕ ಧರ್ಮಸೇನ, ನಕ್ಷತ್ರ, ಜಯಪಾಲಕ, ಪಾಂಡು, ಧ್ರುವಸೇನ ಮತ್ತು ಕಂಸ ಎಂಬ ಆರು ಆಚಾರ್ಯರು ಏಕಾದಶಾಂಗ ಶ್ರುತಧರರಾದರು. ಇವರು ಏಕಾದಶಾಂಗಗಳನ್ನು ಪರಿಪೂರ್ಣರೀತಿಯಿಂದ ತಿಳಿದಿದ್ದರಲ್ಲದೆ ಹನ್ನೆರಡನೆಯದಾದ ದೃಷ್ಟಿವಾದಾಂಗವನ್ನು ಏಕದೇಶ ರೀತಿಯಿಂದ ತಿಳಿದಿದ್ದರು. ಇವರ ಬಳಿಕ ವಿಜಯ, ಯಶೋಭದ್ರ ಮತ್ತು ದ್ವಿಭದ್ರಬಾಹು ಎಂಬ ಮೂವರು ಆಚಾರ್ಯರು ಅನುಕ್ರಮದಿಂದ ದಶ. ನವ ಮತ್ತು ಅಷ್ಟಅಂಗ ಶ್ರತಧರರಾದರು. ಇವರು ಈ ಅಂಗಗಳನ್ನು ಪರಿಪೂರ್ಣರೀತಿಯಿಂದ ತಿಳಿದಿದ್ದರಲ್ಲದೆ

ಇತರ ಅಂಗಗಳಲ್ಲವನ್ನೂ ಏಕದೇಶರೀತಿಯಿಂದ ತಿಳಿದಿದ್ದರು. ಈ ಒಂಭತ್ತು ಆಚಾರ್ಯರ ಜೀವಿತ ಸಮಷ್ಟಿಕಾಲ ಎರಡುನೂರ ಇಪ್ಪತ್ತು ವರ್ಷಗಳು.

ಆಚಾರಾಂಗ ಶ್ರುತಧರರು

ಅಭಯಭದ್ರ, ಸುಭದ್ರ, ಯಶೋಬಾಹು, ಭದ್ರಬಾಹು ಮತ್ತು ಲೋಹಾರ್ಯ ಎಂಬ ಐವರು ಆಚಾರಾಂಗ ಶ್ರುತಧರರು ಒಂದು ನೂರ ಹದಿನೆಂಟು ವರ್ಷಗಳ ಅವಧಿಯಲ್ಲಿ ಆದರು. ಇವರು ಪೂರ್ವಗಳ ಸಹಿತವಾಗಿ ಮಿಕ್ಕ ಎಲ್ಲ ಅಂಗಶ್ರುತವನ್ನು ಏಕದೇಶ ರೀತಿಯಿಂದ ತಿಳಿದಿದ್ದರು.

ಮೇಲೆ ಹೇಳಿದ ಶ್ರುತಧರ ಆಚಾರ್ಯಾನುಕ್ರಮವನ್ನು ಪ್ರತ್ಯೇಕ ಪಟ್ಟ ಕಾಲಗಣನೆಯೊಡನೆ ಈ ಮುಂದೆ ಕೋಷ್ಟಕ ರೂಪದಲ್ಲಿ ಕೊಡಲಾಗಿದೆ.

ಭ. ಮಹಾವೀರನ ನಿರ್ವಾಣಾನಂತರ........

| | ಶ್ರುತಧರರ ಹೆಸರುಗಳು | ಪಟ್ಟವರ್ಷ | ವೀ.ನಿ.ಪ. |
|---|---|---|---|
| ಕೇವಲಿಗಳು– | | | |
| ೧. | ೧ ಗೌತಮ ಇಂದ್ರಭೂತಿ ಗಣಧರ | ೧೨ ವರ್ಷ | ೧೨ |
| ೨ | ೨ ಸುಧರ್ಮಸ್ವಾಮಿ ಗಣಧರ | ೧೨ ವರ್ಷ | ೨೪ |
| ೩ | ೩ ಜಂಬೂಸ್ವಾಮಿ | ೩೮ ವರ್ಷ | ೬೨ |
| | | ಒಟ್ಟು ೬೨ ವರ್ಷ | |
| ಶ್ರುತಕೇವಲಿಗಳು––– | | | |
| ೪ | ೧ ನಂದಿ–ವಿಷ್ಣು ಆಚಾರ್ಯ | ೧೪ ವರ್ಷ | ೭೬ |
| ೫ | ೨ ದೇವನಂದಿ ಆಚಾರ್ಯ | ೧೬ ವರ್ಷ | ೯೨ |
| ೬ | ೩ ಅಪರಾಜಿತ ಆಚಾರ್ಯ | ೨೨ ವರ್ಷ | ೧೧೪ |
| ೭ | ೪ ಗೋವರ್ಧನ ಆಚಾರ್ಯ | ೧೯ ವರ್ಷ | ೧೩೩ |
| ೮ | ೫ ಭದ್ರಬಾಹುಸ್ವಾಮಿ (ಪ್ರಥಮ) | ೨೯ ವರ್ಷ | ೧೬೨ |
| | | ಒಟ್ಟು ೧೦೦ ವರ್ಷ | |

ದಶಪೂರ್ವಿಗಳು–

| | | | |
|---|---|---|---|
| ೯ | ೧ ವಿಶಾಖ ಆಚಾರ್ಯ | ೪೭ ವರ್ಷ | ೨೦೯ |
| ೧೦ | ೨ ಪ್ರೋಷ್ಠಿಲ ಆಚಾರ್ಯ | ೧೫ ವರ್ಷ | ೨೨೪ |
| ೧೧ | ೩ ಕ್ಷತ್ರಿಯ ಆಚಾರ್ಯ | ೧೭ ವರ್ಷ | ೨೪೧ |
| ೧೨ | ೪ ಆರ್ಯ ಆಚಾರ್ಯ | ೧೦ ವರ್ಷ | ೨೫೧ |
| ೧೩ | ೫ ಜಯ(ಸೇನ) ಆಚಾರ್ಯ | ೨೧ ವರ್ಷ | ೨೭೨ |
| ೧೪ | ೬ ನಾಗ ಅಥವಾ ನಾಮ (ಸೇನ) ಆಚಾರ್ಯ | ೧೮ ವರ್ಷ | ೨೯೦ |
| ೧೫ | ೭ ಸಿದ್ಧಾರ್ಥ ಆಚಾರ್ಯ | ೧೭ ವರ್ಷ | ೩೦೭ |
| ೧೬ | ಧೃತಿಸೇನ ಆಚಾರ್ಯ | ೧೮ ವರ್ಷ | ೩೨೫ |
| ೧೭ | ಬುದ್ಧಿಲಿಂಗ ಆಚಾರ್ಯ | ೨೦ ವರ್ಷ | ೩೪೫ |
| | | ಒಟ್ಟು ೧೮೩ ವರ್ಷ | |

ಏಕಾದಶಾಂಗ ಶ್ರುತಧರರು–

| | | | |
|---|---|---|---|
| ೧೮ | ೧ ಧರ್ಮಸೇನ ಆಚಾರ್ಯ | ೧೬ ವರ್ಷ | ೩೬೧ |
| ೧೯ | ೨ ನಕ್ಷತ್ರ ಆಚಾರ್ಯ | ೧೮ ವರ್ಷ | ೩೭೯ |
| ೨೦ | ೩ ಜಯಪಾಲಕ ಆಚಾರ್ಯ | ೨೦ ವರ್ಷ | ೩೯೯ |
| ೨೧ | ೪ ಪಾಂಡು ಆಚಾರ್ಯ | ೩೯ ವರ್ಷ | ೪೩೮ |
| ೨೨ | ೫ ಧ್ರುವಸೇನ ಆಚಾರ್ಯ | ೧೪ ವರ್ಷ | ೪೫೨ |
| ೨೩ | ೬ ಕಂಸ ಆಚಾರ್ಯ | ೩೨ ವರ್ಷ | ೪೮೪ |

ದಶ, ನವ, ಅಷ್ಟಅಂಗ ಶ್ರುತಧರರು–

| | | | |
|---|---|---|---|
| ೨೪ | ೭ ವಿಜಯ ಆಚಾರ್ಯ | ೧೩ ವರ್ಷ | ೪೯೭ |
| ೨೫ | ೮ ಯಶೋಭದ್ರ ಆಚಾರ್ಯ | ೧೬ ವರ್ಷ | ೫೧೩ |
| ೨೬ | ೯ ಭದ್ರಬಾಹು (ದ್ವಿತೀಯ) ಆಚಾರ್ಯ | ೫೨ ವರ್ಷ | ೫೬೫ |

ಒಟ್ಟು ೨೨೦ ವರ್ಷ

ಆಚಾರಾಂಗ ಶ್ರುತಧರರು–

| | | | |
|---|---|---|---|
| ೨೭ | ೧ ಅಭಯಭದ್ರ ಆಚಾರ್ಯ | ೨೧ ವರ್ಷ | ೫೮೬ |
| ೨೮ | ೨ ಸುಭದ್ರ ಆಚಾರ್ಯ | ೬ ವರ್ಷ | ೫೯೨ |
| ೨೯ | ೩ ಯಶೋಬಾಹು ಆಚಾರ್ಯ | ೧೮ ವರ್ಷ | ೬೧೦ |
| ೩೦ | ೪ ಭದ್ರಬಾಹು (ತೃತೀಯ) ಆಚಾರ್ಯ | ೨೩ ವರ್ಷ | ೬೩೩ |
| ೩೧ | ೫ ಲೋಹಾರ್ಯ ಆಚಾರ್ಯ | ೫೦ ವರ್ಷ | ೬೮೩ |

ಒಟ್ಟು ೧೧೮ ವರ್ಷ

ಮೇಲೆ ಕಾಣಿಸಿರುವ ಶ್ರುತಧರ ಆಚಾರ್ಯಾನುಕ್ರಮದಲ್ಲಿ ಕೇವಲಿ, ಶ್ರುತಕೇವಲಿ, ದಶಪೂರ್ವಿ, ಏಕಾದಶ, ದಶ–, ನವ–, ಅಷ್ಟಾಂಗ, ಮತ್ತು ಆಚಾರಾಂಗ ವರ್ಗಗಳ ಪಟ್ಟಕಾಲ ಮೊತ್ತಗಳು ಮತ್ತು ಈ ಮೊತ್ತಗಳ ಒಟ್ಟು ಮೊತ್ತವಾದ ೬೮೩ ವರ್ಷಗಳು ಇವೆಲ್ಲವುಗಳನ್ನು ಹೇಳುವಲ್ಲಿ ಪಟ್ಟಾವಲಿಗಳಲ್ಲದೆ ಮತ್ತಿತರ ಮೂಲಗಳಲ್ಲಿಯೂ ಏಕತಾನವಿದೆ. ಈ ಕಾಲಗಣನೆಗಳನ್ನು ಯಾವುದೋ ಒಂದು ಅಗತ್ಯದ ಉದ್ದೇಶದಿಂದ ಲಭ್ಯವಿದ್ದ ಪೂರ್ವಕಾಲೀನ ಆಧಾರಗಳಿಂದ ಕ್ರೋಡೀಕರಿಸಲಾಗಿದೆಯೆಂಬುದರಲ್ಲಿ ಸಂಶಯವಿಲ್ಲ, ಶ್ರುತಧರರ ಅಥವಾ ಶ್ರುತಪಾಠಿಗಳ ಅನುಬದ್ಧ ಪರಂಪರೆಯು ವೀ. ನಿ. ಪ. ೬೮೩ ರಲ್ಲಿ ಕೊನೆಗೊಂಡಿತೆಂಬುದು ಸರ್ವಸಮ್ಮತ ಗಣನೆ. ಈ ಶ್ರುತಪಾಠಿಗಳ ಪರಂಪರೆಯು ಲೋಹಾರ್ಯರೊಡನೆ ಕೊನೆಗೊಂಡಿಯೆಂಬುದು ಬಹುಮತದ ಗಣನೆ. ಆದರೆ ಒಂದೆರಡು ಪಟ್ಟಾವಲಿಗಳಲ್ಲಿ ಅರ್ಹದ್ಬಲಿ, ಮಾಘನಂದಿ, ಧರಸೇನ, ಪುಷ್ಪದಂತ ಮತ್ತು ಭೂತಬಲಿ ಆಚಾರ್ಯರನ್ನು ಆಚಾರಾಂಗ ಶ್ರುತಧರರೆಂದು ನಿರ್ದೀಶಿಸಿ ಶ್ರುತಧರ ಆಚಾರ್ಯ ಪರಂಪರೆಯು ಮ. ನಿ. ಪ. ೬೮೩ರಲ್ಲಿ ಭೂತಬಲಿ ಆಚಾರ್ಯರೊಡನೆ ಕೊನಗೊಂಡಂತೆ ನಿರೂಪಿಸಿದೆ [೧೨]. ಆದರೆ ಈ ನಿರೂಪಣೆಗೆ ಪ್ರಾಚೀನತವೆನ್ನಬಹುದಾದ ಮೌಲಿಕ ಆಧಾರವಿದ್ದಂತೆ ಕಡುಬರುವುದಿಲ್ಲ. ಆದರೂ ಶ್ರುತಪಾಠಗಳ ಸಂತತಿಯಲ್ಲಿ ಅರ್ಹದ್ಬಲಿ ಮುಂತದವರನ್ನು ಸೇರಿಸಲು ಯತ್ನಿಸಿರುವುದರಲ್ಲಿ ಈ ವಿಷಯಕ್ಕೆ ಸಂಬಧಿಸಿದ ಗೊಂದಲ ಕಾರಣವಾಗಿದೆಯೆಂದು ಹೇಳ ಬಹುದಾಗಿದೆ.

ಅರ್ಹದ್ಬಲಿಸ್ವಾಮಿಯವರು ಮುನಿಗಣದ ಮೂಲಸಂಘವನ್ನು, ಹಲವು ಘಟಕಗಳನ್ನಾಗಿ ವಿಭಜಿಸಿ ವ್ಯವಸ್ಥೆ ಮಾಡಿದ ಐತಿಹಾಸಿಕ ಸಂಗತಿಯಿದೆ. ಈ ಅರ್ಹದ್ಬಲಿ ಸ್ವಾಮಿಯವರ ಮುನಿಜೀವನದ ಒಂದು ಐತಿಹಾಸಿಕ ಸಂಗತಿಯನ್ನು ತಿಳಿಸುವ ಮುಂದಿನ ಶ್ಲೋಕ ಪ್ರಸ್ತುತ ಪ್ರಸಂಗದಲ್ಲಿ ಅವಶ್ಯ ಗಮನಾರ್ಹವಾಗಿದೆ.

[೧೩] ಶ್ರೀ ಮಾನಶೇಷ ನರನಾಯಕವಂದಿತಾಂಘ್ರಿಃ

ಶ್ರೀ ಗುಪ್ತಿಗುಪ್ತ ಇತಿ ೧೪(ಅ) ವಿಶ್ರುತ ನಾಮಧೇಯಃ।

ಯೋ ಭದ್ರಬಾಹು ಮುನಿಪುಂಗವ ಪದ್ಮ

ಸೂರ್ಯಃ ಸ ವೋ ದಿಶತು ನಿರ್ಮಲಸಂಘಾವೃದ್ಧಿಂ॥

ಸಮಸ್ತ ನರೇಶ ರಿಂದ ವಂದಿತಪಾದನಾದ, ಭದ್ರಬಾಹು ಮುನಿಪುಂಗವನ ಪಟ್ಟದ ಕಮಲಕ್ಕೆ ಸೂರ್ಯನಾದ ಗುಪ್ತಿಗುಪ್ತ ಎಂಬ ಹೆಸರಿನಿಂದ ವಿಶ್ರುತನಾದ ಆ ಮುನಿ ಪುಂಗವನು ನಿಮ್ಮ ಸಂಘವೃದ್ಧಿಯನ್ನುಂಟುಮಾಡಲಿ.

ಮೇಲಿನ ಹೇಳಿಕೆಯಂತೆ ಶ್ರೀ ಗುಪ್ತಿಗುಪ್ತ ಎಂಬುವರು ಭದ್ರಬಾಹುಸ್ವಾಮಿಯವರ ತರುವಾಯದಲ್ಲಿ ಆಚಾರ್ಯ ಪಟ್ಟಸ್ಥರಾದರೆಂದು ಸೂಚಿತವಾಗುವುದು. ಇದಲ್ಲದೆ ‘ ವೋದಿಶತು ನಿರ್ಮಲ ಸಂಘವೃದ್ಧಿಂ’ ಎಂಬ ಹೇಳಿಕೆಯಿಂದ ಮುನಿ ಸಂಘದ ವೃದ್ಧಿ ಇವರಿಂದಾದ ಸೂಚನೆಯೂ ಇದೆ. ಈ ರೀತಿಯದಾದ ಸಂಘವೃದ್ಧಿ ನಡೆದ ಬಗ್ಗೆ[೧೫] ಇಂದ್ರನಂದಿಯವರ ಶ್ರುತಾವತಾವತಾರದಲ್ಲಿ ಸ್ವಲ್ಪ ಮಾತ್ರದ ಐತಿಹಾಸಿಕ ಸಂಗತಿ ದೊರೆಯುತ್ತದೆ.

ಪೂರ್ವದೇಶದ ಮಧ್ಯದಲ್ಲಿರುವ ಪುಂಡ್ರವರ್ಧನಪುರದಲ್ಲಿ ಎಲ್ಲ ಅಂಗಗಳು ಮತ್ತು ಪೂರ್ವಗಳ ಏಕದೇಶಜ್ಞರಾದ ಅರ್ಹದ್ಬಲಿ ಮುನಿಯಾದರು. ಇವರು ಅಷ್ಟಾಂಗ ನಿಮಿತ್ತಜ್ಞರೂ ಸಂಘಾನುಗ್ರಹನಿಗ್ರಹ ಸಮರ್ಥರೂ ಆಗಿದ್ದರು. ಐದು ವರ್ಷಗಳ ಅಂತ್ಯದಲ್ಲಿ ನಡೆಸಬೇಕಾದ ಪ್ರತಿಕ್ರಮಣದ ನಿಮಿತ್ತ ಯೋಜನಶತ ದೂರದೊಳಗಿದ್ದ ಮುನಿ ಸಂಘಗಳಿಗೆ ಆದೇಶ ಕಳುಹಿಸಿದರು. ಮುನಿಸಂಘಗಳು ಬಂದು ಸೇರಿದ ಅನಂತರ 'ಎಲ್ಲರೂ ಬಂದಿರುವರೆ ?' ಎಂದು ಪ್ರಶ್ನಿಸಿದರು. ಅದಕ್ಕೆ ‘ನವು ನಮ್ಮ ನಮ್ಮ ಸಂಘ ಸಹಿತ ಬಂದಿದ್ದೇವೆ’ ಎಂದು ಹೇಳಿದರು ಇದನ್ನು ಕೇಳಿದ ಆ ಗಣಿಯು 'ಈ

ಕಲಿಕಾಲದಲ್ಲಿ ಇಲ್ಲಿಂದ ಮುಂದೆ ಈ ಜೈನಧರ್ಮ ಪಂಥವು ಗಣಪಕ್ಷಪಾತ ಭೇದ ಹೊಂದಿರುವುದು– ನೋಸ್ಯಾ ಭಾವೇನ– ಇಲ್ಲವಾದಲ್ಲಿ ಇಲ್ಲ' ಎಂದು ಚಿಂತಿಸಿ– (೧) ಗಿರಿಗುಹೆಯಿಂದ ಬಂದ ಮುನಿ ಸಮಾಜವನ್ನು ನಂದಿ ಹಾಘೂ ಮತ್ತೊಂದು ಸಮಜವನ್ನು ವೀರ ಎಂದು, ಹೀಗೆಯೇ ಅಶೋಕವಾಟದಿಂದ ಬದವರನ್ನು (೧) ಅಪರಾಜಿತ ಮತ್ತು (೨) ದೇವ ಎಂದು, ಪಂಚಸ್ತೂಪ ನಿವಾಸದಿಂದ ಬಂದವರನ್ನು (೧) ಸೇನ ಮತ್ತು (೨) ಬದ್ರ ಎಂದು, ಶಾಲ್ಮಲಿದ್ರುಮ ಮೂಲದಿಂದ ಬಂದವರನ್ನು (೧) ಗಣಧರ ಮತ್ತು (೨) ಗುಪ್ತ ಎಂದು, ಖಂಡಕೇಸರದ್ರುಮ ಮೂಲದಿಂದ ಬಂದವರನ್ನು (೧) ಸಿಂಹ ಮತ್ತು (೨) ಚಂದ್ರ ಎಂದೂ ಹೆಸರಿಸಿ ಸಂಘ ಗಣ ಭೇದಗಳನ್ನು ರೂಪಿಸಿದರು.

ಏವಂ ತಸ್ಯಾರ್ಹದ್ಬಲೇಃ ಮುನಿಜನಸಂಘಪ್ರವರ್ತಕಸ್ಯಾಸನ್।

ವಿನೇಯ ಜನಾ ಮಿನೀಂದ್ರಾ ಪಂಚ ಕುಲಾಚಾರ್ಯಕೋಪಾಖ್ಯಾಃ॥

ಹೀಗೆ ಮುನಿಜನ ಸಂಘ ಪ್ರವರ್ತಕನಾದ ಆ ಅರ್ಹದ್ಬಲಿಗೆ ಪಂಚ ಕುಲಾಚಾರ್ಯರ ಉಪಾಖ್ಯೆ ಹೊಂದಿದ (ಪಂಚಕುಲಾಚಾರ್ಯರ ಹೆಸರುಗಳನ್ನು ಉಪನಾಮಗಳಾಗಿ ಹೊಂದಿದ ಶಿಷ್ಯ ಮುನಿಜನರಾದರು.

ಇದೇ ವಿಷಯವಾಗಿ ನಂದಿ ಆಮ್ನಾಯ ಪಟ್ಟಾವಲಿ ('ಸಿ' ಪ್ರತಿ) ಯಲ್ಲಿ ಹಳೇ ರಾಜಾಸ್ತಾನಿಯಲ್ಲಿ ಹೇಳಿರುವ ಮುಂದಿನ ಸಂಗತಿ ಪ್ರಸ್ತುತ ಪ್ರಸಂಗದಲ್ಲಿ ವಿಶೇಷ ಗಮನಾರ್ಹವಾಗಿದೆ :

ಭದ್ರಬಾಹು ಸ್ವಾಮಿಯವರ ಶಿಷ್ಯ ಗುಪ್ತಿ ಎಂಬುವರಿಗೆ ಮೂರು ಹೆಸರುಗಳು: (೧) ಗುಪ್ತಿಗುಪ್ತ (೨) ಅರ್ಹದ್ಬಲಿ, (೩) ವಿಶಾಖಾಚಾರ್ಯ. ಇವರಿಗೆ ನಾಲ್ಕು ಶಿಷ್ಯರು; ನಂದಿ ವೃಕ್ಷದ ತಲದಲ್ಲಿ ವರ್ಷಾಯೋಗಧಾರಣೆ ಮಾಡಿದ ಮಾಘನಂದಿಯವರು ನಂದಿಸಂಘವನ್ನು ತೃಣತಲದಲ್ಲಿ ವರ್ಷಾಯೋಗಧಾರಣೆ ಮಾಡಿದ ಜಿವಸೇನರು ಸೇನಸಂಘವನ್ನು ('ಎ' ಪ್ರತಿಯ ಹೇಳಿಕೆಯಂತೆ ವೃಷಭಸಂಘವನ್ನು), ಸಿಂಹದ ಗುಹೆಯಲ್ಲಿ ವರ್ಷಾಯೋಗಧಾರಣೆ ಮಾಡಿದವರು ಸಿಂಹಸಂಘವನ್ನು

ಮತ್ತು ದೇವ ದತ್ತಾ ವೇಶ್ಯೆ ಮನೆಯಲ್ಲಿ ವರ್ಷಾಯೋಗ ಮಾಡಿದವರು ದೇವಸಂಘವನ್ನು ಸ್ಥಾಪಿಸಿದರು.

ಈ ಮೇಲಿನ ಹೇಳಿಕೆಯಿಂದ ಗುಪ್ತಿಗಿಪ್ತರಿಗೇ ಅರ್ಹದ್ಬಲಿ ಎಂಬ ಮತ್ತೊಂದು ಹೆಸರಿದ್ದಿತೆಂದು ಸ್ಪಷ್ಟವಾಗುವುದಿಲ್ಲ. ಇದಲ್ಲದೆ ಇವರು ಆಚಾರಾಂಗ ಶ್ರುತಧರಭದ್ರ ಬಾಹುಸ್ವಾಮಿಯವರ ಅನಂತರದಲ್ಲಿ ಮುನಿ ಸಂಘದ ಆಚಾರ್ಯ ಪಟ್ಟಸ್ಥರಾಗಿದ್ದರು. ಪ್ರಾಕೃತ ಗಾಹೆಗಳಲ್ಲಿ ಇವರನ್ನು 'ಅಹಿವಲ್ಲಿ' ಎಂದು ಹೆಸರಿಸಿದೆ.

ಶ್ರುತಧರ ಆಚಾರ್ಯ ಪರಂಪರೆಯಲ್ಲಿ ಭದ್ರಬಾಹು ಸ್ವಾಮಿಯವರ ಐತಿಹ್ಯವು ಐತಿಹಾಸಿಕ ದೃಷ್ಟಿಯಿಂದ ಮಹತ್ವಪೂರ್ಣವಾಗಿದೆ. ದ್ವಾದಶಾಂಗ ಚತುರ್ದಶಪೂರ್ವಿ ಶ್ರುತಕೇವಲಿಗಳಲ್ಲಿ ಕೊನೆಯವರಾದ ಭದ್ರಬಾಹುಸ್ವಾಮಿಯವರು, ಉಜ್ಜಯಿನಿಯಲ್ಲಿ ರಾಜ್ಯವಾಳುತ್ತಿದ್ದ ಚಂದ್ರಗುಪ್ತನಿಗೆ ಮುನಿದೀಕ್ಷೆ ಇತ್ತು. ಅವನೂ ಸೇರಿದಂತೆ, ಮುನಿಸಂಘದೊಡನೆ ದಕ್ಷಿಣದತ್ತ ಪಯಣ ಮಾಡಿ ಕಳ್ಬಪುವನ್ನು (ಶ್ರ. ಬೆಳಗುಳದ ಚಿಕ್ಕ ಬೆಟ್ಟ) ಸೇರಿ, ತಮ್ಮ ಶಿಷ್ಯಾಗ್ರೇಸರರಾದ ದಶಪೂರ್ವಿ ವಿಶಾಖಾಚಾರ್ಯರಿಗೆ ಆಚಾರ್ಯ ಪದವಿಯಿತ್ತು, ಮುನಿಸಂಘ ಸಮೇತರಾಗಿ, ಚೋಳ, ಚೇರದೇಶಗಳತ್ತ ಪಯಣ ಮುಂದುವರಿಸುವಂತೆ ಆದೇಶವಿತ್ತು ಸಲ್ಲೇಖನ ವ್ರತಧಾರಣೆ ಮಾಡಿದರು. ಈ ಸಮಯದಲ್ಲಿ ಚಂದ್ರಗುಪ್ತಮುನಿಯು, ಮುನಿಸಂಘದ ಜೊತೆಯಲ್ಲಿ ಪಯಣ ಮಾಡದೆ, ಭದ್ರಹಾಹು ಸ್ವಾಮಿಯವರ ಸೇವೆಗಾಗಿ ಕಳ್ಬಪ್ಪುವಿನಲ್ಲಿಯೇ ನಿಂತರು. ಕೆಲ ದಿನಗಳ . ಅನಂತರ ಭದ್ರಬಾಹು ಸ್ವಾಮಿಯವರು ಕಳ್ಬಪ್ಪುವಿನಲ್ಲಿಯೇ ದಿವಂಗತರಾದರು ಶ್ರ. ಬೆಳಗುಳದ ೧ನೇ ನಂಬರಿನ ಶಾಸನದಲ್ಲಿ, ಗೌತಮಗನಧರರಾದಿಯಾಗಿ ಇರುವ ಎಂಟನೆ 'ಭದ್ರಬಾಹು' ಎಂಬ ಹೆಸರು ಈ ಶ್ರುತಕೇವಲಿ ಭದ್ರಬಾಹು ಸ್ವಾಮಿಯವರ ಸೂಚಕವಾದುದಾಗಿದೆ. ಮತ್ತೆ ಇದೇ ಶ್ರ. ಬೆಳಗುಳದ್ದೇ ಆದ ೧೭ನೇ ನಂಬರಿನ ಶಾಸನದಲ್ಲಿ

ಶ್ರೀ ಭದ್ರಬಾಹು– ಸಚಂದ್ರಗುಪ್ತ– ಮುನೀಂನ್ದ್ರಯುಗ್ಮ– ದಿನ್ನೊಪ್ಪೆವಲ್।

ಭದ್ರಮಾಗಿದ ಧರ್ಮಮಂದು ವರಿಕ್ಕೆವಂದಿನಿಸಳ್ಳುಲೋ......

ಹೇಳಿರುವಂತೆ. ಇದೇ ಶ್ರುತಕೇವಲಿ ಭದ್ರಬಾಹು ಮತ್ತು ಚಂದ್ರಗುಪ್ತರ ಐತಿಹ್ಯವಿದೆ. ಪುನರಪಿ ೪೦, ೫೪ ಮತ್ತು ೧೦೮ ನೇ ನಂಬರಿನ ಶಾಸನಗಳಯೂ ಈ ಐತಿಹ್ಯವನ್ನು ವರ್ಣಿಸಿದೆ. ಇವುಗಳಲ್ಲಿದೆ ಬಿ. ಎಲ್. ರೈಸ್ ಅವರು ಶ್ರವಣಬೆಳಗುಳದ ಶಾಸನ ಪುಸ್ತಕದಲ್ಲಿ (ಪು ೨. ಅಡಿ ಟಿಪ್ಪಣಿ ೬) ಕಾವೇರಿ ನದಿಯ ಗೌತಮ ಕ್ಷೇತ್ರದ ಶಾಸನಗಳ ಮತ್ತೆರಡು ಉಲ್ಲೇಖ ಮಾಡಿದ್ದಾರೆ. ಇವುಗಳಲ್ಲಿ ಕಳ್ಬಪ್ಪುತೀರ್ಥ ಎಂದು ಹೆಸರಿಸಿದೆ.

ಶ್ರುತಧರ ಆಚಾರ್ಯಪರಂಪರೆಯಲ್ಲಿ 'ಭದ್ರಬಾಹು' ಎಂಬ ಹೆಸರು ಹೊಂದಿದ್ದ ಎರಡನೆಯ ಆಚಾರ್ಯರು ಅಷ್ಟ ಅಂಗಶ್ರುತಧರ ಆಚಾರ್ಯರು ಶ್ರವಣಬೆಳಗುಳದ ಕಟವಪ್ರ ಅಥವಾ ದ್ವಾ, ಚ. ಪೂ. ಶ್ರುತಕೇವಲಿ ಭದ್ರಬಾಹು ಸ್ವಾಮಿಯವರು ದಕ್ಷಿಣ ಭಾರತದ ಕಳ್ಬಪ್ಪುವಿನಲ್ಲಿ ಸಲ್ಲೇಖನ ಕೈಗೊಂಡು ಸಮಾಧಿ ಮರಣ ಹೊಂದಿದರೆಂಬ ಐತಿಹ್ಯ ಹೆಚ್ಚು ಪ್ರಚಾರದಲ್ಲಿದೆ. ಆದರೆ ಬೇರೆ ಎರಡು ಕಥಾನಕಗಳಲ್ಲಿ ಹೇಳಿರುವಂತೆ, ಇವರು ಉತ್ತರದೇಶದಲ್ಲಿಯೇ ಉಜ್ಜಯಿನಿ ಸಮೀಪದ ಭಾದ್ರಪದ ದೇಶದಲ್ಲಿ ಅಥವಾ ಪಾಟಲಿಪುತ್ರ ನಗರದ ಬಳಿಯಲ್ಲಿ ದಿವಂಗತರಾಗಿದ್ದಾರೆ. ಈ ಬಗ್ಗೆ ಮೊದಲನೆಯದಾಗಿ ಬೃಹತ್ಕಥಾ ಕೋಶದ ಮುಂದಿನ ಹೇಳಿಕೆಯನ್ನು ಗಮನಿಸ ಬಹುದು.[೧೬];

"ಭದ್ರಬಾಹು ಮುನೀಶ್ವರನ ಮಾತನ್ನು ಕೇಳಿ ಚಂದ್ರಗುಪ್ತನು ಇದೇ ಯೋಗಿಯ ಬಳಿ ಜೈನೇಶ್ವರ ದೀಕ್ಷೆ ಧರಿಸಿ ಬೇಗನೆ, ದಶಪೂರ್ವಿಗಳಲ್ಲಿ ಅಗ್ರಿಮನಾದನು. ವಿಸಷಾಚಾರ್ಯನು ಸರ್ವಸಂಘಾಧಿಪನಾದನು. ಗುರುವಿನ ಆದೇಶದಂತೆ ಇವನೊಡನೆ ಸಮಸ್ತ ಸಂಘವು ದಕ್ಷಿಣಾಪಥದ ಪುನ್ನಾಟ ದೇಶಕ್ಕೆ ಹೋಯಿತು. ಭಯಸಪ್ತಕರಹಿತನಾದ ಧೀರ ಭದ್ರಬಾಹು ಮಿನಿಯು ತೀವ್ರವಾದ ಪಂಪಾಕ್ಷುಧೇಯ ಶ್ರಮವನ್ನು ಗೆದ್ದು, ಶ್ರೀಮದುಜ್ಜಯಿನಿಗೆ ಸೇರಿದ ಭಾದ್ರಪದ ದೇಶವನ್ನು ಸೇರಿ ಬಹುದಿನಗಳವರೆಗೆ ಉಪವಾಸ ಮಾಡಿ ಚತುರ್ವಿಧ ಆರಾಧನೆಯನ್ನು ವಿಧಿವತ್ತಾಗಿ ಆಚರಿಸಿ ಸಮಾಧಿ ಮರಣ ಹೊಂದಿ ದಿವಂಗತನಾದನು"[೧೬] ಶ್ವೇತಾಂಬರ ಜೈನ ಪಂಥದ ಐತಿಹ್ಯದನು ಸಾರ ದ್ವಾ. ಚ. ಪೂ. ಭದ್ರಬಾಹು ಸ್ವಾಮಿಯವರು ಪ್ರಸಿದ್ಧಜ್ಯೋತಿಷಜ್ಞ ವರಾಹ ಮಿಹಿರಾಚಾರ್ಯರ ಸಹೋದರರು. ಇವರು ಪಾಟಲೀಪುತ್ರ ನಗರದ ಬಳಿ ಸಮಾಧಿ ಮರಣ ಹೊಂದಿದರು. ಈ ಐತಿಹ್ಯದಲ್ಲಿ ಒಂದು ಗಮನಾರ್ಹ ಸಂಗತಿಯಿದೆ. ವರಾಹನಿಹಿರಾಚಾರ್ಯರು ಪರಂಪರಾನುಗತ ಐತಿಹ್ಯದನುಸಾರ ಶಕಾರಿ

ವಿಕ್ರಮನ ಸಮಕಾಲೀನರು. ಅವನ ಆಸ್ಥಾನದ ನವಮಣಿಗಳಲ್ಲೊಬ್ಬರು. ವರಾಹಮಿಹಿರರ ಸಹೋದರರಾದ ಈ ಭದ್ರಬಾಹು ಸ್ವಾಮಿಯವರೂ ಕೂಡ ಶಕಾರಿ ವಿಕ್ರಮನ ಕಾಲದವರೆಂದಾಗುವುದು. ಇದರಂತೆ ವಿಕ್ರಮನ ಸಮಕಾಲಿನರಾಗಿದ್ದ ಒಬ್ಬ ಭದ್ರಬಾಹು ಸ್ವಾಮಿಯವರಿಗೆ ಸಂಬಂಧಿಸಿದ ಐತಿಹ್ಯವು ಶ್ವೇತಾಂಬರ ಪಂಥದ ಆಮ್ನಾಯದಲ್ಲಿ ದ್ವಾ. ಚ. ಪೂ. ಭದ್ರಬಾಹು ಸ್ವಾಮಿಯವರ ಐತಿಹ್ಯವಾಗಿ ಪರಿವರ್ತನೆ ಹೊಂದಿದೆಯೆಂದು ಸೂಚಿತವಾಗುವುದು. ದಿಗಂಬರ ಜೈನ ಪಟ್ಟಾವಲಿಗಳ ಹೊಂದಿದೆಯೆಂದು ಸೂಚಿತವಾಗುವುದು. ದಿಗಂಬರ ಜೈನ ಪಟ್ಟಾವಲಿಗಳ ಐತಿಹ್ಯದನುಗುಣವಾಗಿ ಅಷ್ಟಅಂಗ ಶ್ರುತಧರರಾದ ಒಬ್ಬ 'ಭದ್ರಬಾಹು' ಎಂಬ ಹೆಸರಿನ ಆಚಾರ್ಯರಿದ್ದರು. ಇವರು ವೀ. ನಿ. ಸಂ. ೪೯೦ರಿಂದ ೫೧೫ರ ವರೆಗೆ ಆಚಾರ್ಯ ಪಟ್ಟಸ್ಥರಾಗಿದ್ದರು. ವಿಕ್ರಮ ಶಕೆಯು ಭ. ಮಹಾವೀರನ ನಿರ್ವಾಣ ಸಮಯದಿಂದ ೪೭೦ ವರ್ಷದ ಸಮಯದಲ್ಲಿ ಆರಂಭವಾಗುವುದು. ಇದರಂತೆ ವಿಕ್ರಮನ ರಾಜ್ಯಭಾರ ಕಾಲದಲ್ಲಿ ಈ ಅಷ್ಟ ಅಂಗ ಶ್ರುತಧರ ಭದ್ರಬಾಹು ಸ್ವಾಮಿಯವರು ಜೀವಿಸಿದ್ದರೆಂದು ಸಿದ್ಧವಾಗುವುದು. ಮೇಲೆ ಹೇಳಿದ ಬೃಹತ್ಕಥಾ ಕೋಶದ ಕಥೆ ಮತ್ತು ಶ್ವೇತಾಂಬರ ಅಮ್ನಾಯದ ಕಥೆಗಳ ಐತಹ್ಯದನುಗುಣವಾಗಿ ಉತ್ತರ ಭಾರತದಲ್ಲಿಯೇ ದಿವಂಗತರಾದ ಭದ್ರಬಾಹು ಸ್ವಾಮಿಯವರು ಈ ಅಷ್ಟಅಂಗಶ್ರುತಧರ ಭದ್ರಬಾಹು ಸ್ವಾಮಿಯವರು ಎಂದು ನಿರ್ಧಾರಿತವಾಗುವುದು.

ಮೇಲೆ ಹೇಳಿದ ಇಬ್ಬರು ಭದ್ರಬಾಹು ಎಂಬ ಹೆಸರಿನ ಶ್ರುತಧರ ಆಚಾರ್ಯರಲ್ಲದೆ ಮತ್ತೂ ಒಬ್ಬರು ಇದೇ ಹೆಸರಿನವರು ಆಚಾರ್ಯರಾಗಿದ್ದರೆಂದು ಕೆಲವು ಮೂಲಗಳಿಂದ ಸೂಚಿತವಾಗುವುದು.

ನಂದಿ ಆಮ್ನಾಯ ಪಟ್ಟಾವಲಿಯಲ್ಲಿ ಅಷ್ಟಅಂಗ ಶ್ರುತಧರ (ದ್ವಿ) ಭದ್ರಬಾಹು ಸ್ವಾಮಿಯವರ ಅನಂತರದಲ್ಲಿ ಲೋಹಾರ್ಯ ಎಂಬ ಆಚಾರ್ಯರನ್ನು ಹೆಸರಿಸಿದೆ.[೧೭] ಇಲ್ಲಿ ಪರಿಗಣನೆಯಾಗಿರುವಂತೆ ಲೋಹಾರ್ಯರೂ ಅಷ್ಟ ಅಂಗ ಶ್ರುತಧರರೆನಿಸುವರು. ಆದರೆ ಧವಲಾ, ಆದಿಪುರಾಣ, ಶ್ರುತಾವತಾರವೇ ಮುಂತಾದ ಇತರ ಮೂಲಗಳಲ್ಲಿ ದಶ, ನವ, ಅಷ್ಟಅಂಗಶ್ರುತಧರರ ಗಣನೆಯೇ ಇಲ್ಲವಾಗಿದ್ದು ಲೋಹಾರ್ಯರು ಆಚಾರಾಂಗ ಶ್ರುತಧರರಲ್ಲಿ ಕೊನೆಯವರಾಗಿ ಪರಿಗಣಿತರಾಗಿದ್ದಾರೆ. ಇವೆ ರಿಂದ ಹಿಂದಿನವರಾದ (ಉಪಾಂತ್ಯ) ಶ್ರುತಧರ ಆಚಾರ್ಯರನ್ನು ಹೆಸರಿಸುವಲ್ಲಿ ಐತಿಹ್ಯ

ಮೂಲಗಳಲ್ಲಿ ಮತಭೇದ ಕಂಡುಬರುತ್ತದೆ. ಧವಲಾದಲ್ಲಿ ಜಸಬಾಹೂ ಅಥವಾ ಜಹಬಾಹು ಜಯಧವಲಾದಲ್ಲಿ ಜಯಬಾಹು ಎಂಬ ಹೆಸರುಗಳಿವೆಯಾದರೆ ಆದಿಪುರಾಣದಲ್ಲಿ, ತಿಲೋಯ ಪಣ್ಣತ್ತಿಯಲ್ಲಿ ಭದ್ರಬಾಹು ಎಂಬ ಹೆಸರಿದೆ. ನಂದಿ ಆಮ್ನಾಯ ಸಂಸ್ಕೃತ ಪಟ್ಟಾವಲಿಯಲ್ಲಿಯೂ ಭದ್ರಬಾಹು ಎಂಬ ಹೆಸರಿದೆ.[೧೮] ಇದಲ್ಲದೆ ನಂದಿ ಆಮ್ನಾಯ ಪಟ್ಟಾವಲಿ 'ಇ' ಪತಿಯಲ್ಲಿ ಅಷ್ಟಅಂಗ ಶ್ರುತಭರ (ದ್ವಿ) ಭದ್ರಬಾಹುವಲ್ಲದೆ ಮೂರನೆಯವರೆನಿಸಿ ಮತ್ತೊಬ್ಬ ಭದ್ರಬಾಹುವನ್ನು ಹೆಸರಿಸಿದೆ. ಈ ಭದ್ರಬಾಹು ಸ್ವಾಮಿಯವರ ಕಾಲದಲ್ಲಿ ಜೈನಮುನಿಗಳ ಒಂದು ಪಂಗಡವು ಮೂಲ ಸಂಘದಿಂದ ಒಡೆದು ಶ್ವೇತಾಂಬರ ಸಂಘವು ಮೂಡಿತೆಂದು ನಂ. ಆ. ಇ. ಪ್ರತಿಯಲ್ಲಿ ಹೇಳಿದೆ . ಹೀಗೆಯೇ ವೀ. ನಿ. ಸಂ. ೬೦೯ರಲ್ಲಿ ದಿಗಂಬರ ಧರ್ಮ ಪಂಥ ಮೂಡಿತೆಂಬ ಶ್ವೇತಾಂಬರ ಆಮ್ನಾಯದ ಹೇಳಿಕೆಯಿದೆ.[೧೯] (ತೃ) ಭದ್ರಬಾಹು ಸ್ವಾಮಿಯವರು ವೀ. ನಿ. ಸಂ. ೬೧೦ರಲ್ಲಿ ಆಚಾರ್ಯ ಪಟ್ಟಕ್ಕೆಬಂದಿದ್ದಾರೆ.[೨೦] ಆದರೆ ಶ್ವೇತಾಂಬರ ಪಂಥದ ಪಟ್ಟಾವಲಿಗಳಲ್ಲಿ ಕಾಲಗಣನೆಗಳನ್ನು ಮಾಡುವಲ್ಲಿ ಒಮ್ಮತವಿಲ್ಲದಿರುವುದು ಕಂಡು ಬರುವುದು. [೨೧] ಆದ್ದರಿಂದ ದಗಂಬರಪಂಥ ಮೂಡಿದುದರ ಬಗ್ಗೆ ಮೇಲೆ ಕಾಣಿಸಿರುವ ಶ್ವೇತಾಂಬರ ಪಂಥದ ಕಾಲಗಣನೆ ದೋಷಭಾಗಿಯಾಗಿರುವ ಸಂಭವವಿದೆ. ಆದ್ದರಿಂದ ದಿಗಂಬರ ಮತ್ತು ಶ್ವೇತಾಂಬರ ಪಂಥಗಳೆರಡರ ಐತಿಹ್ಯಗಳ ಸಮೀಕರಣಪೂರ್ವಕ ದಿಗಂಬರ ಮತ್ತು ಶ್ವೇತಾ,ಂಬರ ಎಂಬ ಪಂಥಭೇದವು (ತೃ) ಭದ್ರಬಾಹು ಸ್ವಾಮಿಯವರ ಪಟ್ಟಕಾಲದಲ್ಲಿ ಮೂಡಿತೆಂದು ತಿಳಿಯಬಹುದಾಗಿದೆ.ಕುಂದಕುಂದಾ ಚಾರ್ಯರು ತಮ್ಮ ಬೋಧಪಾಹುಡದ ಕೊನೆಯ ಎರಡು (೬೧ ಮತ್ತು ೬೨ನೇ) ಗಾಹೆಗಳಲ್ಲಿ ಭದ್ರಬಾಹು ಸ್ವಾಮಿಯವರನ್ನು ಹೆಸರಿಸಿದ್ದಾರೆ– ಇವೆರಡರಲ್ಲಿ ಮೊದಲನೆಯ (೬೧ನೇ) ಗಾಹೆಯಲ್ಲಿ ತಮ್ಮನ್ನು 'ಭದ್ರಬಾಹುವಿನ ಶಿಷ್ಯ' ಎಂದು ಹೇಳಿಕೊಂಡಿದ್ದಾರೆ, ಮತ್ತು ಎರಡನೆಯದಾದ (೬೨ನೇ) ಗಾಹೆಯಲ್ಲಿ ದ್ವಾ, ಚ. ಪೂ. ಶ್ರುತಜ್ಞಾನಿ ಭದ್ರಬಾಹುವನ್ನು ತಮ್ಮ 'ಗಮಕಗುರು' ಎಂದು ಹೇಳಿದ್ದಾರೆ. ಈ ದ್ವಾ. ಚ. ಪೂ. ಶ್ರುತಕೇವಲಿ ಭದ್ರಬಾಹು ಸ್ವಾಮಿಯವರು ಕುಂದಕುಂದರ ಸಾಕ್ಷಾತ್ ಗುರುಗಳಾಗಿರದೆ. ಪರಂಪರೆಯ ಗುರುವಾಗಿರುವರೆಂಬುದರಲ್ಲಿ ಸಂದೇಹ ವಿಲ್ಲ. ಇನ್ನು ಕುಂದಕುಂದಾ ಚಾರ್ಯರು ಮೊದಲ (೬೧ನೇ) ಗಾಹೆಯಲ್ಲಿ ಹೆಸರಿಸಿರುವ ಭದ್ರಬಾಹು ಸ್ವಾಮಿಯವರ ಸಾಕ್ಷಾತ್

ಶಿಷ್ಯರಾಗಿದ್ದರೆಂದು ಹೇಳಬಹುದಾದ ಐತಿಹ್ಯವು ನಂ. ಆ. ಪಟ್ಟಾವಲಿಯಲ್ಲಿ ದೊರೆಯುತ್ತದೆ. ಕುಂದಕುಂದಾಚಾರ್ಯರು ತಮ್ಮ ಹನ್ನೊಂದನೇ (೧೧ನೇ) ವಯಸ್ಸಿನಲ್ಲಿ ಮುನಿದೀಕ್ಷೆ ಹೊಂದಿ ಶಾ. ಶಕ. ೧೦೧ರಲ್ಲಿ[೨೨] ೮೬ನೇ ವಯಸ್ಸಿನಲ್ಲಿ [೨೩] (ವೀ, ನಿ, ಸಂ. ೭೦೭–೭೦೮)ರಲ್ಲಿ ಸ್ವರ್ಗಸ್ಥರಾಗಿದ್ದಾರೆ, ಇದರಂತೆ ಇವರು ೭೫ ವರ್ಷಗಳ ಕಾಲ ಮುನಿ ಪರ್ಯಾಯದಲ್ಲಿದ್ದರೆಂದಾಗುವುದ್ದಾದ್ದರಿಂದ ಶಾ. ಶಕ. ೨೬ರಲ್ಲಿ (ವೀ. ನಿ. ಸಂ. ೬೩೧ ರಲ್ಲಿ) ಮುನಿದೀಕ್ಷೆಹೊಂದಿರುವರೆಂದು ಗಣನೆ ಹೊಂದುವುದು (ತೃ) ಭದ್ರಬಾಹು ಸ್ವಾಮಿಯವರು ವೀ. ನಿ. ಸಂ. ೬೧೦ ರಿಂದ ೬೩೩ ರವರೆಗೆ ಆಚಾರ್ಯಪಟ್ಟಸ್ಥರಾಗಿದ್ದರೆಂದು ಶ್ರುತಧರ ಆಚಾರ್ಯ ಸಂತತಿಯನುಕ್ರಮದ ಕೋಷ್ಠಕದಿಂದ ಸ್ಪಷ್ಟವಾಗುವುದು. ಆದ್ದರಿಂದ ಕುಂದಕುಂದಾ ಚಾರ್ಯರು (ತೃ) ಭಾದ್ರಬಾಹು ಸ್ವಾಮಿಯವರಿಂದ ಮಿನಿದೀಕ್ಷೆ ಪಡೆದು ಅವರ ಶಿಷ್ಯರಾಗಿದ್ದರೆಂಬುದು ಸುಸಂಗತವಿದೆ.

ಪ್ರಸ್ತುತ ಪ್ರಸಂಗದಲ್ಲಿ ಶ್ರವಣಬೆಳಗುಳದ ಚಿಕ್ಕ ಬೆಟ್ಟದ ಮೇಗಣ ೧ ನೇ ನಂಬರಿನ ಶಾಸನವನ್ನು ಪರಿಶೀಲಿಸಬೇಕಾದ ಅಗತ್ಯವಿದೆ. ಇದು ಸನ್ಮಾನ್ಯ ಬಿ. ಎಲ್. ರೈಸ್ ರವ ರಿಂದ ಸಂಪಾದಿತವಾಗಿ ಶ್ರವಣಬೆಳಗುಳ ಶಾಸನ ಪುಸ್ತಕದಲ್ಲಿ ಪ್ರಕಾಶಿತವಾಗಿರುವ ಪ್ರಕಾರ ಮುಂದಿನಂತಿದೆ.

ಪಾರ್ಶ್ವನಾಥಸ್ವಾಮಿಯ ಬಸ್ತಿಯಿಂದ ದಕ್ಷಿಣದಿಕ್ಕಿಗೆ (ಬಂಡೆಯ ಮೇಲೆ) (ಬೆಟ್ಟದ ಹಾಸುಗಲ್ಲಿನ ಮೇಲೆ)

[೧]"ಸ್ವಸ್ತಿ ॥ ಜಿತಂ ಭಗವತಾ ಶ್ರೀಮದ್ಧರ್ಮತೀರ್ಥ–ವಿಧಾಯಿನಾ (।) ವರ್ಧ ಮಾನೇನ ಸಂಪ್ರಾಪ್ತ–ಸಿದ್ಧಿ– ಸೌಖ್ಯಾಮೃತಾತ್ಮನಾ (॥) ಲೋಕಾಲೋಕದ್ವಯಾಧಾರ[೨]– ವಸ್ತುಸ್ಥಾಸ್ನುಚರಿಷ್ಣು ಚ[೩] (೧) ಸಚ್ಚಿದಾ[೪] ಲೋಕಶಕ್ತಿಃ ಸ್ವಾವ್ಯಶ್ನುತೇ ಯಸ್ಯ ಕೇವಲಾ (॥).

ಜಗತ್ಯಚಿಂತ್ಯಮಹಾತ್ಮ ಪೂಜಾತಿಶಯಮೀಯುಷ (।) ತೀರ್ಥಕೃನ್ನಾಮಪುಣ್ಯೌಘ ಮಹಾರ್ಹನ್ತ್ಯಮುಪೇಯುಷಃ (॥) ತದನು ಶ್ರೀ ವಿಶಾಲೇಯ[೫] ಜ್ಜಯತ್ಯದ್ಯ ಜಗದ್ಧಿತಂ (।) ತಸ್ಯ ಶಾಸನಮವ್ಯಾಜಂ ಪ್ರವಾದಿಮತಶಾಸನಂ(॥)

ಅಥ ಖಲು ಸಕಲಜಗದುದಯ[೬] ಕರಣೋದಿತಾಶಯ[೬] ಗುಣಾಸ್ಪದೀಭೂತಪರಮಜಿನ ಶಾಸನಸರಸ್ಸಮಭಿವರ್ಧಿತ–ಭಾವ್ಯಜನ– ಕಮಲ–ವಿಕಸನ– ವಿತಿಮಿರ– ಗುಣ– ಕಿರಣ– ಸಹಸ್ರ– ಮಹೋತಿ– ಮಹಾವೀರ ಸವಿತರಿ ಪರಿನಿರ್ವೃತೇ

ಭಗವತ್ಪರಮರ್ಷಿ ಗೌತಮಗಣಧರಸಾಕ್ಷಾಚ್ಛಿಷ್ಯ– ಲೋಹಾರ್ಯ–ಜಂಬು–ವಿಷ್ಣು– ದೇವಪರಾಜಿತ–ಗೋವರ್ಧನ– ಭದ್ರಭಾಹು–ವಿಶಾಖ – ಪ್ರೋಷ್ಠಿಲ– ಕ್ಷತ್ರಿ[೭] ಕಾರ್ಯ– ಜಯನಾಮ– ಸಿದ್ಧಾರ್ಥ– ಧೃತಿಷೇಣ– ಬುದ್ಧಿಲಾದಿಗುರುಪರಂಪರೀಣ ಕ್ರಮಾಭ್ಯಾಗತ ಮಹಾಪುರುಷಸಂತತಿಸಮವಧ್ಯೋತಿತಾನ್ವಯಭದ್ರಬಾಹುಸ್ವಾಮಿನಾ ಉಜ್ಜಯಿನ್ಯಾಮಷ್ಟಾಂಗ ಮಹಾನಿಮಿತ್ತ ತತ್ವಜ್ಞೇನ ತ್ರೈಕಾಲ್ಯದರ್ಶಿನಾ ನಿಮಿತ್ತೇನ ದ್ವಾದಶ ಸಂವತ್ಸರಕಾಲವೈಶಮ್ಯಮುಪಲಭ್ಯ ಕಥಿತೇ ಸರ್ವಸ್ಸಂಘಾ ಉತ್ತರಾಪಥಾದ್ದಕ್ಷಿಣಾ ಪಥಂ ಪ್ರಸ್ಥಿತಃ[೮] ಅರ್ಷೇಣೇವ[೮] ಜನಪದವನೇಕಗ್ರಾಮಶತಸಂಖ್ಯಮುದಿತ ಜನಧನಕನಕಸಸ್ಯಗೋಮಹಿಷಾಜಾವಿಕಲ್[೯] ಸಮಾಕೀರ್ಣಂ ಪ್ರಾಪ್ತವಾನತಃ ಆಚಾರ್ಯಃ [೧೦] ಪ್ರಭಾಚಂದ್ರೇಣಾಮಾ[೧೦] ವನಿತಲಲಲಾಮಭೂತೇಥಾಸ್ಮಿನ್ ಕಟವಪ್ರನಾಮ ಕೋಪ ಲಕ್ಷಿತೇ ವಿವಿಧತರುವರ[೧೧] ಕುಸುಮದಲಾವಲೀವಿಕಚನಾ[೧೨] ಶಬಲವಿಪುಲಸಜಲ ಜಲದ ನಿವಹನೀಲೋಪಲತಲೇ ವರಾಹ– ದ್ವಿಪ[೧೩] –ವ್ಯಾಘ್ರರ್ಕ್ಷತರುಕ್ಷು– ವ್ಯಾಳ–ಮೃಗ ಕುಲೋಪಚಿತೋಪತ್ಯಕಕಂದಟದರೀಮಹಾಗುಹಾಗಹನ[೧೪] ಭೋಗವತಿ ಸಮುತ್ತುಂಗ ಶೃಂಗೇ ಶಿಖರಿಣಿ ಜೀವಿತಶೇಷಮಲ್ಪತರಕಾಲಮವಬುಧ್ಯಧ್ವ[೧೫] ನಃ ಸುಚಕಿತಃ[೧೬] ತಪ ಸ್ಸಮಾಧಿಮಾರಾಧಯಿತುಮಾಪೃಚ್ಛ್ಯ ನಿರಶೇಷೇಣ ಸಂಘಂ ವಿಸೃಜ್ಯ ಶಿಷ್ಯೇಣೈಕೇನ ಪೃಥುಲಕಾಸ್ತೀರ್ಣತಲಾಸು ಶಿಲಾಸು ಶೀತಲಾಸು ಸ್ವದೇಹಂ ಸನ್ಯಸ್ಯಾರಾಧಿತವಾನ್ ಕ್ರಮೇಣ ಸಪ್ತಶತಂ ಋಷಿಣಾಮಾರಾಧಿತಮಿತಿ ಜಯತು ಜಿನಶಾಸನಮಿತಿ,"

ಕನ್ನಡ ಅಧ್ಯಯನ ಸಂಸ್ಥೆ. ಮೈ. ವಿ. ವಿ. ಯಿಂದ ೧೯೭೩ ರಲ್ಲಿ ಪ್ರಕಾಶಿತವಾಗುರುವ ಶಾಸನ ಪುಸ್ತಕದಲ್ಲಿ ಕಂಡುಬರುವ ಪಾಠಭೇದಗಳು ಮುಂದಿನಂತಿವೆ[೨೪] : ೧. ಮೊದಲಿಗೆ 'ಸಿದ್ಧಂ'ಪದವಿದೆ. ೨. ದ್ವಯಾಧಾರಂ. ೩. ವಾ. ೪. ಸಂವಿದಾ. ೫. ವಿಶಾಲಯ (ಮೌ) ವಿಶಾಲಾಯಾಮ್). ೬.

ಕರಣೋಧಿತನಿರಶಯ ೭. ಕೃತ್ರಿ. ೮. ಕ್ರಮೇಣ್ಯೈವ. ೯. ಕುಲ. ೧೦ ಪ್ರಭಾಚಂದ್ರೋ ನಾಮಾ ೧೧. ದರ ೧೨. ವಿರಚನಾ. ೧೩. ದ್ವಿಪಿ. ೧೪. ಗಹನಾ. ೧೫ ಧ್ಯಾತ್ಮನಃ ೧೬ ಸುಚರಿತ.

ಈ ಶಾಸನದಲ್ಲಿ 'ಭದ್ರಭಾಹು' ಎಂಬ ಹೆಸರು ಎರಡು ಬಾರಿ ಬಂದಿರುವುದನ್ನು ಗಮನಿಸಬೇಕಾಗಿದೆ. ಮೊದಲನೆಯದಾಗಿ ಗೌತಮಗಣಧರ ಎಂಬ ಹೆಸರಿನಾದಿಯಾಗಿ ಎಂಟನೆಯದಾಗಿರುವ ಹೆಸರು ದ್ವಾದಶಾಂಗ ಚತುರ್ದಶಪೂರ್ವಿ ಶ್ರುತಕೇವಲಿ ಭದ್ರ ಬಾಹುಸ್ವಾಮಿಯವರ ಸೂಚಕವಾಗಿದೆ ಎಂಬುದರಲ್ಲಿ ವಿವಾದವಿಲ್ಲ. ಇನ್ನು ಎರಡನೆಯದಾಗಿ ' ಭದ್ರಬಾಹು ಸ್ವಾಮಿನಾ' ಎಂಬಲ್ಲಿ ಸೂಚಿತವಾಗಿರುವ ಹೆಸರು, ದ್ವಾ. ಚ. ಪೂ. ಶ್ರುತಕೇವಲಿ ಭದ್ರಬಾಹು ಸ್ವಾಮಿಯವರಿಂದ ಅನ್ಯರಾದ ಮತ್ತೊಬ್ಬ ಆಚಾರ್ಯರ ಹೆಸರು. ಇವರು, ಗೌತಮಗಣಧರಾದಿ ಬುದ್ಧಿಲಾಂತ್ಯರಾದ ಮುನಿ ಮಹಾಪುರುಷ ಸಂತತಿ ಹಾಗೂ ಇವರ ಅನಂತರ ಕಾಲದಲ್ಲಿ ಆಗಿರುವ ಅನೇಕ ಮುನಿಮಹಾಪುರುಷರು ಬಳಿಕ ಆದವರೆಂದು 'ಬುದ್ಧಿಲಾದಿ ಗುರುಪರಂಪರೀಣ ಕ್ರಮಾಭ್ಯಾಗತ ಸಂತತಿ ಸಮವದ್ಯೋತಿತಾನ್ವಯ' ಎಂಬ ಉಕ್ತಿಯಿಂದ ಸ್ಪಷ್ಟವಾಗಿ ಸೂಚಿತವಾಗುವುದು. ಈ ಭದ್ರಬಾಹು ಸ್ವಾಮಿಯವರನ್ನು ದ್ವಾದಶಾಂಗ ಚತುರ್ದಶ ಪೂರ್ವಿಗಳೆಂದು ನಿರ್ದೇಶಿಸದೆ. ಅಷ್ಟಾಂಗ ನಿಮಿತ್ತಜ್ಞರೆಂದಿಷ್ಟೇ ಸೂಚಿಸಿರುವುದು ಪ್ರಕೃತ ಸಂದರ್ಭದಲ್ಲಿ ಗಮನಾರ್ಹವಾಗಿದೆ. ಉಜ್ಜಯಿನಿಯಲ್ಲಿ ಇವರು ಅಷ್ಟಾಂಗನಿಮಿತ್ತ ಜ್ಞಾನದಿಂದ ಮುಂದೆ ಸಂಭವಿಸಲಿದ್ದ ದ್ವಾದಶವರ್ಷಕಾಲದ ವೈಶಮ್ಯವನ್ನು ತಿಳಿದು ಸಂಘಕ್ಕೆ ಹೇಳಲಾಗಿ ಸರ್ವಸಂಘವು ಉತ್ತರಾಪಥದಿಂದ ದಕ್ಷಿಣಾಪಥಕ್ಕೆ ಹೊರಟಿತು. (ಅತಃ) ಬಳಿಕ (ಆಚಾರ್ಯಃ) ಭದ್ರಭಾಹು ಸ್ವಾಮಿ ಆಚಾರ್ಯನು (ಪ್ರಭಾಚಂದ್ರೇಣ–ಅಮಾ) ಪ್ರಭಾ ಚಂದ್ರನೊಡಗೂಡಿ, (ಆರ್ಷೇಣ್ಯೈವ) ಹಿಂದಿನಿಂದಲೂ ಋಷಿಗಳು ಸಂಚರಿಸುತ್ತಿದ್ದ ಮಾರ್ಗದಿಂದಲೇ ಶತಸಂಖ್ಯೆಯ ಅನೇಕ ಗ್ರಾಮಗಳುಳ್ಳದ್ದಾಗಿದ್ದ. ಸಮೃದ್ಧವಾದ ಜನ, ಧನ, ಕನಕ, ಸಸ್ಯ, ಗೋ, ಮಹಿಷ, ಅಜ, ಮಂದೆಗಳಿಂದ ಎಲ್ಲೆಡೆಯೂ ತುಂಬಿದ್ದ ಜನಪದವನ್ನು ಸೇರಿದನು. ಅನಂತರ (ಅಸ್ಮಿನ್ ಅವನತಿಲಲಾಮಭೂತೇ) ಈ ನೆಲಕ್ಕೆ ಅಲಂಕಾರವಾಗಿದ್ದ, ಕಟವಪ್ರ ಎಂಬ ಹೆಸರನ್ನು ಹೊಂದಿದ್ದ.... ಬೆಟ್ಟದಲ್ಲಿ ತನ್ನ ಜೀವಿತದ ಮಿಕ್ಕ ಕಾಲವು ಅಲ್ಪರತರವಾಗಿದೆಯೆಂಬುದನ್ನು ತಿಳಿದು, ಮುಂದೆ ಸಾಗಬೇಕಾಗಿರುವ ದಾರಿಯ ಬಗ್ಗೆ ಅಪಾರ

ಚಕಿತನಾಗಿ ಸಮಾಧಿ (ಸಲ್ಲೇಖನ) ತಪಸ್ಸನ್ನಾಚರಿಸಲು (ಮುನಿಗಣದ ಅನುಮತಿಯನ್ನು) ಕೇಳಿ ಸಂಘವನ್ನು ತ್ಯಜಿಸಿ (ಮುಂದೆ ಪ್ರಯಾಣ ಮಾಡಲು ಹೇಳಿ) ಒಬ್ಬ ಶಿಷ್ಯಪ್ರಭಾಚಂದ್ರ ನೊಡನೆ ಅಲ್ಲಿಯೇ ಉಳಿದು ಇದ್ದು ವಿಶಾಲವಾಗಿ ಹರಡಿಕೊಂಡಿದ್ದ ಶೀತಲವಾಗಿದ್ದ ಕಲ್ಲ ನೆಲಗಳಲ್ಲಿ ತನ್ನ ದೇಹದ ಮಮಕಾರ ರೂಪದ ಪರಿಗ್ರಹವನ್ನು ಅತ್ತ ಸರಿಸಿ (ಆರಾಧಿತವಾನ್) ಆತ್ಮಶ್ರೇಯಸ್ಸಾಧನೆ ಮಾಡಿದನು ; ಕಾಲಾನುಕ್ರಮದಲ್ಲಿ ಏಳು ನೂರು. ಋಷಿಗಳ ತಂಡವು ಆತ್ಮಶ್ರೇಯಸ್ಸಾಧನೆ ಮಾಡಿಕೊಂಡಿತು.

ಬಿ, ಎಲ್. ರೈಸ್‌ರವರಿಂದ ಸಂಪಾದಿತವಾಗಿರುವ ಶಾಸನ ಪುಸ್ತಕ ಮತ್ತು ಮೈ. ವಿ. ವಿ. ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಾಶವಾಗಿರುವ ಶಾಸನ ಪುಸ್ತಕಗಳ ಮಧ್ಯೆ ಕಂಡುಬರುವ ಪ್ರಸ್ತುತ ಶಾಸನದ ಪಾಠಭೇದಗಳನ್ನು ಹಿಂದೆ ಕೊಡಲಾಗಿದೆ. ಇವುಗಳಲ್ಲಿ ಶಾಸನದಲ್ಲಿ ಹೇಳಲಾಗಿರುವ ವಿಷಯದ ದೃಷ್ಟಿಯಿಂದ, ಎರಡೂ ಪಾಠ ಭೇದಗಳ ಪರಿಶೀಲನೆಯ ಅಗತ್ಯವಿದೆ. ಮೊದಲನೆಯದಾಗಿ (ಲನೆಯದಾದ) 'ಕ್ರಮೇಣೈವ' ಎಂಬ ಪಾಠಭೇದ. ಇದು ರೈಸ್ ರವರ 'ಆರ್ಷೇಣೈವ' ಎಂಬ ಪಾಠದ ಬದಲಾಗಿ ಇರುವ ಪಾಠಭೇದ. ಈ ಎರಡು ಪಾಠಗಳಲ್ಲಿ ಯಾವುದು ಸರಿ ಮತ್ತು ತಪ್ಪು ಎಂಬುದು ಲಿಪಿತಜ್ಞರ ನಿರ್ಣಯಕ್ಕೆ ಸೇರಿದುದು. ಆದರೆ ಅರ್ಥದೃಷ್ಟಿಯಿಂದ 'ಆರ್ಷೇಣೈವ' ಎಂಬ ಪಾಠವೇ ಹೆಚ್ಚು ಸಮಂಜಸವಾಗಿ ಅರ್ಥವತ್ತಾಗಿದೆ:

ಭದ್ರಬಾಹು ಸ್ವಾಮಿಗಳವರನ್ನು ಕುರಿತ ಕಥಾನಕ– ಐತಿಹ್ಯ, ಹಾಗೂ ಇದೇ ಶ್ರವಣ ಬೆಳಗುಳದ ಶಾಸನ ಸಂ. ೧೭ (೩೧)ರ ಅನುಗುಣವಾಗಿ, ದ್ವಾ.ಚ. ಪೂ. ಶ್ರುತಕೇವಲಿ ಭದ್ರಬಾಹು ಸ್ವಾಮಿಯವರು ಉಜ್ಜಯಿನಿಯಿಂದ ಚಂದ್ರಗುಪ್ತ ಮುನಿಯೊಡಗೂಡಿದ ಮುನಿಸಂಘದೊಡನೆ ಕಳ್ಬಪ್ಪುವಿಗೆ (ಶ್ರವಣಬೆಳಗೂಳದ ಚಿಕ್ಕ ಬೆಟ್ಟಕ್ಕೆ) ಬಂದು ಸಮಾಧಿ ಮರಣಹೊಂದಿದರು ಮತ್ತು ಇವರ ನಿಷಿಧಿ ದರ್ಶನಾರ್ಥವಾಗಿ ಮುನಿಗಳು ಬರುತ್ತಿದ್ದರು, ಎಂದು ತಿಳಿಯುವುದು. ಇದರಿಂದ ಉಜ್ಜಯಿನಿಯಿಂದ ಕಳ್ಬಪ್ಪುವಿಗೆ ಬರುವ ದಾರಿ, ಶಾಸನದಲ್ಲಿ ಎರಡನೇ ಬಾರಿಗೆ ಹೆಸರಿಸಿರುವ ಭದ್ರಬಾಹುಸ್ವಾಮಿಯವರ ಕಾಲಕ್ಕೆ 'ಆರ್ಷ' ಮಾರ್ಗವಾಗಿದ್ದಿತು. ಇದಲ್ಲದೆ ಮತ್ತೂ ಒಂದು ಇಂಗಿತಾರ್ಥವನ್ನೂ ಇದಕ್ಕೆ ಹೇಳಬಹುದು. ದ್ವಾ. ಚ. ಪೂ. ಶ್ರುತಕೇವಲಿ ಭದ್ರಬಾಹು ಸ್ವಾಮಿಯವರು

ಮುಂದೆ ಸಂಭವಿಸಲಿದ್ದ  ದುಷ್ಕಾಲದ ಕಾರಣ, ಮುನಿಚರ್ಯೆಯ ರಕ್ಷಣಾರ್ಥವಾಗಿ ಉತ್ತರಪಥದಿಂದ ಮುನಿಸಂಘಸಹಿತ ದಕ್ಷಿಣಾಪಥದತ್ತ ಪಯಣ ಮಾಡಿದರು. ಈ 'ಆರ್ಷ' ಪದ್ಧತಿಯನ್ನನುಸರಿಸಿ ಶಾಸನದಲ್ಲಿ ಹೆಸರಿಸಿರುವ ಎರಡನೇ ಭದ್ರಬಾಹು ಸ್ವಾಮಿಯವರೂ ಮುಂದೆ ಸಂಭವಿಸಲಿದ್ದ ಹನ್ನೆರಡು ವರ್ಷಗಳ ಕಾಲ ವೈಶಮ್ಯದ ಕಾರಣ ದಕ್ಷಿಣಾಪಥದತ್ತ ಪಯಣಕ್ಕೆಗೊಂಡರೆಂಬ ಆಶಯದ ಇಂಗಿತಾರ್ಥವು 'ಆರ್ಷೇಣೈವ' ಎಂಬ ಪದದಲ್ಲಿದೆ. ಆದರೆ ಇದರ ಬದಲಾಗಿ 'ಕ್ರಮೇಣೈವ' ಎಂಬ ಪದ ಪ್ರಯೋಗದಲ್ಲಿ ಯಾವ ಸಮುಚಿತಾರ್ಥವೂ ಕಂಡು ಬರುವುದಿಲ್ಲ ವಷ್ಟಲ್ಲದೆ 'ಕ್ರಮೇಣ' ದ ಜೊತೆಗೊಂಡಿರುವ 'ಏವ' ಪದವು ಇದರ ಅರ್ಥಹೀನತೆಯನ್ನು ಮತ್ತೂ ಹೆಚ್ಚಿಸುತ್ತದೆ.

ಎರಡನೆಯದಾಗಿ, ರೈಸ್‌ರವರ ಸಂಪಾದಕತ್ವದ ಶಾಸನ ಪುಸ್ತಕದ 'ಪ್ರಭಾಚಂದ್ರೇಣಾಮಾ' ಎಂಬ ಪದ ಪ್ರಯೋಗದ ಬದಲಾಗಿ ಮೈ. ವಿ. ವಿ. ಕನ್ನಡ ಅಧ್ಯಯನ ಸಂಸ್ಥೆ ಪ್ರಕಾಶನ ಪುಸ್ತಕದ (೧೦ನೇಯ) ಪಾಠಭೇದವನ್ನು ಪರಿಶೀಲಿಸಬೇಕಾಗಿದೆ. [೨೪] ರೈಸ್ ರವರು 'ಪ್ರಭಾಚಂದ್ರ' ಎಂಬ ಈ ಹೆಸರನ್ನು ಚಂದ್ರಗುಪ್ತನ ಮುನಿ ಪರ್ಯಾಯದ ಹೆಸರೆಂದು ಗುರುತಿಸಿ ಈ ಶಾಸನವು ದ್ವಾ. ಚ. ಪೂ. ಶ್ರುತಕೇವಲಿ ಭಧ್ರಬಾಹು ಸ್ವಾಮಿಯವರು ಈ ಬೆಟ್ಟದ ಮೇಲೆ ಸಮಾಧಿ ಮರಣಹೊಂದಿದರೆಂಬ ಸಂಗತಿಯನ್ನು ಹೇಳುತ್ತದೆಂದು ಅಭಿಪ್ರಾಯಪಟ್ಟಿದ್ದಾರೆ. ಇವರ ಈ ಅಭಿಪ್ರಾಯವನ್ನು ಒಪ್ಪದೆ ಡಾ. ಫ್ಲೀಟ್‌ರವರು, ಶಾಸನದಲ್ಲಿ ಎರಡನೇ ಬಾರಿಗೆ ಹೆಸರಿಸಿರುವ ಭದ್ರಬಾಹು ಸ್ವಾಮಿ ಎಂಬ ಹೆಸರು ದ್ವಾ. ಚ. ಪೂ. ಶ್ರುತಕೇವಲಿ ಭದ್ರಬಾಹುವಿನ ಸೂಚಕವಾಗಿರದೆ ಮತ್ತೊಬ್ಬ (ಇಮ್ಮಡಿ) ಭದ್ರಬಾಹುವಿನ ಸೂಚಕವಾಗಿರುವುದೆಂದು ಮತ್ತು 'ಪ್ರಭಾಚಂದ್ರ' ಎಂಬುದು ಈ ಎರಡನೆ ಭದ್ರಬಾಹುವಿನ ಶಿಷ್ಯ ಗುಪ್ತಿಗುಪ್ತನ ಹೆಸರೆಂದೂ ಇವನಿಗೇ ಅರ್ಹದ್ಬಲಿ ಮತ್ತು ವಿಶಾಖಾಚಾರ್ಯ ಎಂಬ ಹೆಸರುಗಳಿದ್ದುವೆಂದೂ ಅಭಿಪ್ರಾಯಪಟ್ಟಿದ್ದಾರೆ. ಮುಂದೆ ಆರ್. ನರಸಿಂಹಾಚಾರ್ಯರು ಫ್ಲೀಟ್ ಅವರ ಈ ಅಭಿಪ್ರಾಯವನ್ನು ಒಪ್ಪಲಿಲ್ಲವೆಂಬುದಲ್ಲದೆ ರೈಸ್ ಅವರು ಓದಿರುವ ೬ನೇ ಸಾಲಿನ (ಪ್ರಭಾಚಂದ್ರೇಣಾಮಾ) ಪಾಠವನ್ನು ಹಾಗೂ ಅವರು ಅದಕ್ಕೆ ಇತ್ತಿರುವ ಅರ್ಥ ವಿವರಣೆಯನ್ನು ಒಪ್ಪಲಿಲ್ಲ. ಇವರು ಫ್ಲೀಟ್ ಅವರ ಶಾಸನಪಾಠವನ್ನು ಒಪ್ಪಿದರೂ ರೈಸ್ ಅವರು ಊಹಿಸಿದಂತೆ ಭದ್ರಬಾಹು ಹಾಘೂ ಚಂದ್ರಗುಪ್ತರು ಕ್ರಮವಾಗಿ ಶ್ರುತಕೇವಲಿ ಭದ್ರಬಾಹು ಮತ್ತು

ಮೌರ್ಯಸಾಮ್ರಾಟನಾದ ಚಂದ್ರಗುಪ್ತರಾಗಿದ್ದರು ಎಂಬುದನ್ನು ಮಾನ್ಯ ಮಾಡಿದ್ದಾರೆ. ಪುನಃ ಇದೇ ವಿಷಯವಾಗಿ ಶ್ರೀ ಹೀರಾಲಾಲ್ ಜೈನ್ ರವರು 'ಪ್ರಭಾಚಂದ್ರೇಣನಾಮ' ಎಂದು ತಿದ್ದುಪಾಟನ್ನು ಸೂಚಿಸಿರುವರೆಂದು ಹೇಳೀದೆ. ಇದು ವ್ಯಾಕರಣದೃಷ್ಟಿಯಿಂದ ತಪ್ಪಾಗುವುದಾದ್ದರಿಂದ 'ಪ್ರಭಾಚಂದ್ರೇಣ ನಾಮ್ನಾ' ಎಂದಾಗಬಹುದು, ಆದರೆ ಇಂತಹ ತಿದ್ದುಪಾಟಿನಿಂದ ದೊರಕುವ 'ಪ್ರಭಾಚಂದ್ರ ಎಂಬ ಹೊಸ ಹೆಸರಿನ ಶಿಷ್ಯನೊಡನೆ' ಎಂಬ ಅರ್ಥ, ಈ ಹಿಂದೆ ಅರ್ಥೈಸಿರುವಂತೆ 'ಪ್ರಭಾಚಂದ್ರೇಣಾಮಾ ಎಂಬುದರಿಂದಲೇ ದೊರಕುವುದು[೨೫(ಎ)], ಮೈ.ವಿ.ವಿ. ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಾಶಿತವಾಗಿರುವ ಶಾಸನ ಪುಸ್ತಕದಲ್ಲಿ 'ಪ್ರಭಾಚಂದ್ರೋಣಾಮ' ಎಂಬ ಪಾಠವನ್ನು ಅಂಗೀಕರಿಸಲಾಗಿದೆಯಲ್ಲದೆ ಈ ಪಾಠದ ಸಮರ್ಥನೆಗಾಗಿ ಪೀಠಿಕೆಯಲ್ಲಿ "ಶಾಸನದ ಪ್ರತಿಯನ್ನು ಎಚ್ಚರಿಕೆಯಿಂದ ಪರಿಶೀಲಿಸಿದಾಗ ರೈಸ್‌ರವರ 'ಪ್ರಭಾಚಂದ್ರೇಣಾಮ' ಎಂಬ ಶಾಸನಪಾಠ ಅಂಗೀಕಾರಾರ್ಥವಲ್ಲವೆಂಬುದು ಸ್ಪಷ್ಟವಾಗುತ್ತದೆ," ಎಂದು ಹೇಳಿದ್ದಾರೆ. ಈ ಹೇಳಿಕೆಯ ಸಾಮಂಜಸ್ಯ ಪ್ರಶ್ನೆಗೊಳಪಟ್ಟು ಈ ಬಗ್ಗೆ ಇರುವ ವಿವಾದ ಮುಂದುವರಿಯುವಂತಾಗಿದೆ. ರೈಸ್ ಅವರು ಇದೇ ಶಾಸನದಲ್ಲಿರುವ ಏಕಾರಾಂತ ಮತ್ತು ಓಕಾರಾಂತ ಅಕ್ಷರಗಳನ್ನು ಹಾಗೂ 'ನ' ಮತ್ತು 'ಣ' ಕಾರಗಳನ್ನು ಓದುವಲ್ಲಿ ಎಲ್ಲಿಯೂ ಎಡವಿದಂತೆ ಕಂಡುಬರುವುದಿಲ್ಲ, ಹೀಗಿರುವಲ್ಲಿ, ಮೈ. ವಿ. ವಿ. ಅಧ್ಯಯನ ಪ್ರಕಾಶನದ ಶಾಸನ ಪುಸ್ತಕದ ಪೀಠಿಕೆಯ ವಕ್ತೃಗಳು ಹೇಳೀರುವಂತೆ, 'ಪ್ರಭಾಚಂದ್ರೋಣಾಮ' ಎಂದಿರಬೇಕಾದುದನ್ನು 'ಪ್ರಾಭಾಚಂದ್ರೇಣಾಮ' ಎಂದು ಮಾನ್ಯ ರೈಸ್ ಅವರು ಏಕಾದರೂ ಓದಿದರೆಂಬುದಕ್ಕೆ ಈ ಮೇಲೆ ಹೇಳೀದ 'ಎಚ್ಚರಿಕೆಯಿಂದ ಪರಿಶೀಲಿಸಿದಾಗ' ಎಂಬ ಹೇಳಿಕೆ ಸಮಾಧಾನಕರ ಉತ್ತರವಾಗುವುದಿಲ್ಲ. ಆದ್ದರಿಂದ ರೈಸ್‌ರವರ 'ಪ್ರಾಭಾಚಂದ್ರೇಣಾಮಾ' ಎಂಬ ಪಾಠವೇ ಸಮುಚಿತವಾಘಿದೆಯೆಂದು ಅಂಗೀಕರಿಸಬಹುದಾಗಿದೆ ಮತ್ತು ಅರ್ಥಸೃಷ್ಟಿಯಿಂದಲೂ ಇದು ಸಮುಚಿತವಾಗಿದೆ.

ಪ್ರಸ್ತುತ ಶಾಸನದ ಎರಡನೇ ಭದ್ರಬಾಹು ಸ್ವಾಮಿಯವರು ಶ್ರವಣಬೆಳಗುಳಕ್ಕೆ ಬಂದು ಸಮಾಧಿ ಮರಣ ಹೊಂದಿದರೆಂಬುದಕ್ಕೆ ಅನ್ಯತ್ರ ಬೇರಾವುದಾದರೂ ಪುರಾವೆ ಇದೆಯೆ ಎಂಬುದು ಪರಿಶೀಲನಾರ್ಹವಾಗಿದೆ: ಹಾಗೆ ಹೇಳುವುದಾದರೆ ಅಂತಹ ಸ್ಪಷ್ಟವಾದ ನೇರವಾದ ಪುರಾವೆ

ಇದುವರೆಗೆ ದೊರೆಕಿಲ್ಲವೆಂಬುದು ನಿಜ. ಆದರೆ ನಾಮಸಾಮ್ಯದಿಂದ ಒಬ್ಬರಿಗೆ ಸಂದ ಐತಿಹಾಸಿಕಾಂಶಗಳು ಪ್ರಸಿದ್ಧರಾದ ಮತ್ತೊಬ್ಬರ ಐತಿಹ್ಯದಲ್ಲಿ ಸೇರಿ ಮಿಶ್ರಗೊಂಡಿರುವ ಅನೇಕ ನಿದರ್ಶನಗಳಿವೆಯಾದ್ದರಿಂದ ಇಂತಹುದನ್ನು ಸೂಕ್ಷ್ಮರೀತಿಯಿಂದ ಅವಲೋಕನೆ ಮಾಡಿ ವಿವೇಚಿಸಿ ವಾಸ್ತವಿಕತೆಯನ್ನು ಗುರುತಿಸಲು ಯತ್ನಿಸುವುದು ಅಸಂಗತವಾಗಲಾರದು. ಈ ಬಗ್ಗೆ ವಡ್ಡಾರಾಧನೆಯ ಭದ್ರಬಾಹುಭಾಟ್ಟಾರರ ಕಥೆಯನ್ನು ಅವಲೋಕನ ಮಾಡಬಹುದಾಗಿದೆ. ಆ ಕಥೆಯಲ್ಲಿ ಹೇಳಿರುವಂತೆ : ದ್ವಾ. ಚ. ಪೂ. ಭದ್ರ ಭಟ್ಟಾರರು ಋಷಿ ಸಮುದಾಯದೊಡನೆ ಉಜ್ಜೇನಿಗೆ ಬಂದು ಆ ನಗರದ ಹೊರಗಿನ ಉದ್ಯಾನದಲ್ಲಿದ್ದರು. ಒಂದು ದಿವಸ ಇವರು (ಆಹಾರಕ್ಕಾಗಿ) ಚರಿಗೆ ಹೋಗಿ ಒಂದು ಮನೆಯನ್ನು ಹೊಕ್ಕರು. ಆಗ ಅಲ್ಲಿಯಾರೂ ಇರಲಿಲ್ಲ. ಆದರೆ ಆ ಮನೆಯ ಕೋಣೆಯಲ್ಲಿದ್ದ ಕೂಸೊಂದು 'ಟೋಳಹ ಟೋಳಹ ಭಟ್ಟಾರು' ('ಭಟ್ಟಾರಾ ಹೋಗು ಹೋಗು') ಎಂದಿತು. ಅದನ್ನು ದಿವ್ಯವಚನವೆಂದು ತಿಳಿದು ಭಟ್ಟಾರರು ಕಾಲಪ್ರಮಾಣವನ್ನು (ಎಷ್ಟುಕಾಲವೆಂದು) ಕೇಳಲು ಅದು 'ದ್ವಾದಶ ವರ್ಷ' ಎಂದು ಹೇಳಿತು. ಆಗ ಭಟ್ಟಾರರು ಕಾಲದೋಷದಿಂದ ಪ್ರಜಾ ಪೀಡೆಯಾಗುವುದೆಂದರಿತು, ಋಷಿಯರ್ಗಳನ್ನೆಲ್ಲ ಕರೆಸಿ ಈ ನಾಡಿನಲ್ಲಿ ಹನ್ನೆರಡು ವರ್ಷದವರೆಗೆ ದುರ್ಭಿಕ್ಷ ಬರಲಿದೆ, ಬೇಗನೆ (ಬೇರೆಡೆಯಿರುವ) ಋಷಿಗಳನ್ನೆಲ್ಲರನ್ನೂ ಕರೆಯಿಸಿ, ದಕ್ಷಿಣಾಪಥಕ್ಕೆ ಹೋಗೋಣ ಎಂದು ಋಷಿಗಳ ಬಳಿಗೆ ಸಂದೇಶ ಕಳುಹಿದರು.

ಇದರ ಬಳಿಕ ಉಜ್ಜಯಿನಿಯಲ್ಲಿ ರಾಜ್ಯವಾಳುತ್ತಿದ್ದ ಚಂದ್ರಗುಪ್ತ ಮಹಾರಾಜನು ತಾನು ಕಂಡ ಹದಿನಾರು ಕನಸುಗಳನ್ನು ಭದ್ರಬಾಹುಸ್ವಾಮಿಗಳವರಲ್ಲಿ ಅರುಹಿ ಅವುಗಳ ಫಲವನ್ನು ತಿಳಿಸಬೇಕೆಂದು ಬೇಡಿದನು. ಈ ಸ್ವಪ್ನಗಳಲ್ಲೊಂದಾದ ಹನ್ನೆರಡು ತಲೆಯ ಹಾವನ್ನು ಕಂಡದ್ದರಿಂದ ನಾಡಿನಲ್ಲಿ ಹನ್ನೆರಡು ವರ್ಷಂಬರಂ ರೌದ್ರಪಸವ ಮಕ್ಕು ಎಂದು ಮತ್ತು ಮುಂದೆ ಮಂಡಳಿಕರು ಜಿನದೀಕ್ಷೆಯನ್ನು ಕೈಗೊಳ್ಳರು ಎಂದು ಹೇಳಿದರು. ಅದನ್ನು ಕೇಳೀ, ಚಂದ್ರಗುಪ್ತರಾಜನು. ಭಯಭೀತನಾಗಿ ಸಿಂಹಸೇನನೆಂಬ ಮಗನಿಗೆ ರಾಜ್ಯಪಟ್ಟ ಕಟ್ಟಿ ಭದ್ರಬಾಹು ಭಟ್ಟಾರರ ಪಕ್ಕ ಪಲಂಬರು ಅರಸು ಮಕ್ಕಳ್ವೆರಸು ಆ ದಿವಸಮೇ ತಪಂಬಟ್ಟ. ಬಳಿಕ ಮಧ್ಯದೇಶದೊಳಿರ್ದರಿಸಿಯರ್ಕಳ್ಗೆಲ್ಲಂ ಬಳಿಯಟ್ಟಿ ಬರಿಸಿ ಭಟ್ಟಾರರಿಂತೆಂದರ್. ಪನ್ನೆರಡು ವರ್ಷಂಬರೆಗಂ ಈ ನಾಡೊಳನಾವೃಷ್ಟಿಯಾಗಿ

ಮಹಾರೌದ್ರಪಸವಮಕ್ಕುಂ...... ಪೋಪಂ ದಕ್ಷಿಣಾಪಥಕ್ಕೆಂದಾ ಚಾರ್ಯರ್ಕಳ್ ಸಹಿತ, ಇಚ್ಛಾರ್ಸಿರಸಿಸಮುದಾಯಮುಂ ಚಂದ್ರಗುಪ್ತ ಮುನಿಯುಂ ಬೆರಸುದಾಕ್ಷಿಣಾಪಥಕ್ಕೆ ಪೋದರ್.

ಈ ಮೇಲಿನ ಕಥಾಪ್ರಸಂಗವನ್ನು ಗಮನಿಸಿದಲ್ಲಿ ಹನ್ನೆರಡು ವರ್ಷಗಳ ಕಾಲ ಸಂಭವಿಸಲಿದ್ದ ದುಷ್ಕಾಲವನ್ನು– ಮಗುವಿನ ಮಾತು ಮತ್ತು ಚಂದ್ರಗುಪ್ತ ರಾಜನಕನಸು– ಈ ಎರಡು ನಿಮಿತ್ತಗಳಿಂದ ತಿಳಿಯಲಾದಂತೆ ಹೇಳಿದೆ. ಇದಲ್ಲದೆ ದಕ್ಷಿಣಾ ಪಥಕ್ಕೆ ಪ್ರಯಾಣ ಮಾಡಬೇಕೆಂಬ ನಿರ್ಣಯದ ಆದೇಶವನ್ನು ರಿಸಿಗಳಿಗೆ ಒಮ್ಮೆ ಮೊದಲ ನಿಮಿತ್ತದ ಅನಂತರದಲ್ಲಿ ಮತ್ತೆ ಎರಡನೆಯ ನಿಮಿತ್ತದ ಅನಂತರದಲ್ಲಿ ಹೀಗೆ ಎರಡು ಬಾರಿ ಕಳುಹಿಸಿದಂತೆ ಹೇಳಿದೆ. ಈ ಎರಡು ನಿಮಿತ್ತಗಳು ಮತ್ತು ದಕ್ಷಿಣಾಪಥಕ್ಕೆ ಹೋಗಬೇಕೆಂಬ ಎರಡು ಬಾರಿಯ ಆದೇಶಗಳು ಮೂಲತಃ ಇಬ್ಬರು ಭದ್ರಬಾಹುಗಳಿಗೆ ಸಂಬಂಧಿಸಿದ ಐತಿಹ್ಯಗಳಾಗಿದ್ದು ನಾಮಸಾದೃಶ್ಯದ ಕಾರಣದಿಂದ ಕಾಲಾಂತರದಲ್ಲಿ ಶ್ರುತ ಕೇವಲಿ ಭದ್ರಬಾಹು ಸ್ವಾಮಿಯವರ ಐತಿಹ್ಯದಲ್ಲಿ ಮಿಶ್ರುವಾಗಿ ಐಕ್ಯತೆ ಹೊಂದಿವೆಯೆಂದು ತಿಳಿಯಬಹುದಾಗಿದೆ. ಚಂದ್ರಗುಪ್ತನ ಕನಸಿನ ನಿಮಿತ್ತವು ಶ್ರುತಕೇವಲಿ ಭದ್ರಬಾಹುಸ್ವಾಮಿಯವರ ಐತಿಹ್ಯ ಸಂಬಂಧಿಯಾದುದೆಂಬುದರಲ್ಲಿ ಸಂಶಯವಿಲ್ಲ. ಇದಲ್ಲದೆ ಸಂಭವಿಸಲಿದ್ದ ದುಷ್ಕಾಲ 'ಪ್ರಜಾಪೀಡನ ಕಾರಿ' ಯಾಗುವುದೆಂಬ ಸಂಗತಿಯೂ ಶ್ರುತಕೇವಲಿ ಭದ್ರಬಾಹುಸ್ವಾಮಿಯವರ ಐತಿಹ್ಯ ಸಂಬಂಧಿಯಾದುದೆಂದು ಅನ್ಯತ್ರ ಸ್ಫುಟೀಕರಣ ಮಡಲಾಗಿದೆ.[೨೫] ಹೀಗೆಯೇ ಶಿಶುವೊಂದರ ಮಾತಿನ ನಿಮಿತ್ತ ಮತ್ತು ಹನ್ನೆರಡು ವರ್ಷಗಳ ಕಾಲದ ಕ್ಷಾಮಗಾಲ ಸಂಗತಿಗಳು ಮತ್ತೊಬ್ಬ ಭದ್ರಬಾಹುಸ್ವಾಮಿಗಳಿಗೆ ಸಂಬಂಧಿಸಿದುದಾಗಿದ್ದು. ಹಿಂದೆ ಉಲ್ಲೇಖಿಸಿರುವ ಶ್ರವಣಬೆಳಗುಳದ ಒಂದನೇ ನಂಬರಿನ ಶಾಸನದ ಎರಡನೇ ಭದ್ರಬಾಹುಗಳಿಗೆ ಸಂಬಂಧಿಸಿದ ಐತಿಹ್ಯವಾಗಿದಯೆಂದು ತಿಳಿಯುವುದು ಸಮುಚಿತವಾಗಿದೆ.

ಶ್ರುತಧರ ಆಚಾರ್ಯಾನುಕ್ರಮದಲ್ಲಿ 'ಭದ್ರಬಾಹು' ಎಂಬ ಹೆಸರಿನ ಮೂವರು ಆಚಾರ್ಯರಾಗಿದ್ದು ಇವರಲ್ಲಿ ಮೊದಲನೆಯವರು ದ್ವಾ. ಚ, ಪೂ. ಶ್ರುತಕೇವಲಿ ಭದ್ರಬಾಹುಸ್ವಾಮಿಯವರೆಂದೂ ಮತ್ತು ಇವರು ಚಂದ್ರಗುಪ್ತರಾಜ ಮುನಿ ಮತ್ತು ಮುನಿಸಂಘದೊಡನೆ ಬಂದು ಶ್ರವಣಬೆಳಗುಳದಲ್ಲಿ ಸಮಾಧಿ ಮರಣಹೊಂದಿದರೆಂಬ ಸಂಗತಿ

ಸಾಧಾರಣವಾಗಿ ಎಲ್ಲರಿಂದ ಅಂಗೀಕರಿಸಲ್ಪಟ್ಟದ್ದಾಗಿ ಪ್ರಸಿದ್ಧವಾಗಿದೆ. ಎರಡನೆಯ ಭದ್ರಬಾಹು ಸ್ವಾಮಿಯವರು ಅಷ್ಟ ಅಂಗ ಶ್ರುತಧರರಾಗಿದ್ದು. ಇವರು ಉಜ್ಜಯಿನೀ ಸಮೀಪದ ಭಾದ್ರಪದ ದೇಶದಲ್ಲಿ ಸಮಾಧಿ ಮರಣಹೊಂದಿದರೆಂದು ಹಿಂದೆ ಸ್ಪಷ್ಟಪಡಿಸಲಾಗಿದೆ. ಇನ್ನು ಮೂರನೆಯ ಭದ್ರಸ್ವಾಮಿಯವರು ಆಚಾರಾಂಗ ಶ್ರುತಪಾಟಿಗಳಲ್ಲಿ ಉಪಾಂತ್ಯರಾಗಿದ್ದು ಅಂತಿಮ ಆಚಾರಾಂಗ ಶ್ರುತಧರರಾದ ಲೋಹಾಚಾರ್ಯರ ಗುರುಗಳಾಗಿದ್ದರು. ಈ ಹಿಂದೆ ಉಲ್ಲೇಖಿಸಿರುವ ಶ್ರವಣಬೆಳಗುಳದ ಶಾಸನದಲ್ಲಿ ಹೆಸರಿಸಿರುವ ಭದ್ರಬಾಹು ಎಂಬ ಹೆಸರಿನವರಿಬ್ಬರಲ್ಲಿ ಇವರೇ ಎರಡನೆಯ ಆಚಾರ್ಯರಾಗಿದ್ದಾರೆಂಬುದರಲ್ಲಿ ಈಗ ಸಂದೇಹಪಡುವಂತಿಲ್ಲ.

ಶ್ರುತಧರ ಆಚಾರ್ಯಾನುಕ್ರಮದಲ್ಲಿ ಭದ್ರಬಾಹು ಎಂಬ ಹೆಸರನ್ನು ಹೊಂದಿದ್ದವರಲ್ಲಿ ಇವರು ಮೂರನೆಯವರಾಗಿದ್ದಾರೆ.

ಅರ್ಹದ್ಬಲಿ ಸ್ವಾಮಿಯವರ ಬಗ್ಗೆ ಹಿಂದೆ ಪ್ರಸ್ತಾವಿಸಲಾಗಿದೆ : ಇವರಿಗೆ "ಗುಪ್ತಿಗುಪ್ತ" ಎಂಬ ಮತ್ತೊಂದು ಹೆಸರಿದ್ದಿತೆಂಬುದಲ್ಲದೆ ನಂದಿ ಆಮ್ನಾಯ ಪಟ್ಟಾವಲಿಯಲ್ಲಿ ಪ್ರಾಕೃತ ಭಾಷೆಯಲ್ಲಿ ಇವರನ್ನು 'ಅಹಿವಲ್ಲಿ' ಎಂದು ಹೆಸರಿಸಿದೆ. ಇಷ್ಟಲ್ಲದೆ, ಇದೇ ಪಟ್ಟಾವಲಿಯಲ್ಲಿ ಇವರಿಗೆ ವಿಶಾಖಾಚಾರ್ಯ ಎಂಬ ಹೆಸರಿದ್ದಿತೆಂದೂ ಹೇಳಿದೆ. ಇವರ ಮುನಿಜೀವನದ ಬಗ್ಗೆ ಉಪಲಬ್ಧವಿರುವ ಐತಿಹ್ಯದನುಗುಣವಾಗಿ, 'ಗುಪ್ತಿಗುಪ್ತ' ಎಂಬ ಹೆಸರಿನಿಂದ ವಿಶ್ರುತರಾದ ಇವರು ಭದ್ರಬಾಹು ಮುನಿ ಪುಂಗವನ ಪಟ್ಟವೆಂಬ ಪದ್ಮ(ಕಮಲ)ಕ್ಕೆ ಸೂರ್ಯನಂತಿದ್ದವರು ಮತ್ತು ನಿರ್ಮಲ ಸಂಘವೃದ್ಧಿಯ ಮಾರ್ಗದರ್ಶಕರಾಗಿದ್ದರು. (ಟಿಪ್ಪಣಿ ೧ಳನ್ನು ನೋಡಿ) ಇದರಿಂದ ಭದ್ರಬಾಹು ಸ್ವಾಮಿಯವರ ಅನಂತರ ಇವರು ಮುನಿಸಂಘದ ಪ್ರಧಾನಾಚಾರ್ಯ ಪಟ್ಟಸ್ಥರಾಗಿರುವರೆಂದು ಸೂಚಿತವಾಗುವುದು ! ಇದಲ್ಲದೆ ಇವರು ಮುನಿಸಂಘದ ಪುನ ರ್ವ್ಯವಸ್ಥೆ ಮಾಡಿದ ಸಂಗತಿಯೂ ಸೂಚಿತವಾಗುವುದು. ಇವರಿಗೆ ವಿಶಾಖಾಚಾರ್ಯ ಎಂಬ ಹೆಸರಿದ್ದಿತೆಂಬ ಪಟ್ಟಾವಲಿಗಳ ಹೇಳಿಕೆಯಲ್ಲಿ ಒಂದು ವಿಶೇಷ ಐತಿಹ್ಯ ಸಂಗತಿ ಅಂತರ್ಗತವಾಗಿದೆಯೆಂದು ತಿಳಿಯಬಹುದು. ಶ್ರುತಕೇವಲಿಭಾದ್ರಬಾಹುಸ್ವಾಮಿಯವರು ಶ್ರವಣ ಬೆಳಗುಳದಲ್ಲಿ ಸಲ್ಲೇಖನ್ ಧಾರಣೆ ಮಾಡುವ ಮುನ್ನ ತಮ್ಮ ಶಿಷ್ಯಾಗ್ರೇಸರದ ವಿಶಾಖಾಚಾರ್ಯರನ್ನು ಮುನಿಸಂಘದ ಪ್ರಾಧಾನಾಚಾರ್ಯರನ್ನಾಗಿ

ನಿಯೋಜಿಸಿ ಮುನಿಸಂಘವು ಮುಂದೆ ಪಯಣ ಕೈಗೊಳ್ಳುವಂತೆ ಆದೇಶವಿತ್ತರೆಂಬುದು ತಿಳಿದ ಸಂಗತಿ. ಮೂರನೆಯ ಭದ್ರಬಾಹು ಸ್ವಾಮಿಯವರೂ ಶ್ರವಣ ಬೆಳಗುಳದಲ್ಲಿ ಸಲ್ಲೇಖನ ಕೈಗೊಂಡ ಸಂಗತಿಯನ್ನು ಹಿಂದೆ ಸ್ಪಷ್ಟಪಡಿಸಲಾಗಿದೆ. ಇವರು ತಮ್ಮ ಪ್ರಧಾನ ಶಿಷ್ಯಾಗ್ರೇಸರರಾಗಿದ್ದ ಗುಪ್ತಿಗುಪ್ತ–ಅರ್ಹದ್ಬಲಿ ಸ್ವಾಮೀಯವರನ್ನು ಪ್ರಧಾನಚಾರ್ಯಪಟ್ಟದಲ್ಲಿ ನಿಯೋಜಿಸಿ ಮುನಿಸಂಘಕ್ಕೆ ಪಯಣವನ್ನು ಮುಂದುವರಿಸಲು ಆದೇಶವಿತ್ತಿದ್ದಾರೆ. ಹಿಂದೆ ಶ್ರುತಕೇವಲಿ ಭದ್ರಬಾಹುಸ್ವಾಮಿಯವರ ತರುವಾಯ ವಿಶಾಖಾಚಾರ್ಯರು ಪ್ರಧಾನ ಆಚಾರ್ಯ ಪಟ್ಟಧರರಾದ ಸದೃಶ ಘಟನೆಯಲ್ಲಿ ಅರ್ಹದ್ಬಲಿ ಸ್ವಾಮಿಯವರು ಆಚಾರ್ಯ ಪಟ್ಟಧರರಾದ ಕಾರಣದಿಂದ ಇವರನ್ನೂ ವಿಶಾಖಾಚಾರ್ಯ ಎಂದು ಹೆಸರಿಸಿರುವ ರೂಢಿ ಬಂದಿದ್ದಲ್ಲಿ ಅದು ಅಸಂಗತವೆನಿಸುವುದಿಲ್ಲ. ಆದ್ದರಿಂದ ಅರ್ಹದ್ಬಲ್ಯಾಚಾರ್ಯರ ಈ 'ವಿಶಾಖಾಚಾರ್ಯ' ಎಂಬ ಹೆಸರಿನ ಹಿನ್ನೆಲೆಯಲ್ಲಿ ಮೂರನೆ ಭದ್ರಬಾಹು ಸ್ವಾಮಿಯವರ ಅನಂತರ ಅರ್ಹದ್ಬಲಿ ಸ್ವಾಮಿಯವರು ಆಚಾರ್ಯಪಟ್ಟಧರರಾಗಿ ಮುನಿಸಂಘ ದೊಡನೆ ಶ್ರವಣಬೆಳಗುಳದಿಂದ ಮುಂದೆ ಪಯಣ ಕೈಗೊಂಡ ಸಂಗತಿ ಅಂತರ್ಹಿತವಾಗಿದೆಯೆಂದು ತಿಳಿಯಬಹುದಾಗಿದೆ.

ಇವರಿಂದಾದ ಮೂಲ ಮುನಿಸಂಘದ ಪುನರ್ವ್ಯವಸ್ಥೆಯ ಐತಿಹ್ಯವು ಶ್ರುತಾವತಾರವೇ ಮುಂತಾದ ಐತಿಹ್ಯ ಗ್ರಂಥಗಳಲ್ಲಿ ಉಳಿದುಬಂದಿರುವ ಪ್ರಸಿದ್ಧ ವಿಷಯವಾಗಿದೆ. ಇವರು ತಮ್ಮ ನೇತೃತ್ವದ ಮುನಿಗಳ ಮೂಲ ಸಂಘವನ್ನು ನಂದಿ, ದೇವ, ಅಪರಾಜಿತ, ವೃಷಭ ಮತ್ತು ಭದ್ರ ಎಂಬ ಐದು ಪ್ರಧಾನ ಸಂಘಗಳಾಗಿ ರಚಿಸಿದರು; ಪುನಃ ಈ ಪ್ರತಿಯೊಂದು ಸಂಘವನ್ನು ನಾಲ್ಕು ನಾಲ್ಕು ಗಣಗಳಾಗಿ ವಿಭಜಿಸಿದರು. ಇವುಗಳಲ್ಲಿ ಪ್ರತಿಯೊಂದು ಸಂಘದ ಮೊದಲನೆಯ ಗಣವು ಅದೇ ಸಂಘದ ಹೆಸರನ್ನು ಹೊಂದಿರುತ್ತಿದ್ದಿತು. ಉದಾಹರಣೆಯಾಗಿ ನಂದಿಸಂಘವು ನಂದಿ, ಚಂದ್ರ, ಕೀರ್ತಿ ಮತ್ತು ಭೂಷಣ ಎಂಬ ನಾಲ್ಕು ಗಣಗಳನ್ನೊಳಗೊಂಡಿದ್ದು, ಮೊದಲನೆಯ ಗಣದ ಹೆಸರು 'ನಂದಿ' ಎಂಬ ಹೆಸರನ್ನೇ ಹೊಂದಿದ್ದಿತು. ಈ ಗಣಗಳ ಮುನಿಗಳು ಆಯಾಯಗಣ ಸೂಚಕವಾದ ನಂದಿ, ಚಂದ್ರ, ಕೀರ್ತಿ ಮತ್ತು ಭೂಷಣ ಎಂಬ ಪದಗಳಿಂದ ಅಂತ್ಯವಾಗುವ ಹೆಸರುಗಳನ್ನು

ಹೊಂದಿರುತ್ತಿದ್ದರು. ಅರ್ಹದ್ಬಲಿ ಸ್ವಾಮಿಯವರಿಂದ ರಚಿತವಾದ ಈ ಸಂಘ–ಗಣ ಭೇದಗಳನ್ನು ಸಮುಚ್ಚಯ ರೀತಿಯಿಂದ ಈ ಮುಂದಿನ ರೇಖಾಂಕಣದಿಂದ ತಿಳಿಯಬಹುದು.

ಈ ಸಂಘ–ಗಣ ವ್ಯವಸ್ಥೆಯ ಕ್ರಮವನ್ನು ಶ್ರುತಾವತಾರ ಮತ್ತು ನಂದಿ ಆಮ್ನಾಯ ಅರ್ಹದ್ಬಲಿ ಸ್ವಾಮಿಯವರಿಂದಾದ ಸಂಘವ್ಯವಸ್ಥೆ ನಂದಿ– ವಿಷ್ಣು, ದೇವನಂದಿ, ಅಪರಾಜಿತ, ವೃಷಭಾ(ಗೋವರ್ಧನ) ಮತ್ತು ಭದ್ರಬಾಹು ಎಂಬ ಐವರು ಶ್ರುತ ಕೇವಲಿಗಳ ಹೆಸರುಗಳನ್ನು

ಸ್ತೂಪಸದೃಶವಾಗಿ ಹೊಂದಿದ–

ಪಂಚಸ್ತೂಪನ್ವಯ ಸಂಘ

| ನಂದಿ ಸಂಘ | ದೇವ ಸಂಘ | ಅಪರಾಜಿತ ಸಂಘ | ವೃಷಭಾ ಸಂಘ | ಭದ್ರ ಸಂಘ |
|---|---|---|---|---|
| ನಂದಿ | ದೇವ | ಅಪರಾಜಿತ | ವೃಷಭ | ಭದ್ರ |
| ಚಂದ್ರ | ದತ್ತ | ಕುಂಭ (ಆಸ್ರವ?) | ಗುಪ್ತ | ವೀರ |
| ಕೀರ್ತಿ | ನಾಗ | ಸಿಂಹ | ಧರ | ರಾಜ |
| ಭಷಣ | ತುಂಗ | ಸಾಗರ | ಪಾಲ | ಸೇನ |

ಪಟ್ಟಾವಲಿಗಳಾಧಾರದಿಂದ ನಿರೂಪಿಸಲಾಗಿದೆ.

ಈ ರೀತಿಯದಾದ ಗಣಗಳಿಂದ ಕೂಡಿದ ಸಂಘಗಳ ರಚನೆ ಮಾಡಿದ ಅನಂತರ ಒಂದೊಂದು ಸಂಘಕ್ಕೂ ಒಬ್ಬೊಬ್ಬ ಪ್ರಧಾನ ಆಚಾರ್ಯರನ್ನು ನಿಯೋಜಿಸಲಾಯಿತು. ನಂದಿಸಂಘಕ್ಕೆ ಮಾಘಾನಂದಿ ಸ್ವಾಮಿಯವರು ಪ್ರಧಾನ ಆಚಾರ್ಯರಾದರು. ಅವರ ಬಳಿಕ ಜಿನಚಂದ್ರರು, ಅನಂತರ ಪದ್ಮನಂದಿ

ಕುಂದಕುಂದರು ಅವರ ಅನಂತರ ಗೃದ್ಧ್ರಪಿಂಛ ಉಮಾಸ್ವಾತಿಯವರು– ಈ ಮುಂತಾಗಿ ನಂದಿ ಸಂಘ–ಸರಸ್ವತೀಗಚ್ಛದ ಆಚಾರ್ಯನುಕ್ರಮದ ಐತಿಹ್ಯವು ನಂದಿಸಂಘ ಪಟ್ಟಾವಲಿಯಲ್ಲಿ ಉಳಿದು ಬಂದಿದೆ. ಇತರ ಸಂಘಗಳ ಆಚಾರ್ಯನುಕ್ರಮದ ವಿವರ ಲಭ್ಯವಿಲ್ಲ. ಆದರೆ ಸೇನಗಣದ ಆಚಾರ್ಯನುಕ್ರಮವು ಪುನ್ನಾಟಸಂಘದ ಜಿನಸೇನಾಚಾರ್ಯರ ಹರಿವಂಶ ಪುರಾಣದಲ್ಲಿ ಲಭ್ಯವಿದೆ.

ಆಚಾರಂಗಧರ (ಮೂರನೇ) ಭದ್ರಬಾಹು ಸ್ವಾಮಿಯವರು ವೀ. ನಿರ್ವಾಣಾ ನಂತರ ೬೩೩ನೇ ವರ್ಷದಲ್ಲಿ (ಎಂದರೆ ೬೩೨ ವ. ೧೦ ತಿಂ. ೨೭ ದಿನಗಳಲ್ಲಿ) ಸ್ವರ್ಗಸ್ಥರಾಗಿರುವರೆಂದು ಹಿಂದೆ ತಿಳಿಸಲಾಗಿದೆ. ಇವರ ಅನಂತರದ ಆಚಾರ್ಯನುಕ್ರಮವನ್ನು ಪ್ರತಿಯೊಬ್ಬರ ಪಟ್ಟಕಾಲಗಳೊಡನೆ ಪಟ್ಟಾವಲಿಯಲ್ಲಿ ಹೇಳಿದೆ. ಇದರನುಗುಣವಾಗಿ ಅರ್ಹದ್ಬಲಿ (ಗುಪ್ತಿಗುಪ್ತ). ಮಾಘನಂದಿ, ಜಿನಚಂದ್ರ ಪದ್ಮನಂದಿ (ಕುಂದಕುಂದ) ಮತ್ತು ಗೃದ್ಧ್ರಪಿಂಛರು (ಉಮಾಸ್ವಾತಿಯವರು) ಅನುಕ್ರಮವಾಗಿ ೯ವ.೬.ತಿಂ. ೨೫ ದಿ. ೪ ವ. ೪ ತಿಂ. ೨೬ ದಿ. ೮ ವ. ೯ ತಿಂ. ೬ ದಿ, ೫೧ ವ. ೧೦ ತಿಂ. ೧೦ ದಿ. ಮತ್ತು ೪೦ ವ. ೮ ತಿಂ. ೧ ದಿ. ಆಚಾರ್ಯಪಟ್ಟಸ್ಥರಾಗಿದ್ದರು. ಈ ಗಣನೆಯಂತೆ ಅರ್ಹದ್ಬಲಿ ಸ್ವಾಮಿಯವರು ವೀ. ನಿರ್ವಾಣಾನಂತರದ ೬೪೩ನೇ ವರ್ಷದಲ್ಲಿ ದಿವಂಗತ ರಾಗಿದ್ದಾರೆ, ಮತ್ತು ಕುಂದಕುಂದಸ್ವಾಮಿಯವರು ೭೦೭ನೇ ವರ್ಷದಲ್ಲಿ ದಿವಂಗತ ರಾಗಿರುವರೆಂದು ಪರಿಗಣಿತವಾಗುವುದು[೨೬].

ಮೂರನೇ ಭದ್ರಬಾಹು ಸ್ವಾಮಿಯವರ ಅನಂತರದಲ್ಲಿ ಅರ್ಹದ್ಬಲಿ ಸ್ವಾಮಿಯವರು ಆಚಾರ್ಯಪಟ್ಟಧರರಾಗಿದ್ದು ಅವರ ಅನಂತರ ಅವರಿಂದ ರೂಪಗೊಂಡ ಮುನಿಸಂಘಗಳ ಆಚಾರ್ಯರಾಗಿ ಮಾಘನಂದಿಯವರೇ ಮುಂತಾದವರು ಪಟ್ಟಧರರಾದ ಸಂಗತಿ ಈಗ ಸ್ಪಷ್ಟಗೊಂಡಿದೆ. ಪ್ರಸ್ತುತ ಪ್ರಸಂಗದಲ್ಲಿ ಅಗತ್ಯವಾಗಿ ಗಮನಿಸಬೇಕಾಗಿರುವ ಒಂದು ಮುಖ್ಯ ಅಂಶವಿದೆ: ನಂದಿ ಆಮ್ನಾಯ ಪಟ್ಟಾವಲಿ ಪ್ರತಿಗಳ ಹೊರತಾಗಿ ಮಿಕ್ಕೆಲ್ಲ ಎಡೆಗಳಲ್ಲಿಯೂ ಲೋಹಾರ್ಯ ಎಂಬುವರನ್ನು ಅಂತಿಮ ಆಚಾರಾಂಗಶ್ರುತಧರರನ್ನಾಗಿ ತೋರಲಾಗಿದೆ. (ತೃ) ಭದ್ರಬಾಹುಸ್ವಾಮಿಯವರು ಉಪಾಂತ್ಯ ಆಚಾರಾಂಗ ಶ್ರುತಧರರಾಗಿದ್ದರೆಂಬುದು ಹಿಂದಿನ ವಿವರಣೆಯಿಂದ ಸ್ಪಷ್ಟಗೊಂಡಿದೆ. ಇದರಿಂದ ತೃತೀಯ ಭದ್ರಬಾಹು ಸ್ವಾಮಿಯವರ

ಉತ್ತರಾಧಿಕಾರಿಯಾಗಿ ಪಟ್ಟಸ್ಥರಾದವರು ಅರ್ಹದ್ಬಲಿ ಸ್ವಾಮಿಯವರೆ, ಇಲ್ಲವೆ ಲೋಹಾರ್ಯರೆ,ಎಂಬ ಪ್ರಶ್ನೆ ಈಗ ಉದ್ಭವಿಸುವುದು. ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಶ್ರುತಧರ ಆಚಾರ್ಯ ಪರಂಪರೆ ಐತಿಹ್ಯದ ಮೂಲ ಉದ್ದೇಶವೇನೆಂಬುದನ್ನು ತಿಳಿದುಕೊಳ್ಳಬೇಕಾಗಿದೆ :

ಭಗವಾನ್ ಮಹಾವೀರನ ಅನಂತರದಲ್ಲಿ ಶ್ರುತಜ್ಞಾನವು ಗೌತಮಗಣಧರಾದಿಯಾದ ಗುರುಶಿಷ್ಯಾನುಕ್ರಮದಲ್ಲಿ ಅನುಬದ್ಧರೀತಿಯಿಂದ ಅವಿಚ್ಛಿನ್ನವಾಗಿ ಲೋಹಾರ್ಯರ ಪರ್ಯಂತ ೬೮೩ ವರ್ಷಗಳವರೆಗೆ ಉಳಿದು ಬಂದಿತು ಮತ್ತು ಹೀಗೆ ಉಳಿದು ಬಂದಿದ್ದ ಶ್ರುತಜ್ಞಾನದಾಧಾರದಿಂದ ಷಟ್‌ಖಂಡಾಗಮ ಮತ್ತು ಕಸಾಯಪಾಹುಡಗಳ ರಚನೆ ಹೇಗೆ ಆಯಿತೆಂಬುದರ ಪ್ರರೂಪಣೆಯು ಶ್ರುತಧರ ಆಚಾರ್ಯಾನುಕ್ರಮ ಐತಿಹ್ಯದ ಮುಖ್ಯ– ಮೂಲ ಉದ್ದೇಶವಾಗಿದೆ.

ಎರಡನೆಯದಾಗಿ– ಈ ಶ್ರುತಧರ ಆಚಾರ್ಯಾನುಕ್ರಮದಲ್ಲಿ ತೃ–ಭದ್ರಬಾಹು ಸ್ವಾಮಿಯವರ ಕಾಲದವರೆಗೆ ನಿರ್ಗ್ರಂಥ ಮುನಿಸಂಘವು ಏಕೈಕ ಘಟಕವಾಗಿ ಉಳಿದಿದ್ದು ಅನಂತರದಲ್ಲಿ ದಿಗಂಬರ ಮತ್ತು ಶ್ವೇತಾಂಬರ ಎಂಬ ಎರಡು ಘಟಕಗಳಾಗಿ ಒಡೆಯಿತು. ಈ ಬಳಿಕ ದಿಗಂಬರ ಪಂಥದ ಘಟಕವನ್ನು ಸಂಘ ಮತ್ತು ಗಣಗಳಾಗಿ ರೂಪಿಸಿ ಪುನರ್ವ್ಯವಸ್ಥೆ ಮಾಢಬೇಕಾಯಿತು. ಈ ಪುನರ್ವ್ಯವಸ್ಥೆಯ ಕಾರ್ಯವು ಅರ್ಹದ್ಬಲಿಯವರಿಂದಾಯಿತು. ಈ ಪುನರ್ವ್ಯವಸ್ಥೆಯ ಸಮಯಕ್ಕಿಂತ ಹಿಂದಿನದಾದ ಪೂರ್ವಾಚಾರ್ಯಾನುಕ್ರಮದ ಸಂಘವು ಮೂಲ ಸಂಘವೆನಿಸಿಕೊಂಡಿದೆ. ಇದು ಗೌತಮಗಣಧರಾದಿಯಾಗಿ (ತೃ) ಭದ್ರಬಾಹುಸ್ವಾಮಿಯವರ ಪರ್ಯಂತದ ಮುನಿ ಸಂಘದ ಸೂಚಕವಾಗಿದೆ. ಸಂಘ–ಗಣ ವ್ಯವಸ್ಥಾಪಕರಾದ ಅರ್ಹದ್ಬಲಿ ಸ್ವಾಮಿಯವರನ್ನೂ ಮೂಲ ಸಂಘದವರನ್ನಾಗಿ ತಿಳಿಯಬೇಕಾಗುತ್ತದೆ. ಅರ್ಹದ್ಬಲಿ ಸ್ವಾಮಿಯವರು ರೂಪಿಸಿದ ಐದು ಸಂಘಗಳಿಗೂ ಪೂರ್ವಾನ್ವಯವಾಗಿ ಮೂಲಸಂಘವು ಒಂದೇ ಆಗಿದೆ. ಇದರಂತೆ ಈ ನಂದಿ ಮುಂತಾದ ಸಂಘಗಳ ಪಟ್ಟಾವಲಿಗಳು ಮುಂಚಿತವಾಗಿ ಮೂಲಸಂಘದ ಆಚಾರ್ಯಾನುಕ್ರಮವನ್ನು ಹೇಳಿ ಆ ಬಳಿಕ ಆಯಾಯಾ ಸಂಘಗಳ ಪ್ರತ್ಯೇಕ ಆಚಾರ್ಯಾನುಕ್ರಮವನ್ನು ಹೇಳುತ್ತವೆ. ಉದಾಹರಣೆಯಾಗಿ : ನಂದಿ ಅಮ್ನಾಯ ಪಟ್ಟಾವಲಿಯಲ್ಲಿ ಭಾಗವಾನ್ ಮಹಾವೀರನ ಬಳಿಕ ಗೌತಮಗಣಧಾರಿಯಾಗಿ ತೃತೀಯ ಭದ್ರಬಾಹು ಸ್ವಾಮಿ ಪರ್ಯಂತದ ಆಚಾರ್ಯನುಕ್ರಮವನ್ನು ಹೇಳಿ ಅನಂತರದಲ್ಲಿ ಅರ್ಹದ್ಬಲಿ

ಸ್ವಾಮಿಯವರನ್ನು, ಅವರ ಬಳಿಕ ಮಾಘಾನಂದಿ, ಜಿನ ಚಂದ್ರ, ಕುಂದಕುಂದ ಸ್ವಾಮಿ ಮುಂತಾದ ಆಚಾರ್ಯಾನುಕ್ರಮವನ್ನು ಹೇಳಿದೆ. ಅರ್ಹದ್ಬಲಿ ಸ್ವಾಮಿಯವರು ಮುನಿಸಂಘವ್ಯವಸ್ಥೆ ಮಾಡಿ ನಂದಿಸಂಘಕ್ಕೆ ಮಾಘ ನಂದಿಯವರನ್ನು ಪ್ರಧಾನಾಚಾರ್ಯರನ್ನಾಗಿ ನಿಯೋಜನೆ ಮಾಡಿದರು. ಇತರ ಸಂಘಗಳ ಅಥವಾ ಗಣಗಳ ಪಟ್ಟಾವಲಿಗಳಲ್ಲಿಯೂ ಇದೇ ರೀತಿಯದಾದ ಕ್ರಮವನನ್ನುಸರಿಸಲಾಗಿದೆ. ದೃಷ್ಟಾಂತವಾಗಿ ಪುನ್ನಾಟಜಿನಸೇನಾಚಾರ್ಯರ ಹರಿವಂಶಪುರಾಣದಲ್ಲಿ ಹೇಳಲಾಗಿರುವ ಸೇನಗಣದ ಪಟ್ಟಾವಲಿಯನ್ನು ನೋಡಬಹುದು. ಹೀಗೆಯೇ ಷಟ್ ಖಂಡಾ ಗಮರಚನೆಗೆ ಸಂಬಂಧಿಸಿದಂತೆ, ಅದರ ರಚನೆಯಕಾಲ ಪರ್ಯಂತ ಶ್ರುತವು ಹೇಗೆ ಉಳಿದುಬಂದಿದ್ದಿತೆಂಬ ಶ್ರುತಾವತರಣ ಐತಿಹ್ಯ ನಿರೂಪಣೆಯಲ್ಲಿಯೂ ಅದೇ ಗೌತಮಗಣಧರಾದಿ (ತೃ) ಭದ್ರಸ್ವಾಮಿ ಪರ್ಯಾಂತರಾದ ಆಚಾರ್ಯನುಕ್ರಮವನ್ನು ಹೇಳಿದೆ. ಆದರೆ (ತೃ) ಭಾದ್ರಬಾಹು ಸ್ವಾಮಿಯವರ ಅನಂತರದಲ್ಲಿ ಮುನಿ ಸಂಘಾಧಿಪ ಆಚಾರ್ಯಾನು ಕ್ರಮದ ಐತಿಹ್ಯದಲ್ಲಿ ಅರ್ಹದ್ಬಲಿ ಸ್ವಾಮಿಯವರನ್ನು ಹೆಸರಿಸಿದೆಯಾದಲ್ಲಿ ಶ್ರುತಧರ ಆಚಾರ್ಯಾನುಕ್ರಮದ ಐತಿಹ್ಯದಲ್ಲಿ (ತೃ) ಭದ್ರಬಾಹು ಸ್ವಾಮಿಯವರ ಅನಂತರ ಲೋಹಾರ್ಯರನ್ನು ಹೆಸರಿಸಿದೆ. ಮುನಿ ಸಂಘಾಧಿಪ ಆಚಾರ್ಯಾನುಕ್ರಮದ ಐತಿಹ್ಯ ರಚನೆಯು ಕ್ರಿ.ಶ. ೮ನೇ ಶತಮಾನಕ್ಕಿಂತಲೂ ಪೂರ್ವಭಾವಿಯಾಗಿಯೇ ನಡೆದಿದೆ ಎಂದು ಹೇಳಲವಕಾಶವಿದೆ. ಪುನ್ನಾಟ ಸಂಘದ ಜಿನಸೇನಾ ಚಾರ್ಯರಿಂದ ಶಾಲಿವಾಹನ್ ಶಕ ೭೦೦ (ಕ್ರಿ. ಶ. ೭೭೮)ರಲ್ಲಿ ರಚನೆ ಪೂರ್ಣಗೊಂಡಿರುವ ಹರಿವಂಶಪುರಾಣದಲ್ಲಿ ಸೇನ ಮುನಿ ಗಣದ ಆಚಾರ್ಯಾನುಕ್ರಮವನ್ನು ಹೇಳಿದೆ. ಇದರಿಂದ ಈ ಹರಿವಂಶ ಪುರಾಣದ ರಚನೆಯ ಕಾಲಕ್ಕಿಂತ ಬಹು ದೀರ್ಘಾಕಾಲದ ಮುಂಚಿನಿಂದಲೇ ಸೇನ ಮುನಿಗಣದ ಆಚಾರ್ಯಾನುಕ್ರಮದ ಐತಿಹ್ಯವು ಪರಂಪರಾಗತವಾಗಿ ಆರೂಢವಾಘಿದ್ದಿತೆಂದು ಸೂಚಿತವಾಗುವುದು. ಹೀಗೆಯೇ ಮಾಘನಂದ್ಯಾಚಾರ್ಯರಿಂದ ಆರಂಭವಾದ ನಂದಿಮುನಿಸಂಘದ ಆಚಾರ್ಯಾನುಕ್ರಮದ ಐತಿಹ್ಯವೂ ಪರಂಪರಾಗತವಾಘಿ ಆರೂಢವಾಗಿದ್ದಿತೆಂದು ತಿಳಿಯಬಹುದಾಗಿದೆ. ಇದಲ್ಲದೆ ಪ್ರತಿಕ್ರಮಣದ ಆಚರಣೆಯಲ್ಲಿ ಮುನಿಗಳು ತಮ್ಮ ತಮ್ಮ ಸಂಘ ಮತ್ತು ಗಣಗಳ ಪೂರ್ವಾಚಾರ್ಯಾನುಕ್ರಮವನ್ನು ಪಠಣ ಮಾಡುವ ರೂಢಿ ಇದ್ದಿತು. (ನೋಡಿ–ಎಕ್ಸ್ ಚ್ರಾ ನಂ. ದಿ ಜರ್ನಲ್ ಆಫ್ ಬಾಂಬೇ ಬ್ರಾಂಚ್ ಆಫ್ ದಿ ರಾಯಲ್ ಏಸಿಯಾಟಿಕ್ ಸೊಸೈಟಿ; ೧೮೮೩ ಪುಟ

೧೬೩) ಇಂತಹುದಾದ ರೂಢಿಯು ಪ್ರಾಚೀನಕಾಲದಿಂದಲೂ ನಡೆದು ಬಂದಿದ್ದು ನಂದಿ ಆಮ್ನಾಯ, ಸೇನಗಣ ಆಮ್ನಾಯಗಳಂತಹ ಪಟ್ಟಾವಲಿಗಳ ರಚನೆಗೆ ಆಧಾರವಾಗಿದ್ದಿತೆಂದು ಹೇಳಲವಕಾಶವಿದೆ. ಕಾಲಾನುಕ್ರಮದಲ್ಲಿ ಮುನಿಸಂಘ ಆಚಾರ್ಯನುಕ್ರಮದ ಪಟ್ಟಾವಲಿ ರಚನಕಾರರಿಗೆ ಒಂದು ಸಮಸ್ಯೆ ಎದುರಾಗಿದೆ. ಈ ಪಟ್ಟಾವಲಿ ಐತಿಹ್ಯದಿಂದ ಭಿನ್ನತರವಾದ ಶ್ರುತಧರ ಆಚಾರ್ಯಾನುಕ್ರಮದ ಐತಿಹ್ಯದಲ್ಲಿ (ತೃ) ಭದ್ರಬಾಹು ಸ್ವಾಮಿಯವರ ಅನಂತರದಲ್ಲಿ ಲೋಹಾರ್ಯರನ್ನು ಅಂತಿಮ ಆಚಾರಾಂಗ ಶ್ರುತಧರರನ್ನಾಗಿ ಕಾಣಿಸಲಾಗಿದ್ದಿತು. ಮುನಿಸಂಘವನ್ನು ಪುನರ್ವ್ಯವಸ್ಥೆ ಮಾಡಿದ ಅರ್ಹದ್ಬಲಿಯವರು ಭದ್ರಬಾಹು ಸ್ವಾಮಿಯವರ ನಂತರದ ಆಚಾರ್ಯ ಪಟ್ಟಧರರಾಗಿದ್ದರು. ಈಗ ಪಟ್ಟಾವಲಿ ಐತಿಹ್ಯ ರಚನಕಾರರಿಗೆ ಭದ್ರಬಾಹುಸ್ವಾಮಿಯವರ ಅನಂತರ ಆದ ಆಚಾರ್ಯ ಪಟ್ಟಧರರು ಲೋಹಾರ್ಯರೊ ಇಲ್ಲದೆ ಅರ್ಹದ್ಬಲಿ ಸ್ವಾಮಿಯವರೊ ಎಂಬ ಸಮಸ್ಯೆ ಎದುರಾಯಿತು. ಇದಲ್ಲದೆ ಷಟ್ಖಂಡಾಗಮ ಕರ್ತೃಗಳಾದ ಪುಷ್ಪದಂತ ಮತ್ತು ಭೂತಬಲಿ ಆಚಾರ್ಯರಿಗೆ ಶ್ರುತದ ಉಪದೇಶವಿತ್ತ ಗುರುಗಳಾದ ಧರಸೇನರ ಹೆಸರು ಶ್ರುತಧರ ಆಚಾರ್ಯನುಕ್ರಮದಲ್ಲಿ ಕಂಡುಬಾರದಿದ್ದುದು ಒಂದು ಪ್ರಶ್ನೆಯಾಯಿತು. ಈ ಸಮಸ್ಯೆಗಳ ಪರಿಹಾರ್ಅವೆನಿಸಿ. ಶ್ರುತಧರ ಆಚಾರ್ಯನುಕ್ರಂದ ಐತಿಹ್ಯ ಸಂಗತಿಗಳಲ್ಲಿ ಆಚಾರಾಂಗ ಶ್ರುತಧರರೆಂದು ಹೆಸರಿಸಲಾಗಿದ್ದ, ಸುಭಾದ್ರ, ಯಶೋಭದ್ರ, ಭದ್ರಬಾಹು ಮತ್ತು ಲೋಹಾರ್ಯರನ್ನು[೨೨] ಪಟ್ಟಾವಲಿಯಲ್ಲಿ ದಶ, ನವ ಮತ್ತು ಅಷ್ಟ ಅಂಗಧರರನ್ನಾಗಿ ಗಾಹೆಯಲ್ಲಿ ಹೆಸರಿಸಲಾಯಿತು. ಇಲ್ಲಿ ಗಮನಿಸಬೇಕಾದ ಒಂದು ಅಂಶವಿದೆಃ ದಶ, ನವ ಮತ್ತು ಅಷ್ಟ ಎಂದು ಮೂರೇ ಸ್ಥಾನಗಳನ್ನು ಹೇಳಿ ಈ ಸ್ಥಾನಗಳಲ್ಲಿ ನಾಲ್ವರನ್ನು ಹೆಸರಿಸಿದೆ. ಇದರಿಂದ ನಾಲ್ಕನೆಯವರಾಗಿರುವ ಲೋಹಾರ್ಯರು ಅಷ್ಟ ಅಂಗ ಶ್ರುತಧರರೆ, ಇಲ್ಲವೆ ಸಪ್ತ ಅಂಗ ಶ್ರುತಧರರೆ ಎಂಬ ಪ್ರಶ್ನೆಗೆಡೆಯಾಗುವುದು (ಇದರ ರಾಜಾಸ್ಥಾನಿ ಭಾಷಾ ವಿವರಣೆಯಲ್ಲಿ ಇವರು ಸಪ್ತಅಂಗ ಶ್ರುತಧರರಾಗಿದ್ದರೆಂಬ ಅಭಿಪ್ರಾಯ ಸೂಚಿತವಾಗಿದೆ.) ಪಟ್ಟಾವಲಿಗಳಲ್ಲಿ, ಮುಂದುವರಿದು ಅಹಿವಲ್ಲಿ (ಅರ್ಹದ್ಬಲಿ), ಮಾಘನಂದಿ, ಧರಸೇನ, ಪುಷ್ಪದಂತ ಮತ್ತು ಭೂತಬಲಿ ಅಚಾರ್ಯರುಗಳನ್ನು ಅಚಾರಾಂಗ (ಏಕಾಂಗ) ಧಾರಿಗಳೆಂದು ನಿರೂಪಿಸಲಾಯಿತು. ಆದರೆ ಇದಕ್ಕೆ ಪೂರ್ವಾಮ್ನಾಯದ ಪ್ರಾಚೀನತರವಾದ ಯಾವ ಆಧಾರವೂ ಇದ್ದಂತೆ ಕಂಡುಬರುವುದಿಲ್ಲ.

ಶ್ರುತಧರ ಆಚಾರ್ಯ ಸಂತತಿ ನಿರೂಪಕ ಐತಿಹ್ಯದಲ್ಲಿಯೂ ಒಂದು ವಿಚಾರಾರ್ಹವಾದ ಪ್ರಶ್ನೆಯಿಂದೆ : ಪುಷ್ಪದಂತ ಮತ್ತು ಭೂತಬಲಿ ಸ್ವಾಮಿಗಳವರಿಂದ ಲಿಪಿಬದ್ಧಗೊಂಡ ಶ್ರುತವು ಹೇಗೆ ಗೌತಮಗಣಧರಾದಿಯಾಗಿ ಅನುಬದ್ಧರೀತಿಯಿಂದ ಅವಿಚ್ಛಿನ್ನವಾಗಿ ಗುರುಶಿಷ್ಯನುಕ್ರಮದಲ್ಲಿ ಲೋಹಾರ್ಯರ ಪರ್ಯಂತ ೬೮೩ ವರ್ಷಗಳ ಕಾಲ ಉಳಿದು ಬಂದಿತ್ತು ಎಂಬುದು ಸ್ಪಷ್ಟವಿದೆ. ಆದರೆ ಈಗ ಉಳಿದು ಬದಿರುವ ಐತಿಹ್ಯದಲ್ಲಿ ಲೋಹಾರ್ಯರ ಅನಂತರ ಷಟ್ಖಂಡಾಗಮವು ರೂಪುಗೊಳ್ಳುವ ಪರ್ಯಂತದ ಗುರುಶಿಷ್ಯಾನುಕ್ರದಲ್ಲಿ ಅನುಬದ್ಧತೆಯಾಗಲಿ, ಅವಿಚ್ಛಿನ್ನತೆಯಾಗಲ್ಲಿ ಸ್ಪಷ್ಟವಿಲ್ಲ. ಈ ಬಗ್ಗೆ ಶ್ರುತಾವತಾರದ ರಚನಾಕಾರರಾದ ಇಂದ್ರ ನಂದಿಯವರ ಮುಂದಿನ ಹೇಳಿಕೆಯನ್ನು ಗಮನಿಸಬೇಕಾಗಿದೆ:

ಗುಣಧರ–ಧರಸೇನಾನ್ವಯಗುರ್ವೋಃ ಪೂರ್ವಾಪರ ಕ್ರಮೋಸ್ಮಾಭಿಃ।

ನ ಜ್ಞಾಯತೇ ತದನ್ವಯ ಕಥಕಾಗಮ ಮುನಿಜನಾಭಾವಾತ್ ॥೧೫೧॥

ತಾತ್ಪರ್ಯ : ಗುಣಧರ ಮತ್ತು ಧರಸೇನ ಗುರುಗಳ ಪೂರ್ವಾಪರ ಅನ್ವಯ ಕ್ರಮವು, ಅವರ ಅನ್ವಯವನ್ನು ಹೇಳುವ ಆಗಮ ಇಲ್ಲವೆ ಮುನಿಜನರಿಲ್ಲವಾದ ಕಾರಣದಿಂದ, ನಮ್ಮಿಂದ ತಿಳಿಯಲಾಗದಾಗಿದೆ.

ಇದರಿಂದ, ಇಂದ್ರನಂದಿಯವರ ಕಾಲದಲ್ಲಿ ಪೂರ್ವಾಚಾರ್ಯಾನುಕ್ರಮವನ್ನು ತಿಳಿಯಲು ಎರಡು ಸಾದನಗಳಿದ್ದುವೆಂದು ಮತ್ತು ಅವುಗಳಲ್ಲಿ ಒಂದು ಆಗಮ ಮೂಲದ್ದೂ ಮತ್ತೊಂದು ಅನುಶ್ರುತಿಯಿಂದ ಮುನಿಜನ ಮೂಲದ್ದೂ ಆಗಿದ್ದಿತೆಂದು ಸೂಚಿತವಾಗುವುದು. ಆದರೆ ಕಷಾಯಪಾಹುಡದ ರಚನಕಾರರಾದ ಗುಣಧರರ ಮತ್ತು ಧರಸೇನರ ಅನ್ವಯಕ್ರಮವನ್ನು ತಿಳಿಯಬಹುದಾದ ಆಧಾರವು ಇಂದ್ರ ನಂದಿಯವರೆಗೆ ಲಭ್ಯವಾಗಲಿಲ್ಲವೆಂದು ತಿಳಿದುಬರುವುದು. ಇಷ್ಟಾದರೂ ಷಟ್ಖಂಡಾಗಮದಲ್ಲಿ ಒಳಗೊಂಡಿರುವ ಶ್ರುತವನ್ನು ಉಪದೇಶಿಸಿದ ಧರಸೇನಾಚಾರ್ಯರಿಗೆ ಅವಿಚ್ಛನ್ನವಾಗಿ ಅನುಬದ್ಧರೀತಿಯಿಂದ ಆ ಶ್ರುತವು ಲಬ್ಧವಾಗಿದ್ದಿತೆಂದು ಮತ್ತು ಈ ಅನುಬದ್ಧತೆ ಮತ್ತು ಅವಿಚ್ಛಿನ್ನತೆಯನ್ನು ತಿಳಿಸುವುದೇ ಪ್ರಾಕೃತಗಾಹೆಗಳಲ್ಲಿ ನಿಬದ್ಧವಾಗಿರುವ ಶ್ರುತಧರ ಆಚಾರ್ಯಾನುಕ್ರಮದ ಐತಿಹ್ಯದ ಉದ್ದೇಶವಾಗಿದೆಯೆಂಬುದಲ್ಲದೆ. ಈ ಐತಿಹ್ಯದಲ್ಲಿಯೇ

ಧರಸೇನರ ಐತಿಹ್ಯವು ಅಂತರ್ಗತವಾಗಿಯೆಂಬುದು ತರ್ಕಬದ್ಧವೆನಿಸುವುದು. ನಿಜವೆಂದರೆ ಈ ಶ್ರುತಧರ ಆಚಾರ್ಯಾನುಕ್ರಮದಲ್ಲಿ ಧರ ಸೇನರೇ ಕೊನೆಯವರಾಗಿರಬೇಕು. ಎಂದರೆ 'ಲೋಹಾರ್ಯ' ಎಂಬ ಹೆಸರು ಧರಸೇನರದ್ದೇ ಆದ ಮತ್ತೊಂದು ಹೆಸರಾಗಿದ್ದು ಕಾಲಾಂತರದಲ್ಲಿ ಈ ಎರಡು ಹೆಸರುಗಳೂ ಪ್ರತ್ಯೇಕತೆ ಹೊಂದಿ ಇಬ್ಬರು ಆಚಾರ್ಯರ ಹೆಸರಾಗಿ ಉಳಿದು ಬಂದಿವೆಯೆಂದು ತಿಳಿಯಬೇಕಾಗುವುದು. ಹಾಗಲ್ಲವಾದಲ್ಲಿ ಶ್ರುತಧರ ಆಚಾರ್ಯರ ಅನುಬದ್ಧತೆಯ ಐತಿಹ್ಯ ಅರ್ಥಹೀನವಾಗುವುದು. ತೃ. ಭದ್ರಬಾಹುಸ್ವಾಮಿಯವರ ಅನಂತರದಲ್ಲಿ ಆಚಾರ್ಯ ಪಟ್ಟಧರರಾದವರು ಅರ್ಹದ್ಬಲಿಸ್ವಾಮಿಯವರೆಂದೂ ಇವರಿಂದ ರೂಪಿತವಾದ ಮುನಿಸಂಘಗಳ ಆಚಾರ್ಯಾನುಕ್ರಮದ ಐತಿಹ್ಯವು ಪ್ರತ್ಯೇಕವಾಗಿ ರೂಢವಾಯಿತೆಂದು ಹಿಂದೆ ಸ್ಪಷ್ಟಪಡಿಸಿದೆ. ಇದೇ ರೀತಿಯಾಗಿ ಶ್ರುತಧರ ಆಚಾರ್ಯನುಕ್ರಮದಲ್ಲಿ (ತೃ) ಭದ್ರಬಾಹುಸ್ವಾಮಿಯವರ ಅನಂತರ ಲೋಹಾರ್ಯರ ಹೆಸರಿದ್ದು, ಶ್ರುತವನ್ನು ಸ್ಮೃತಿಯಲ್ಲಿ ಧಾರಣೆ ಮಾಡಿಕೊಂಡು ಬಂದ ಶ್ರುತಧರ ಆಚಾರ್ಯ ಪರಂಪರೆಯಲ್ಲಿ ಇವರು ಕೊನೆಯವರಾಗಿದ್ದಾರೆ. ಆದ್ದರಿಂದ ಶ್ರುತವನ್ನು ಸ್ಮೃತಿಯಲ್ಲಿ ಧಾರಣಮಾಡಿ ಕೊಂಡು ಬಂದ ಆಚಾರ್ಯನುಕ್ರಮವು ಇವರೊಡನೆ ಕೊನೆಗೊಂಡಿದ್ದಲ್ಲಿ ಇವರ ಶಿಷ್ಯರಿಂದಲೇ ಶ್ರುತವು ಲಿಪಿಬದ್ಧಗೊಂಡು ಆಗಮದ ಪುಸ್ತಕಪರಂಪ್ರೆ ಆರಂಭವಾಗಿರಬೇಕೆಂಬುದು ಕೇವಲ ಸಹಜ, ಶ್ರುತವು ಪುಷ್ಪದಂತ ಮತ್ತು ಭೂತಬಲಿ ಸ್ವಾಮಿಗಳವರಿಂದ ಷಟ್ಖಂಡಾಗಮರೂಪದಲ್ಲಿ ಲಿಪಿಬದ್ಧವಾಯಿತಾಗಿ ಇವರು ಉಪದೇಶ ಪಡೆದ ಶ್ರುತದ ಅನುಬದ್ಧತೆ ಮತ್ತು ಅವಿಚ್ಛಿನ್ನತೆಯ ದೃಷ್ಟಿಯಿಂದ ಈ ಈರ್ವರು ಮುನಿವರ್ಯರು ಅಂತಿಮ ಶ್ರುತಧರ ಆಚಾರ್ಯ ಲೋಹಾರ್ಯರ ಶಿಷ್ಯರಾಗಿರಬೇಕೆಂಬುದು ತಥ್ಯನಿಷ್ಠ ವಿಚಾರವೆನಿಸುವುದು. 'ಪುಷ್ಪದಂತ' ಮತ್ತು ಭೂತಬಲಿಸ್ವಾಮಿಯವರು ಧರಸೇನಾಚಾರ್ಯರಿಂದ ಶ್ರುತೋಪದೇಶ ಪಡೆದು ಶ್ರುತವನ್ನು ಲಿಪಿಬದ್ಧಗೊಳಿಸಿದರೆಂಬುದು ಪ್ರಸಿದ್ಧ ಸಂಗತಿಯಾಗಿದೆಯಾಗಿ ಲೋಹಾರ್ಯ ಎಂಬುದು ಧರಸೇನರದ್ದೇ ಆದ ಮತ್ತೊಂದು ಹೆಸರಾಗಿರಬೇಕೆಂದು ತಿಳೀಯಬೇಕಾಗುವುದು. ಇದನ್ನು ಪುಷ್ಟೀಕರಿಸುವ ಮತ್ತೂ ಒಂದೆರಡು ಅಂಶಗಳನ್ನು ಇಲ್ಲಿ ಪರಿಶೀಲಿಸಬಹುದಾಗಿದೆ. ಧರಸೇನರಿಂದ 'ಜೋಣಿಪಾಹುಡ'ಎಂಬ ಮಂತ್ರ ತಂತ್ರದ ಗ್ರಂಥವು, ಬೃಹಟ್ಟಿಪ್ಪಣೀಕೆಯಲ್ಲಿ ಹೇಳಿರುವಂತೆ, ವೀ. ನಿ.

ಸಂ. ೬೦೦ರಲ್ಲಿ ರಚಿತವಾಗಿದೆಯೆಂದು ತಿಳಿದುಬರುವುದು. ಇದು ಧರಸೇನರ ರಚನೆಯಾಗಿದೆ ಎಂಬುದರ ಬಗ್ಗೆ ಅವಿಶ್ವಾಸ ಹೊಂದುವಂತಹುದಾದ ಯಾವ ಕಾರಣವೂ ಇಲ್ಲ ಎಂದು, ಪ್ರೊ. ಹೀರಾಲಾಲ್ ಜೈನ್‌ರವರು ಹೇಳಿದ್ದಾರೆ. ಇದರಂತೆ ಧರಸೇನಾಚಾರ್ಯರ ಜೀವಿತಕಾಲ ಮತ್ತು ಶ್ರುತಧರ ಆಚಾರ್ಯ ಸಂತತಿಯಲ್ಲಿ ಕೊನೆಯವರಾದ ಲೋಹಾರ್ಯರ ಜೀವಿತ ಕಾಲಗಳ ಅಭಿನ್ನತೆಯನ್ನು ಗುರುತಿಸಬಹುದು. ಪ್ರಸ್ತುತ ಪ್ರಸಂಗದಲ್ಲಿ ಗಮನಿಸಬೇಕಾಗಿರುವ ಮತ್ತೊಂದು ಅಂಶವೆಂದರೆ, ಕುಂದಕುಂದಾಚಾರ್ಯರ ಜೀವಿತಕಾಲ : ಕುಂದಕುಂದಾಚಾರ್ಯರು ತೃ. ಭದ್ರಬಾಹುಸ್ವಾಮಿಯವರಿಂದ ತಮ್ಮ ೧೧ನೇ ವಯಸ್ಸಿನಲ್ಲಿ ಮುನಿದೀಕ್ಷೆಪಡೆದು ಮುನಿ ಸಾಮಾನ್ಯ ಪರ್ಯಾಯ ಮತ್ತು ತದನಂತರ ಆಚಾರ್ಯ ಪರ್ಯಾಯಗಳಲ್ಲಿದ್ದು ವೀ. ನಿ. ಸಂ. ೭೦೭–೮ ರಲ್ಲಿ ದಿವಂಗತರಾಗಿರುವರೆಂದು ಹಿಂದೆ ಸ್ಪಷ್ಟಪಡಿಸಿದೆ. ಇಂದ್ರನಂದಿಯವರ ಶ್ರುತಾವತಾರದಲ್ಲಿ ಹೇಳಿರುವಂತೆ ಕುಂದಕುಂದಾಚಾರ್ಯ(ಪದ್ಮನಂದಿ ಸ್ವಾಮಿಯವರು) ಷಟ್ ಖಂಡಾಗಂದ ಮೊದಲಮೂರು ಖಂಡಗಳಿಗೆ 'ಪರಿಕರ್ಮ' ಎಂಬ ಟೀಕಾ (ವೃತ್ತಿ) ಗ್ರಂಥವನ್ನು ರಚಿಸಿದರು[೨೯.] ಈ ವೃತ್ತಿಯನ್ನು ಷಟ್ ಖಂಡಾಗಮದ 'ಧವಲಾ' ಟೀಕಾಕಾರರಾದ ವಿರಸೇನಾಚಾರ್ಯರು ಅನೇಕಬಾರಿ ಉಲ್ಲೇಖಿಸಿದ್ದಾರೆ[೩೦] ಕುಂದಕುಂದಾಚಾರ್ಯರಿಂದ ಈ ಪರಿಕರ್ಮ ವೃತ್ತಿಯು ವೀ. ನಿ. ಸಂ. ೭೦೮ಕ್ಕಿಂತ ಪೂರ್ವಭಾವಿಯಾಗಿ ರಚಿತಾವಾಗಿರಬೇಕೆಂಬುದರಲ್ಲಿ ಸಂದೇಹವಿಲ್ಲ. ಶ್ರುತವು ವೀ. ನಿ. ಸಂ. ೬೮೩ ರ ಪರ್ಯಂತ ಸ್ಮೃತಿಯಲ್ಲಿ ಧರಿಸಲ್ಪಟ್ಟಿದ್ದಿತೆಂದು ಹೇಳಿದೆಯಾದ್ದರಿಂದ ಷಟ್ ಖಂಡಾಗಮವು ವೀ. ನಿ. ಸಂ. ೬೮೩ರ ತರುವಾಯ ೭೦೮ರ ಪೂರ್ವಭಾವಿಯಾಗಿ ರಚಿತವಾಗಿರಬೇಕೆಂದು ನಿಶ್ಚಿತವಾಗುವುದು. ಶ್ರುತವು ಷಟ್ಖಂಡಾಗಮ ರೂಪದಿಂದ ಲಿಪಿಬದ್ಧಗೊಳ್ಳಲು, ಹಾಗೂ ಅದು ಮುನಿಜನ ವೃಂದದಲ್ಲಿ ಹೆಚ್ಚಿನದಾದ ಪ್ರಾಶಸ್ತ್ಯ ಪಡೆದು ಪ್ರಥಮ ಆಗಮವೆನಿಸಿ ಸ್ವೀಕೃತವಾಗಿ ಕುಂದಕುಂದಾಚಾರ್ಯರಿಂದ ವೃತ್ತಿ ರಚನೆಯಾಗುವಂತಾಗಲು ಸುಮಾರು ಹತ್ತು ಹದಿನೈದು ವರ್ಷಗಳಷ್ಟಾದರೂ ಕಾಲ ಸಂದಿದ್ದಲ್ಲಿ ಅದು ಅಸಂಗತವೆನಿಸುವುದಿಲ್ಲ. ಆದ್ದರಿಂದ ಷಟ್ ಖಂಡಾಗಂವು ವೀ. ನಿ. ಸಂ. ೬೮೩ರ ಅನಂತರದ ಅತ್ಯಂತ ನಿಕಟವರ್ತಿ ಸಮಯದಲ್ಲಿ ರಚಿತವಾಗಿರುವುದೆಂದು ತಿಳಿಯಬೇಕಾಗುವುದು ಇದರಂತೆ ಪುಷ್ಪದಂತ ಮತ್ತು ಭೂತಬಲಿ ಸ್ವಾಮಿಯವರಿಗೆ ಶ್ರುತದ ಉಪದೇಶವಿತ್ತ ಧರಸೇನ ಸ್ವಾಮಿಯವರು

ವೀ. ನಿ. ಸಂ. ೬೮೩ರ ಅತ್ಯಂತ ನಿಕಟವರ್ತಿ ಸಮಯದಲ್ಲಿಯೇ ದಿವಂಗತರಾಗಿರುವರೆಂದು ಸ್ಫುಟಗೊಳ್ಳುವುದು ಮತ್ತು ಇದರಂತೆಯೂ ಇವರ, ಮತ್ತು ಶ್ರುತಧರ ಆಚಾರ್ಯಾನುಕ್ರಮದಲ್ಲಿ ಕೊನೆಯವರಾದ, ಲೋಹಾರ್ಯರ ಜೀವಿತಕಾಲಗಳ ಅಭಿನ್ನತೆ ವ್ಯಕ್ತವಾಗುವುದು. ಹಿಂದೆ ವಿವರಿಸಿರುವಂತೆ ಶ್ರುತಧರ ಆಚಾರ್ಯರಲ್ಲಿ ಕೊನೆಯವರಾದ ಆಚಾರ್ಯರಿಂದಲೇ ಪುಷ್ಪದಂತ ಮತ್ತು ಭೂತಬಲಿ ಸ್ವಾಮಿಯವರು ಶ್ರುತದ ಉಪದೇಶ ಪಡೆದಿರಬೇಕಾದುದರಿಂದ ಧರಸೇನ ಮತ್ತು ಲೋಹಾರ್ಯ ಎಂಬ ಹೆಸರುಗಳು ಏಕವ್ಯಕ್ತಿಯ ಹೆಸರಾಗಿರಬೇಕೆಂದು ಸಮರ್ಥಿತವಾಗುವುದು.

ಈ ಬಗ್ಗೆ ಮತ್ತೂ ಒಂದು ವಿಚಾರಾರ್ಹವಾದ ಅಂಶವಿದೆ : ಲೋಹಾರ್ಯರು ಆಚಾರಾಂಗ ಶ್ರುತಪಾಠಿಗಳಾಗಿದ್ದು ಮಿಕ್ಕೆಲ್ಲ ಅಂಗ ಮತ್ತು ಪೂರ್ವಗಳ ಏಕದೇಶಜ್ಞರಾಗಿದ್ದರೆಂಬ ಐತಿಹ್ಯವಿರುವುದು ಸ್ಪಷ್ಟವಿದೆ. ಆದರೆ ಧರಸೇನಾಚಾರ್ಯರನ್ನು ಆಚಾರಾಂಗ ಶ್ರುತಪಾಠಿಗಳೆಂದು ಹೇಳಿರದೆ, ಎಲ್ಲ ಅಂಗ ಮತ್ತು ಪೂರ್ವಗಳ ಏಕದೇಶಜ್ಞರಾಗಿದರೆಂಬ ಐತಿಹ್ಯ ಹೆಚ್ಚು ಪ್ರಚಾರದಲ್ಲಿದೆ– "ತದೋ ಸವ್ವೇಸಿಮಂಗಪುವ್ವಾಣ ಮೇಗದೇಸೋ ಆಇರಿಯ ಪರಂಪರಾಏ ಆಗಾಚ್ಛಮಾಣೋ ಧರಸೇಣಾಇರಿಯಂ ಸಂಪತ್ತೋ." (ಧವಲಾ ಟೀಕಾ) ಈ ಕಾರಣದಿಂದ ಲೋಹಾರ್ಯ ಮತ್ತು ಧರಸೇನ ಎಂಬ ಹೆಸರುಗಳು ಒಬ್ಬರೇ ವ್ಯಕ್ತಿಯ ಹೆಸರಾಗಿವೆಯೆಂಬ ತರ್ಕ ಸುಸಂಗತವಲ್ಲವೆಂದು ಹೇಳಲವಕಾಶವಿದೆ: ಆದರೆ ಧರಸೇನರು ಆಚಾರಾಂಗ ಶ್ರುತಪಾಠಿಯಾಗಿದ್ದರೆಂಬ ಮತ್ತೊಂದು ಅನುಶ್ರುತಿಯ ಐತಿಹ್ಯವಿದೆ[೩೧]:

ಹೀಗೆ 'ಲೋಹಾರ್ಯ' ಮತ್ತು 'ಧರಸೇನಾಚಾರ್ಯ' ಎಂಬ ಹೆಸರುಗಳೊಡನೆ ಒಂದೇ ರೀತಿಯವಾದ ಘಾಟನೆಗಳು ಸಂಗತವಾಗಿರುವುದರಿಂದ ಹಾಗೂ ಜೀವಿತ ಕಾಲಗಳ ಐಕ್ಯತೆಯ ಕಾರಣದಿಂದ ಈ ಹೆಸರುಗಳು ಭಿನ್ನವ್ಯಕ್ತಿಗಳ ಹೆಸರುಗಳಾಗಿದೆ ಏಕವ್ಯಕ್ತಿಯ ಹೆಸರುಗಳಾಗಿವೆಯೆಂದು ಸಿದ್ಧವಾಗುವುದು. ಆದ್ದರಿಂದ ಲೋಹಾರ್ಯ ಎಂಬ ಹೆಸರು ಧರಸೇನಾಚಾರ್ಯರದ್ದೇ ಆದ ಮತ್ತೊಂದು ಹೆಸರೆಂದು ಅಭಿವ್ಯಕ್ತ ವಾಗುವುದು.

'ಸೇನ' ಎಂಬುದರಿಂದ ಅಂತ್ಯವಾಗುವ ಇವರ ಹೆಸರಿನಿಂದ ಇವರು 'ಸೇನ' ಮುನಿ ಗಣಕ್ಕೆ ಸೇರಿದವರಾಗಿದ್ದರೆಂಬುದರಲ್ಲಿ ಸಂಶಯವಿಲ್ಲ. ಅರ್ಹದ್ಬಲಿ ಸ್ವಾಮಿಯವರು ಮೂಲಸಂಘವನ್ನು

ಪಂಚಸ್ತೂಪಾನ್ವಯದ ಪಂಚ ಸಂಘ ಮತ್ತು ಗಣಗಳನ್ನಾಗಿ ವಿಂಗಡಿಸಿ, ಮುನಿಗಳು 'ನಂದಿ' ಮುಂತಾದ ಪದಗಳಿಂದ ಅಂತ್ಯವಾಗುವ ಹೆಸರುಗಳನ್ನು ಹೊಂದಿರುವಂತಹ ವ್ಯವಸ್ಥೆ ಮಾಡಿದರೆಂದು ಹಿಂದೆ ಹೇಳಿದೆ. ಇದರಂತೆ ಇವರು ಸೇನಗಣದ ಮುನಿಗಳಾಗಿ 'ಧರಸೇನ' ಎಂಬ ಹೆಸರನ್ನು ಹೊಂದಿದ್ದಾರೆಂದು ತಿಳಿಯಬಹುದಾಗಿದೆಯಲ್ಲದೆ, ಇದಕ್ಕಿಂತ ಮುಂಚಿತವಾಗಿ ಇವರಿಗೆ ಬೇರೊಂದು ಹೆಸರಿದ್ದಿರಬೇಕೆಂದು ತಿಳಿಯಬೇಕಾಗುವುದು. (ತೃ.) ಭದ್ರಬಾಹು ಸ್ವಾಮಿಯವರ ಉತ್ತರಾಧಿಕಾರಿಯಾಗಿ ಗುಪ್ತಿಗುಪ್ತ–ಅರ್ಹದ್ಬಲಿಸ್ವಾಮಿಯವರು ಆಚಾರ್ಯಪಟ್ಟಸ್ಥರಾದರೆಂದು ಹಿಂದೆ ಹೇಳೀದೆ. ನಂದಿ ಆಮ್ನಾಯ ಪಟ್ಟಾವಲಿಯ ಐತಿಹ್ಯದಂತೆ ಇವರು ೯ವ. ೬ತಿಂ. ೨೫ದಿನ ಆಚಾರ್ಯ ಪಟ್ಟಸ್ಥರಾಗಿದ್ದರು. ಇವರ ಬಳಿಕ ನಂದಿ ಸಂಘದ ಆಚಾರ್ಯ ಪಟ್ಟಸ್ಥರಾಗಿ ಮಾಘನಂದಿಯವರು ೪ವ. ೪ತಿಂ. ೨೬ದಿನ, ಇವರ ತರುವಾಯ ಜಿನಚಂದ್ರರು ೮ವ. ೯ತಿಂ. ೬ದಿನ, ಇವರ ಉತ್ತರಾಧಿಕಾರಿಯಾಗಿ ಕುಂದಕುಂದಸ್ವಾಮಿಯವರು ೫೧ವ. ೧೦ತಿಂ. ೧೦ದಿನ ಆಚಾರ್ಯ ಪಟ್ಟಸ್ಥರಾಗಿದ್ದರು. ಹಿಂದೆ ಹೇಳೀರುವಂತೆ, (ತೃ) ಭಾದ್ರಬಾಹು ಸ್ವಾಮಿಯವರು ವೀ. ನಿ. ಸಂ. ೬೩೩ರಲ್ಲಿ ದಿವಂಗತರಾಗಿರುವರಾಗಿ, ಅರ್ಹದ್ಬಲಿ ಸ್ವಾಮಿಯವರು ವೀ. ನಿ. ಸಂ. ೬೪೩ನೇ ವರ್ಷ, ಮಾಘಾನಂದಿಯವರು ವೀ. ನಿ. ಸಂ. ೬೪೭ನೇ ವರ್ಷ, ಜಿನಚಂದ್ರರು ವೀ. ನಿ. ಸಂ. ೬೫೬ನೇ ವರ್ಷ ಮತ್ತು ಕುಂದಕುಂದರು ವೀ. ನಿ. ಸಂ. ೭೦೮ರಲ್ಲಿ ಅನುಕ್ರಮವಾಗಿ ದಿವಂಗತರಾಗಿರುವರೆಂದು ಪರಿಗಣನೆ ಹೊಂದುವುದು (ತೃ) ಭದ್ರಬಾಹುಸ್ವಾಮಿಯವರ ಅನಂತರ ಅಂತಿಮ ಆಚಾರಾಂಗ ಶ್ರುತಧರ ಲೋಹಾರ್ಯ–ಧರಸೇನ ಸ್ವಾಮಿಯವರು ವೀ. ನಿ. ಸಂ. ೬೮೩ರಲ್ಲಿ ದಿವಂಗತರಾಗಿರುವರೆಂಬುದು ಸ್ಪಷ್ಟವಿದೆ. ಆದ್ದರಿಂದ ಅರ್ಹದ್ಬಲಿ, ಮಾಘನಂದಿ ಜಿನಚಂದ್ರ ಮತ್ತು ಕುಂದಕುಂದರು ಲೋಹಾರ್ಯ–ಧರಸೇನರ ಹಿರಿಯ ಕಿರಿಯ ಧರ್ಮ ಭ್ರಾತೃಗಳಾಗಿದ್ದು ಸಮಾನಕಾಲೀನರಾಗಿದ್ದರೆಂದು ಸ್ಫುಟವಾಗುವುದು. ಇಂದ್ರನಂದಿಯವರು ತಮ್ಮ ಶ್ರುತಾವತಾರದಲ್ಲಿ ಲೋಹಾರ್ಯರ ಬಳಿಕ ಮತ್ತು ಅರ್ಹದ್ಬಲಿಯವರ ಪೂರ್ವಭಾವಿಯಾಗಿ ಅಂಗ ಪೂರ್ವ ದೇಶಜ್ಞರಾದ ವಿನಯಂಧರ, ಶ್ರೀದತ್ತ, ಶಿವದತ್ತ ಮತ್ತು ಅರ್ಹದತ್ತ ಎಂಬ ನಾಲ್ವರು ಆಚಾರ್ಯರನ್ನು ಆರಾತೀಯರೆಂದು ಹೆಸರಿಸಿದ್ದಾರೆ. ಈ ಹಿಂದೆ ಹೇಳಿರುವಂತೆ , ಅರ್ಹದ್ಬಲಿ ಸ್ವಾಮಿಯವರೇ

ಮೊದಲಾದವರು ಲೋಹಾರ್ಯ–ಧರಸೇನರ ಸಮಕಾಲೀನರಾಗಿದ್ದಂತೆ ಈ ನಾಲ್ವರು ಆರಾತೀಯ ಆಚಾರ್ಯರೂ ಹಿರಿಯ ಕಿರಿಯ ಸಮಕಾಲೀನ ಆಚಾರ್ಯರಾಗಿದ್ದರಬೇಕೆಂದು ತಿಳಿಯಬಹುದು.

ಪ್ರಸ್ತುತ ಪ್ರಸಂಗಕ್ಕೆ ಸಂಬಂಧಿಸಿರುವ ಮತ್ತೂ ಒಂದು ಪರ್ಯಾಲೋಚನಾರ್ಹ ಸಂಗತಿಯಿದೆ. ಆದರೆ 'ಇದಮಿತ್ಥಂ'– ಹೀಗೆಯೇ ಸರಿ' ಎಂದು ಹೇಳಲು ಸಹಕಾರಿಯಾದ ಆಧಾರಾಂಶಗಳು ಸಧ್ಯದಲ್ಲಿ ಉಪಲಬ್ದವಿಲ್ಲವಾದರೂ ಮುಂದಿನ ಅನು ಸಂಧಾನದನುಕೂಲ್ಯವಾಗಿ ಈ ಸಂಗತಿಯನ್ನು ಹೇಳಬೇಕಾಗಿದೆ.

(ತೃ) ಭಾದ್ರಬಾಹು ಸ್ವಾಮಿಗಳವರು ಆಚಾರ್ಯ ಪಟ್ಟಸ್ಥರಾಗಿದ್ದ ಸಮಯದಲ್ಲಿ ನಿರ್ಗ್ರಂಥ ಮುನಿಸಂಘವು ದಿಗಂಬರ ಮತ್ತು ಶ್ವೇತಾಂಬರ ಪಂಥಗಳಾಗಿ ವಿಭಾಗವಾದ ಐಹಿಹವು ದಿಗಂಬರ ಮತ್ತು ಶ್ವೇತಾಂಬರ ಪಂಥಗಳೆರಡರಲ್ಲಿಯೂ ಉಳಿದು ಬಂದಿದೆ ಎಂದು ಹಿಂದೆ ಹೇಳಿದೆ. ಈ ಕಾಲದಲ್ಲಿ ಜೀವಿಸಿದ್ದವರೆಂದು ಹೇಳಬಹುದಾದ ಕೆಲವರು ಆಚಾರ್ಯರ ಐತಿಹಾಸಿಕ ಸಂಗತಿಗಳು ಶ್ವೇತಾಂಬರ ಪಂಥದ ಐತಿಹ್ಯದಲ್ಲಿ ಉಳಿದುಬಂದಿವೆಯೆಂದು ಹೇಳಲು ಸಮರ್ಥಕವಾದ ಅಂಶಗಳಿವೆ. ಇಂತಹ ಆಚಾರ್ಯರಲ್ಲಿ ಪ್ರಸ್ತುತ ಪ್ರಸಂಗಕ್ಕೆ ಅನ್ವಯವಾಗಿರುವಂತೆ ವಜ್ರಸ್ವಾಮಿಯವರು ಮತ್ತು ಆರ್ಯರಕ್ಷಿತರು ಪ್ರಮುಖರಾಗಿದ್ದಾರೆ.

ಶ್ವೇತಾಂಬರ ಧರ್ಮಪಂಥದ ನಂದಿಸೂತ್ರದ ಸ್ಥವಿರಾವಲಿಯ ಪ್ರಕಾರ ಸ್ಥೂಲ ಭದ್ರ ಸ್ವಾಮಿಯವರ ಬಳಿಕ ಅವರ ಪ್ರಧಾನಶಿಷ್ಯರಾದ ಮಹಾಗಿರಿಸೂರಿ ಮತ್ತು ಸುಹಸ್ತಿಸೂರಿಯವರ ಅನ್ವಯಗಳಲ್ಲಿ ಎರಡು ಮುನಿ ಪರಂಪರೆಯ ಶಾಖೆಗಳನ್ನು ಹೇಳಿದೆ. ಮಹಾಗಿರಿಯವರ ಅನ್ವಯದಲ್ಲಿ ಭದ್ದಗುತ್ತ. ಅಜ್ಜವಇರ ಮತ್ತು ಅಜ್ಜರಕ್ಖಿಯರು ಅನುಕ್ರಮವಾಗಿ ೧೫, ೧೬, ಮತ್ತು ೧೭ನೇ ಆಚಾರ್ಯ ಪಟ್ಟಧರರನ್ನಾಗಿ ಕಾಣಿಸಿದೆ. ಆದರೆ ಸುಹಸ್ತಿಸೂರಿಯವರ ಅನ್ವಯದಲ್ಲಿ ೧೧ನೆಯ ಪಟ್ಟಧರರನ್ನಾಗಿ ಸಿಂಹಗಿರಿಯವರನ್ನು ಹೆಸರಿಸಿ ಅವರ ಬಳಿಕ 'ವಜ್ರ' ಎಂಬ ಆಚಾರ್ಯರನ್ನು ಹೆಸರಿಸಿದೆ[೩೬(ಅ)] .ಉಪಲಬ್ಧವಿರುವ ಐತಿಹ್ಯದನುಗುಣವಾಗಿ ಸಿಂಹಗಿರಿ ಆಚಾರ್ಯರ ತರುವಾಯ ವಜ್ರಸ್ವಾಮಿಯವರು ಆಚಾರ್ಯ ಪಟ್ಟಸ್ಥರಾಗಿದ್ದಾರೆ. ಇವರ ಜೀವನದ ಕೆಲವೊಂದು ಘಟನೆಗಳ ವಿಶ್ಲೇಷಣೆಯಿಂದ ಇವರು (ತೃ) ಭದ್ರಬಾಹು ಸ್ವಾಮಿಯವರ ಬಳಿ ಆಗಮದ ಅಧ್ಯಯನವನ್ನು

ಪೂರಯಿಸಿದ್ದಾರೆಂದು ಹೇಳಲವಕಾಶವಿದೆ. ವಜ್ರ ಸ್ವಾಮಿಯವರ ಕಾಲದಲ್ಲಿ ಎರಡು ಬಾರಿ ದುಷ್ಕಾಲ ಸಂಘಟನೆಯ ಸಂಗತಿಯನ್ನು ಹೇಳಲಾಗಿದೆಯಾದರೂ ಒಂದು ಬಾರಿ ೧೨ ವರ್ಷಗಳ ಕ್ಷಾಮಗಾಲ ಬಂದಿತೆಂದು ಹೇಳಿದೆ. ಇದು ತೃ. ಭದ್ರಬಾಹು ಸ್ವಾಮಿಯವರ ಕಾಲದಲ್ಲಿ ಸಂಭವಿಸಿದ ಘಟನೆಯಾಗಿದೆ. ಇದಲ್ಲದೆ ಇವರು ವಿಹಾರಾನುಕ್ರಮದಿಂದ ದಕ್ಷಿಣಾಪಥವನ್ನು ಸೇರಿದರೆಂದು ಹೇಳಿದೆ. ಹಿಂದೆ ವಿವರಿಸಿರುವಂತೆ (ತೃ) ಭದ್ರಬಾಹು ಸ್ವಾಮಿಯವರು ಉತ್ತರಾ ಪಥದಲ್ಲಿ ಸಂಭವಿಸಲಿದ್ದ ದುರ್ಭಿಕ್ಷದ ಸಂಗತಿಯನ್ನು ತಿಳಿದು ದಕ್ಷಿಣಾಪಥಕ್ಕೆ ಪಯಣ ಕೈಗೊಳ್ಳುವ ನಿರ್ಣಯ ಮಾಡಿ ಮುನಿಗಣಗಳಿಗೆ ಆದೇಶ ಕಳುಹಿ, ತಮ್ಮೊಡನಿದ್ದ ಮುನಿಗಣ ಸಹಿತ ದಕ್ಷಿಣಾಪಥಕ್ಕೆ ಪಯಣ ಕೈಗೊಂಡ ಸಂಗತಿ ವಿದಿತವಿದೆ. ಇದರಂತೆ ದಕ್ಷಿಣಾಪಥಕ್ಕೆ ಬಂದ ಮುನಿವರರಲ್ಲಿ ವಜ್ರಸ್ವಾಮಿಯವರೂ ಒಬ್ಬರಾಗಿದ್ದಾರೆಂದು ತಿಳಿಯಬಹುದಾಗಿದೆ. ಆದರೆ ಈ ಸಂಗತಿಯ ಬಗ್ಗೆ ಶ್ವೇತಾಂಬರ ಪಂಥದಲ್ಲಿ ಉಳಿದು ಬಂದಿರುವ ಐತಿಹ್ಯ ಸಂಗತಿಗಳನ್ನು ಪರಾಮರ್ಶಿಸಬೇಕಾಗಿದೆ.[೩೨]

'ಆರ್ಯವಜ್ರ ಸ್ವಾಮಿಯವರು ಆರ್ಯ ಸಿಂಹಗಿರಿಯವರ ಶಿಷ್ಯರು. ಈ ಗುರುವಿನ ಬಳಿ ಏಕಾದಶಾಂಗ ಶ್ರುತದ ಅಭ್ಯಾಸವನ್ನು ಪೂರ್ಣ ಮಾಡಿ ಹನ್ನೆರಡನೆಯದಾದ ದೃಷ್ಟಿವಾದಾಂಗದ ಅಧ್ಯಯನಕ್ಕಾಗಿ ದಶಪುರದಿಂದ ಹೊರಟು ಅವಂತಿಯಲ್ಲಿದ್ದ ಭದ್ರಗುಪ್ತ ಸ್ವಾಮಿಯವರ ಬಳಿ ಹೋದರು. ಇವರು ಇಲ್ಲಿಗೆ ಬಂದು ಸೇರಲಿದ್ದ ದಿನದ ಪೂರ್ವಭಾವಿಯಾಗಿ ಭದ್ರಗುಪ್ತ ಸ್ವಾಮಿಯವರು, ತಮ್ಮ ಕೈಯಲ್ಲಿದ್ದ ಪಾತ್ರೆಯಲ್ಲಿ ತುಂಬಿದ್ದ ಹಾಲನ್ನು ಆಗಂತುಕನೊಬ್ಬನು ಕುಡಿದು ತೃಪ್ತಿ ಪಡೆದ ಕನಸನ್ನು ಕಂಡು ತಮ್ಮಿಂದ ಪೂರ್ಣ ವಿದ್ಯೆಯನ್ನು ಪಡೆಯಲಿರುವ ಶಿಷ್ಯನೊಬ್ಬನು ಬರಲಿರುವನೆಂದು ತಿಳಿದು ಸಂತಸ ಹೊಂದಿದ್ದರು. ಇದರಂತೆ ತಮ್ಮ ಬಳಿಗೆ ಬಂದ ವಜ್ರಸ್ವಾಮಿಯವರನ್ನು ಕಂಡು ಆನಂದ ಹೊಂದಿದರು. ವಜ್ರಸ್ವಾಮಿಯವರು ಭದ್ರಗುಪ್ತ ಸ್ವಾಮಿಯವರಲ್ಲಿ ದಶಪೂರ್ವಗಳ ಅಧ್ಯಯನವನ್ನು ಪೂರ್ಣಗೊಳಿಸಿ ಸಿಂಹಗಿರಿ ಸ್ವಾಮಿಯವರ ಬಳಿಗೆ ಹಿಂದಿರುಗಿದರು. ಸ್ವಲ್ಪ ಕಾಲದ ತರುವಾಅಯ ಇವರನ್ನು ಸಿಂಹಗಿರಿ ಸ್ವಾಮಿಯವರು ಆಚಾರ್ಯ ಪದವಿಯಲ್ಲಿ ನಿಯೋಜಿಸಿ ದಿವಂಗತರಾದರು. ಜನ್ಮ ಸಂಸಿದ್ಧವಾದ ಪದಾನುಸ್ಮೃತಿಲಬ್ಧಿಸಂಪನ್ನರಾಗಿದ್ದ ವಜ್ರಸ್ವಾಮಿಯವರು ಅಚಾರಾಂಗದ ಮಧ್ಯವರ್ತಿಯಾಗಿದ್ದ ಮಹಾಪರಿಜ್ಞಾಧ್ಯಯನದಿಂದ

ಆಕಾಶಗಾಮಿನೀ ವಿದ್ಯೆಯನ್ನು ಉದ್ಧರಿಸಿದರು. ಹೀಗಿರುವಲ್ಲಿ ಒಮ್ಮೆ ದಾರುಣವಾದ ದುರ್ಭಿಕ್ಷವುಂಟಾಯಿತು. ಈ ದುಷ್ಕಾಲದ ಸಂಕಟದಿಂದ ಸಂಘವನ್ನು ಪಾರುಮಾಡಲೋಸುಗ ವಿದ್ಯಾಶಕ್ತಿಯಿಂದ ದೊಡ್ಡದಾಧ ವಸ್ತ್ರಪಟವನ್ನು ರೂಪಿಸಿ ಸಂಘ ಸ್ಮೇತ ಆಕಾಶಯಾನ ಮಾಡು ಧನಧಾನ್ಯ ಸಮೃದ್ಧವಾಗಿದ್ದ ಮಹಾಪುರಿಯನ್ನು ಸೇರಿದರು. ಆ ನಗರದ ರಾಜನು ಬುದ್ದನ ಉಪಾಸಕನಾಗಿದ್ದು ಜೈನರ ಧರ್ಮಾಚರಣೆಗೆ ಆತಂಕ ಉಂಟು ಮಾಡಿದ್ದನು. ವಜ್ರಸ್ವಾಮಿಯವರು ಇದನ್ನು ಪರಿಹರಿಸಿ ಜೈನಧರ್ಮದ ಪ್ರಭಾವನೆಮಾಡಿದರು.

ದಶಪುರದಲ್ಲಿ ಸೋಮದೇವ ಮತ್ತು ರುದ್ರಸೋಮ ಎಂಬ ದಂಪತಿಗಳಿಗೆ ಆರ್ಯರಕ್ಷಿತ ಮತ್ತು ಫಲ್ಗುರಕ್ಷಿತ ಎಂಬ ಇಬ್ಬರು ಮಕ್ಕಳಿದ್ದರು. ಆರ್ಯರಕ್ಷಿತರು ಜಿನಧರ್ಮವತ್ಸಲಳಾಗಿದ್ದ ತಮ್ಮ ತಾಯಿಯ ಪ್ರೇರಣೆಯಿಂದ ದೃಷ್ಟಿವಾದಾಂಗ ಶ್ರುತದ ಅಧ್ಯಯನ ನಡೆಸುವ ಅಪೇಕ್ಷೆ ಹೊಂದಿ ತೋಸಲಿಪುತ್ರಾಚಾರ್ಯರ ಬಳಿ ಹೋದರು. ಶ್ರುತಾಧ್ಯಯನ ನಡೆಸಲು ಮುನಿದೀಕ್ಷೆಯ ಅಗತ್ಯವಿದ್ದಿತಾಗಿ ಮುನಿದೀಕ್ಷೆ ಪಡೆದು ಏಕಾದಶಾಂಗಶ್ರುತದ ಅಧ್ಯಯನ ಮಾಡಿದರು. ಅನಂತರ ವಜ್ರಸ್ವಾಮಿಯವರಲ್ಲಿ ದೃಷ್ಟಿವಾದಾಂಗದ ವಿಶೇಷ ಅಧ್ಯಯನ ನಡೆಸುವ ಉದ್ದೇಶದಿಂದ ಉಜ್ಜಯಿನಿಗೆ ಹೋದರು. ಆ ಸಮಯದಲ್ಲಿ ಉಜ್ಜಯಿನಿಯಲ್ಲಿ ಭದ್ರಗುಪ್ತ ಸ್ವಾಮಿಯವರಿದ್ದರಾಗಿ ಅವರಲ್ಲಿಗೆ ಹೋದರು. ಭದ್ರಗುಪ್ತಸ್ವಾಮಿಯವರು ತಮ್ಮ ಆಯುಷ್ಯವಸಾನ ಸಮೀಪಿಸಿರುವುದನ್ನು ತಿಳಿದು ಅನಶನವ್ರತವನ್ನಾಚರಿಸಲು ನಿರ್ಣಯಿಸಿ ಆರ್ಯರಕ್ಷಿತ ಸ್ವಾಮಿಯವರನ್ನು ತಮಗೆ ನಿರ್ಯಾಪಕರಾಗಿರಬೇಕೆಂದು ಕೋರಿದರು. ಅದಕ್ಕೆ ಒಪ್ಪಿ ಅವರ ಬಳಿ ನಿಂತ ಆರ್ಯರಕ್ಷಿತ ಸ್ವಾಮಿಯವರಿಗೆ, ಭದ್ರಗುಪ್ತಸ್ವಾಮಿಯವರು ವಜ್ರಸ್ವಾಮಿಯವರಲ್ಲಿ ಶ್ರುತದ ಅಧ್ಯಯನ ನಡೆಸಲು ಹೋದಾಗ ಅವರೊಡನೆ ಒಂದೇ ಪ್ರತಿಶ್ರಯದಲ್ಲಿರದೆ ಬೇರೊಂದು ಪ್ರತಿಶ್ರಯದಲ್ಲಿದ್ದು. ಅಧ್ಯಯನ ಮಾಡಬೇಕೆಂದೂ, ಹಾಗೆ ಯಾರೇ ಆಗಲಿ ವಜ್ರಸ್ವಾಮಿಯವರ ಪ್ರತಿಶ್ರಯದಲ್ಲಿ ಒಂದು ರಾತ್ರಿಯನ್ನು ಕಳೆದರೂಕೂಡ ಅವನು ಮರಣದಲ್ಲಿ ವಜ್ರಸ್ವಾಮಿಯವರನ್ನು ಅನುಸರಿಸುವನೆಂದೂ ಹೇಳಿದರು. ಭದ್ರಗುಪ್ತಸ್ವಾಮಿಯವರು ದಿವಂಗತರಾದ ಬಳಿಕ ಆರ್ಯರಕ್ಷಿತಸ್ವಾಮಿಯರು ವಜ್ರಸ್ವಾಮಿಯವರ ಬಳಿಗೆ ಹೋಗಿ ಅಪೂರ್ವ ಪ್ರತಿಭೆಯಿಂದ ಒಂಭತ್ತು ಪೂರ್ವಗಳ ಅಧ್ಯಯನವನ್ನು ಪೂರಯಿಸಿದರು.

ಮುಂದೆ ಹತ್ತನೇ ಪೂರ್ವದ ಅಧ್ಯಯನವನ್ನು ಆರಂಭ ಮಾಡುವಷ್ಟರಲ್ಲಿ ಅವರ ಸಹೋದರರ ಫಲ್ಗು ರಕ್ಷಿತರು ತಂದೆತಾಯಿಯರ ವಾತ್ಸಲ್ಯದ ಕರೆಯನ್ನು ತಂದರಾಗಿ ಅದನ್ನು ನಿರಾಕರಿಸಲಾರದೆ ಹೊರಟುಹೋದರು.

ವಜ್ರಸ್ವಾಮಿಯವರು ವಿಹಾರಾನುಕ್ರಮದಿಂದ ದಕ್ಷಿಣಾಪಥವನ್ನು ಸೇರಿದರು. ದಾಕ್ಷಿಣಾತ್ಯ ಜನರು ವಜ್ರಸ್ವಾಮಿಯವರ ದರ್ಶನ ಲಾಭದಿಂದ ಬಹಳ ಆನಂದ ಪಟ್ಟರು. ಆಚಾರ ಪಾಲನೆಯಲ್ಲಿ ಪ್ರಮಾದವಶವಾಗಿ ದೊಷವೇರ್ಪಟ್ಟ ಕಾರಣ ಸಂಯಮ ರಕ್ಷಣಾರ್ಥವಾಗಿ ಶರೀರ ತ್ಯಾಗಮಾಡಲು ನಿಶ್ಚಯಿಸಿದರು.

ಎಲ್ಲೆಡೆಯೂ ದ್ವಾದಶಾಬ್ದಕ(ಹನ್ನೆರಡು ವರ್ಷ)ಗಳ ಅವಧಿಯ ದುರ್ಭಿಕ್ಷವುಂಟಾಯಿತು. ಆಗ ವಜ್ರಸ್ವಾಮಿಯವರು ತಮ್ಮ ಶಿಷ್ಯರಾದ ವಜ್ರಸೇನ ಸ್ವಾಮಿಯವರಿಗೆ 'ನೀನು ಯಾವಂದು ಲಕ್ಷ್ಯಮೌಲ್ಯಧನದಿಂದ ಭಿಕ್ಷೆ ಪಡೆಯುವಿಯೋ ಅದರ ಮಾರನೇ ದಿನದಂದು ಸುಭಿಕ್ಷವಾಗಲಿದೆ' ಎಂದು ಹೇಳಿ ಅವರಿಗೆ ಬೇರೆಡೆ ವಿಹಾರ ಮಾಡಲು ಆದೇಶವಿತ್ತರು. ಅನಂತರ ವಜ್ರಸ್ವಾಮಿಯವರು ಮತ್ತು ಇತರ ಅನೇಕ ಸಾಧುಗಳು ಅನಶನಪೂರ್ವಕ ಪರ್ವತವೊಂದರ ಮೇಲೆ ದಿವಂಗತರಾದರು. ಇವರು ದಿವಂಗತರಾದ ಆ ಪರ್ವತವು 'ರಥಾವರ್ತ ಪರ್ವತ' ಎಂಬ ಹೆಸರಿನಿಂದ ಸಂಸ್ತುತವಾಯಿತು.

ಮೇಲ್ಕಂಡ ಕಥೆಯಲ್ಲಿ, ವಜ್ರಸ್ವಾಮಿಯವರ ಕಾಲದಲ್ಲಿ ಎರಡು ಬಾರಿ ದುರ್ಭಿಕ್ಷ ಘಟಿಸಿದಂತೆ ಹೇಳಿದೆ. ಆದರೆ ಒಂದೇ ಬಾರಿ ಘಟಿಸಿದ ದುರ್ಭಿಕ್ಷಕ್ಕೆ ಸಂಬಂಧಿಸಿದ ಘಟನೆಗಳನ್ನು ಪ್ರತ್ಯೇಕಿಸಿ ಎರಡು ಬಾರಿ ಹೇಳೀರುವುದರಿಂದ ಎರಡು ಬಾರಿ ದುರ್ಭಿಕ್ಷೆ ಘಟಿಸಿತೆಂಬ ಅರ್ಥಕ್ಕೆಡೆಯಾಗಿರುವಂತೆ ಕಂಡುಬರುತ್ತದೆ. ಇಲ್ಲಿ ಹೇಳೀರುವ ಹನ್ನೆರಡು ವರ್ಷಗಳ ದುರ್ಭಿಕ್ಷೆ, ನಿಮಿತ್ತದಿಂದ ವನ್ರಸ್ವಾಮಿಯವರು ದಕ್ಷಿಣಾಪಥಕ್ಕೆ ಪ್ರಯಾಣಕ್ಕೆಗೊಂಡ ಘಟನೆಯು ಶ್ರ.ಬೆಳಗುಳದ ನಂ. ೧ನೇ ಶಾಸನದಲ್ಲಿ ಹೇಳಿರುವ ಹನ್ನೆರಡು ವರ್ಷಗಳ (ದುರ್ಭಿಕ್ಷದ) ವೈಷಮ್ಯ ನಿಮಿತ್ತದಿಂದಾಗಿ ಸಂಘ ಸಹಿತ (ಮೂರನೇ) ಭದ್ರಬಾಹುಸ್ವಾಮಿಯವರು ದಕ್ಷಿಣಾಪಥಕ್ಕೆ ಪ್ರಯಾಣ ಕೈಗೊಂಡ ಘಟನೆಯಿಂದ ಬೇರೆಯದಾಗಿರುವ ಸಾಧ್ಯತೆಯಿಲ್ಲ. ಆದ್ದರಿಂದ (ಮೂರನೇ) ಭದ್ರಬಾಹುಸ್ವಾಮಿಯವರ ಆದೇಶದಂತೆ

ದಕ್ಷಿಣಾಪಥಕ್ಕೆ ಪಯಣ ಕೈಗೊಂಡ ಮುನಿಸಂಘಗಳಲ್ಲಿ ವಜ್ರಸ್ವಾಮಿಯವರ ನೇತೃತ್ವದ ಮುನಿಸಂಘವೂ ಒಂದಾಗಿದ್ದಿತೆಂಬುದರಲ್ಲಿ ಸಂಶಯ ಪಡುವಂತಿಲ್ಲ.

ಆದರೆ ಇಲ್ಲಿ ಒಂದು ಸಮಸ್ಯೆಯಿರುವುದು ನಿಜ. ಶ್ವೇತಾಂಬರ ಆಮ್ನಾಯದ ಹೇಳಿಕೆಯಂತೆ ವಜ್ರಸ್ವಾಮಿಯವರು ವೀ. ನಿ. ಸಂ. ೫೮೪ರಲ್ಲಿ ದಿವಂಗತರಾಗಿದ್ದಾರೆ. (ತೃ) ಭಾದ್ರಬಾಹುಸ್ವಾಮಿಯವರು ಪ್ರಾಯಿಕವಾಗಿ ವೀ. ನಿ. ಸಂ. ೬೩೧ರ ಸಮಯದಲ್ಲಿ ದುರ್ಭಿಕ್ಷ ಕಾಲದ ನಿಮಿತ್ತದಿಂದ ಉಜ್ಜಯಿನಿಯಿಂದ ದಕ್ಷಿಣಾಪಥದತ್ತ ಪಯಣ ಮಾಡಿ ಬಂದಿದ್ದಾರೆ. ಹೀಗಿರುವಲ್ಲಿ (ತೃ) ಭದ್ರಸ್ವಾಮಿಯವರ ಆದೇಶದಂತೆ ದಕ್ಷಿಣಾ ಪಥಕ್ಕೆ ಪಯಣ ಕೈಗೊಂಡ ಸಂಘಗಳಲ್ಲಿ ವಜ್ರಸ್ವಾಮಿಯವರ ನೇತೃತ್ವದ ಸಂಘವೂ ಒಂದಾಗಿರಬೇಕೆಂಬುವುದು ಸಮಂಜಸವೆ? ಎಂಬ ಪ್ರಶ್ನೆಯುದ್ಭಾವಿಸುವುದು. ನಿಜ ಈ ಬಗ್ಗೆ ವಿಚಾರಾರ್ಹವಾದ ಒಂದು ಸಂಗತಿಯಿದೆ. ಶ್ವೇತಾಂಬರ ಆಮ್ನಾಯದಲ್ಲಿ ಅಚಾರ್ಯರ ಕಾಲಗಳನ್ನು ಹೇಳುವಲ್ಲಿ ಸಂದಿಗ್ಧತೆಗಳಿದ್ದ ವಿಚಾರವು ಆ ಆಮ್ನಾಯದ ಪಟ್ಟಾವಲಿಗಳಲ್ಲಿಯೇ ಚರ್ಚಿತವಾಗಿದೆ[೩೩] ಆದ್ದರಿಂದ ಶ್ವೇತಾಂಬರ ಆಮ್ನಾಯದ ಪಟ್ಟಾವಲಿಗಳಲ್ಲಿ ಹೇಳಲಾಗಿರುವ ವಜ್ರಸ್ವಾಮಿಯವರ ಜೀವಿತ ಕಾಲವನ್ನು  ನಿರ್ಣಯಾತ್ಮಕವಾಘಿ ಗ್ರಹಿಸಲಾಗುವುದಿಲ್ಲ. ಇದಲ್ಲದೆ ಇವರನ್ನು ಖರತರಗಚ್ಛ ಪಟ್ಟಾವಲಿಯಲ್ಲಿ ೧೬ನೇ ಆಚಾರ್ಯ ಪಟ್ಟಧರರನ್ನಾಗಿಯೂ ತಪಾಗಚ್ಛ ಪಟ್ಟಾವಲಿಯಲ್ಲಿ ೧೩ನೇ ಪಟ್ಟಧರರನ್ನಾಗಿಯೂ ಕಾಣೇಸಲಾಗಿದೆ. ಇದೂ ಅಲ್ಲದೆ ’ಶ್ರಮಣ ಭಾಗವಾನ್ ಮಹಾವೀರ’ ಕೃತಿಕಾರರು ಒಮ್ಮೆ (ಪು. ೨೫೧-೨೬೩) ಇವರ ಜೀವಿತಕಾಲವನ್ನು ತಪಾಗಚ್ಛ ಪಟ್ಟಾವಲಿಯನ್ನನುಸರಿಸಿ ಹೇಳಿರುವರಾದರೂ ಇದೇ ಗ್ರಂಥದ ಅಂತ್ಯದಲ್ಲಿ ಕೊಡಲಾಗಿರುವ ಚೌಬಂಧದಲ್ಲಿ (ಪು.೩೮೮) ಸುಧರ್ಮಸ್ವಾಮಿಯವರಾದಿಯಾಗಿ ಹದಿನೆಂಟನೆ ಪಟ್ಟಧರರನ್ನಾಗಿ ಶ್ರೀ ಗುಪ್ತಾಚಾರ್ಯರ ಅನಂತರದಲ್ಲಿ ಕಾಣೇಸಿದ್ದಾರೆ. ಈ ಎಲ್ಲ ಕಾರಣಗಳಿಂದ ಶ್ವೇತಾಂಬರ ಆಮ್ನಾಯದಲ್ಲಿ ಹೇಳಲಾಗಿರುವ ವಜ್ರಸ್ವಾಮಿಯವರ ಜೀವಿತಾಂತ್ಯಕಾಲವು ಸಂದೇಹಾಸ್ಪದವಾಗಿರುವುದರಿಂದ ನಿರ್ಣಯಾತ್ಮಕವಾಗಿ ಗ್ರಹಿಸಲಗುವುದಿಲ್ಲ.

ದಿಂಗಬರ ಪಂಥದ ಐತಿಹ್ಯದ (ತೃ) ಭದ್ರಬಾಹು ಸ್ವಾಮಿಯವರು ಮತ್ತು ಇವರ ಉತ್ತರಾಧಿಕಾರ್ಇಯಾಗಿ ಆಚಾರ್ಯ ಪಟ್ಟಸ್ಥರಾದ ಗುಪ್ತಗುಪ್ತಿಸ್ವಾಮಿ (ಅರ್ಹದ್ವಲಿಸ್ವಾಮಿ) ಯವರ

ನಾಮಾಂತರಗಳಾಗಿ ಶ್ವೇತಾಂಬರ ಪಂಥದ ಐತಿಹ್ಯದಲ್ಲಿ ಭದ್ರಗುಪ್ತ ಮತ್ತು ಗುಪ್ತಸೂರಿ ಎಂಬ ಹೆಸರುಗಳು ಪ್ರಯುಕ್ತವಾಗಿರುವಾಂತೆ ಕಂಡುಬರುತ್ತವೆ. ಖರತರಗಚ್ಛ ಪಟ್ಟಾವಲಿಯ ಹೇಳಿಕೆಯಂತೆ ವಜ್ರಸ್ವಾಮಿಯವರಿಂದ ಭದ್ರ ಶಾಖೆಯು ಉದಯಕ್ಕೆ ಬಂದಿತು. ಇದಲ್ಲದೆ ಇವರನ್ನು 'ಚತುಷ್ಕುಲ ಸಮುತ್ಪತ್ತಿಪಿತಾಮಹ' ಎಂದೂ ಸ್ತುತಿಸಲಾಗಿದೆ[ಇಳ] ಅರ್ಹದ್ಬಲಿ (ಗುಪ್ತಗುಪ್ತಿ) ಸ್ವಾಮಿಯವರು ಮೂಲ ಸಂಘವನು ಐದು ಸಂಘಗಳಾಗಿ ರೂಪಿಸಿ ಅವುಗಳಲ್ಲಿ ಪ್ರತಿಯೊಂದರಲ್ಲಿಯೂ ನಾಲ್ಕು ನಾಲ್ಕು ಗಣಗಳನ್ನು ರೂಪಿಸಿದರೆಂದು ಮತ್ತು ಈ ಐದು ಸಂಘಗಳಲ್ಲಿ ಒಂದು ಭದ್ರಸಂಘವೆಂಬ ಹೆಸರನ್ನು ಹೊಂದಿದ್ದು ಅದು ನಾಲ್ಕು ಗಣ(=ಕುಲ)ಗಳ ಶಾಖೆಗಳನ್ನು ಹೊಂದಿದ್ದಿತೆಂಬುದನ್ನು ಹಿಂದೆ ನಿರೂಪಿಸಿದೆ. ಇದರಿಂದ, ಅರ್ಹದ್ಬಲಿ (ಗುಪ್ತ ಗುಪ್ತಿ) ಸ್ವಾಮಿಯವರಿಂದ ರೂಪಿತವಾದ ನಂದಿ ಸಂಘಕ್ಕೆ ಮಾಘನಂದಿ ಸ್ವಾಮಿಯವರು ಪ್ರಧಾನಾಚಾರ್ಯ ಪಟ್ಟಧರರಾದಂತೆ ಭದ್ರ ಸಂಘಕ್ಕೆ ವಜ್ರಸ್ವಾಮಿಯವರು ಪ್ರಧಾನಾಚಾರ್ಯ ಪಟ್ಟಧರರಾಗಿರುವರೆಂದು ನಿರ್ಣಯಾತ್ಮಕವಾಗಿ ಹೇಳಬಹುದು ಳ ಇದರಂತೆ ವಜ್ರಸ್ವಾಮಿಯವರು ಅರ್ಹದ್ಬಲಿ (ಗುಪ್ತ ಗುಪ್ತಿ ಸೂರಿ) ಯವರ ಸಮವಯಸ್ಕ ಇಲ್ಲವೆ ಸ್ವಲ್ಪ ಮಾತ್ರ ಅಂತರದ ಕಿರಿಯ ವಯಸ್ಕರಾಗಿದ್ದಿರಬಹುದೆಂದು ತಿಳಿಯ ಬಹುದಾಗಿದೆ. 'ಶ್ರಮಣ ಭಗವಾನ್ ಮಹಾವೀರ' ಕೃತಿಕಾರರು, ಈ ಹಿಂದೆ ಹೇಳಿರುವಂತೆ, ವಜ್ರಸ್ವಾಮಿಯವರನ್ನು ಗುಪ್ತಸೂರಿಯವರ ಅನಂತರದಲ್ಲಿ ನಿರ್ದೇಶಿಸಿರುವುದರ ಸಮುಚಿತತೆ ಇದರಿಂದ ವ್ಯಕ್ತವಾಗುವುದು. ಅರ್ಹದ್ಬಲಿ ಸ್ವಾಮಿಯವರಿಂದ ವ್ಯವಸ್ಥಿತವಾದ ಐದು ಸಂಘಗಳಲ್ಲೊಂದಾದ ಭದ್ರಸಂಘದ ಅಧಿಪರಾಗಿ ನಿಯೋಜಿತರಾದ ಇವರಿಗೆ ಪ್ರಾಯಶಃ 'ಯಶೋಭದ್ರ' ಎಂಬ ಹೆಸರನ್ನಿತ್ತಿರ ಬೇಕೆಂದು ಹೇಳಬಹುದಾಗಿದೆ. ದಿಗಂಬರ ಪಂಥದ ಆಚಾರಾಂಗ ಶ್ರುತಧರ ಆಚಾರ್ಯರನ್ನು ಹೆಸರಿಸುವಲ್ಲಿ ಅನುಶ್ರುತಿಯ್ಯಲ್ಲಿ ಮತಭೇದವಿರುವುದು ಕಂಡುಬರುತ್ತದೆ. ಧವಲಾವೇದನಾಖಂಡ, ಜಯಧವಲಾ, ಆದಿಪುರಾಣ ಮತ್ತು ಪಟ್ಟಾವಲಿಗಳಲ್ಲಿ ಒಬ್ಬ ಆಚಾರಾಂಗಧರರನ್ನು 'ಯಶೋಭದ್ರ' ಎಂದು ಹೆಸರಿಸಿದೆ. ಆಚಾರಾಂಗ ಶ್ರುತಧರ ಆಚಾರ್ಯರ ಕಾಲದಲ್ಲಿ ಆಗಮದಲ್ಲಿ ಅಪಾರ ಪರಿಣತಿ ಹೊಂದಿದ್ದ ಕೆಲವೇ ಆಚಾರ್ಯರಲ್ಲಿ ವಜ್ರಸೂರಿಯವರೂ ಒಬ್ಬರಾಗಿದ್ದರೆಂಬುದರಲ್ಲಿ ಸಂಶಯವಿಲ್ಲ. ಆದ್ದರಿಂದ ಆಚಾರಾಂಗ ಶ್ರುತಧರರಲ್ಲಿ ಒಬ್ಬರೆನಿಸಿ

ಅನುಶ್ರುತಿಯಲಿ ಮತ್ತಭೇದ ವೇರ್ಪಟ್ಟಿದ್ದಲ್ಲಿ ಅಶ್ವರ್ಯವಿಲ್ಲ. ಶ್ವೇತಾಂಬರ ಆಮ್ನಾಯದ ಮಹಾ ನಿಶೀಥ ಸೂತ್ರ(ಅ. ೫)ದಲ್ಲಿ ವಇರ ಸ್ವಾಮಿ (ವಜ್ರಸ್ವಾಮಿ)ಯವರು ಪದಾನುಸಾರಿ ಋದ್ಧಿ ಸಂಪನ್ನರಾಗಿ ಸಂಸ್ತುತರಾಗಿರುವರೆಂದು ಹೇಳಿದೆ. (ಧವಲಾ, ಪುಸ್ತಕ ೨. ಮುನ್ನುಡಿ. ಪು. ೩೫) ಇದಲ್ಲದೆ ಯತಿವೃಷಭರ ತಿಲೋಯ ಪಣ್ಣತ್ತಿಯಲ್ಲಿ ಪ್ರಜ್ಞಾಶ್ರಮಣ ಆಚಾರ್ಯರಲ್ಲಿ 'ವ ಇರಜಸ'ರು ಕೊನೆಯವರು ಎಂದು ಹೇಳಿದೆ.ಸ್

ಪದಾನುಸಾರಿ ಮತ್ತು ಪ್ರಜ್ಞಾಶ್ರಮಣಋದ್ದಿಗಳು ಬುದ್ದಿಋದ್ದಿಯ ಉಪಭೇದಗಳಾಗಿರುವುದರಿಂದ 'ವ ಇರಸಾಮಿ' ಮತ್ತು 'ವಇರ ಜಸ' ಎಂಬ ಹೆಸರುಗಳು ಏಕವ್ಯಕ್ತಿ ಸೂಚಕಗಳಾಗಿರಬಹುದೆಂಬ ಸಂಭಾವ್ಯತೆಯಿದೆ ಎಂಬುದು ವಿದ್ವಾಂಸರ ಅಭಿಮತ[೩೫]. ಶ್ವೇತಾಂಬರ ಆಮ್ನಾಯದ ವಜ್ರಸ್ವಾಮಿಯವರ ಐತಿಹ್ಯದಲ್ಲಿ ಹೇಳಿರುವಂತೆ. ಅವರುಗಗನ ಸಂಚಾರ ಸಮರ್ಥರಾಗಿದ್ದರು ಮತ್ತು ಉತ್ತರ ದೇಶದಿಂದ ಪಯಣ ಮಾಡಿ ದಕ್ಷಿಣ ದೇಶ ಸೇರಿ ಬೌದ್ಧರಾಜ್ಯದಲ್ಲಿ ಜಿನೇಂದ್ರ ಪೂಜಾನಿಮಿತ್ತದಿಂದ ಧರ್ಮ ಪ್ರಭಾವನೆ ಮಾಡಿದರು. [೨೬] ಇದೇರೀತಿಯಾಗಿ ಗಗನ ಸಂಚಾರ್ಅ ಸಮರ್ಥರೂ  ಬೌದ್ಧ ಪ್ರಭುತ್ವದ ರಾಜ್ಯದಲ್ಲಿ ಜಿನೇಂದ್ರ ಪೂಜಾನಿಮಿತ್ತದಿಂದ ಧರ್ಮ ಪ್ರಭಾವನೆ ಮಾಡಿದವರೂ ಆದ ವಜ್ರಮುನಿಯವರ ಕಥೆ ದಿಗಂಬರ ಆಮ್ನಾಯದಲ್ಲಿಯೂ ಇದೆ. ಈ ಕಥೆಯಲ್ಲಿ ಬರುವ ಘಟನೆ ಮತ್ತು ಶ್ವೇತಾಂಬರ ಆಮ್ನಾಯದ ಐತಿಹ್ಯದಲ್ಲಿ ಹೇಳಿರುವ ಘಟನೆಯು ಏಕೈಕ ಘಟನೆಯ ಚಿತ್ರಣಗಳಾಗಿವೆಯೆಂಬುದರಲ್ಲಿ ಸಂದೇಹವಿಲ್ಲ. ಸಮ್ಯ ಗ್ದರ್ಶನದ ಎಂಟನೆಯ ಅಂಗ ಪ್ರಭಾವನಾಂಗದ ದೃಷ್ಟಾಂತ್  ರೂಪದಿಂದ 'ವಜ್ರನಾಮಾ' ಎಂದು ಸ್ವಾಮಿ ಸಮಂತಭದ್ರರ ರತ್ನ ಕರಂಡಶ್ರಾವಕಾಚಾರದಲ್ಲಿ (ಶ್ಲೋ.೨೦) ಹೆಸರಿಸಿದೆ. ಪ್ರಸ್ತುತ ಪ್ರಭಾವನಾಂಗದ ದೃಷ್ಟಾಂತವಾಗಿ ಹೆಸರಿಸಲಾಗಿರುವ ವಜ್ರಕುಮಾರ ಮುನಿಯ ಕಥೆ ಪ್ರಭಾಚಂದ್ರರೇ ಮುಂತಾದವರ ಕಥಾಕೋಶಗಳಲ್ಲಿದೆ. ಬೃಹತ್ಕಥಾ ಕೋಶದ ೧೨ನೆಯ 'ವೈರಕುಮಾರ' ಕಥೆಯೂ ಈ ವಜ್ರಕುಮಾರನ ಕಥೆಯೇ ಆಗಿದೆ.

ಪ್ರಾಕೃತದ 'ವಇರ ಕುಮಾರ'ವು ಬೃಹತ್ಕಥೆಯ ಈ ಕಥೆಯಲ್ಲಿ 'ವೈರಕುಮಾರ'ವಾಗಿದೆ. ನಯಸೇನರ ಧರ್ಮಾಮೃತದ ಅಷ್ಟಮಾಶ್ವಾಸದಲ್ಲಿ ಸಮ್ಯಗ್ದರ್ಶನದ ಏಳನೆಯದಾದ ವಾತ್ಸಲ್ಯಾಂಗ

ದೃಷ್ಟಾಂತ ಕಥೆಯಾಗಿ ಹೇಳಲಾಗಿದೆ. ರತ್ನಕರಂಡ ಶ್ರಾವಕಾಚಾರವು ಕ್ರಿ. ಶ. ನಾಲ್ಕನೇ ಶತಮಾನದಲ್ಲಿ ಸಮಂತಭದ್ರಸ್ವಾಮಿಯವರಿಂದ ರಚಿತವಾಗಿದೆ. ಹೀಗೆಯೇ ಬೃಹತ್ಕಥಾಕೋಶದ ಮೂಲ ಆಕರ 'ಮೂಲಾರಾಧನಾ' ಅಥವಾ 'ಭಾಗವತೀ ಆರಾಧನಾ' ವು ಕ್ರಿ.ಶ ನಾಲ್ಕು ಅಥವಾ ಐದನೇ ಶತಮಾನ ಕಾಲದ್ದಾಗಿದೆ. ಆದ್ದರಿಂದ ದಿಗಂಬರ ಆಮ್ನಾಯದ ವಜ್ರಸ್ವಾಮಿಯವರ ಕಥೆಯ ಮೂಲರೂಪವು ಕ್ರಿ.ಶ. ನಾಲ್ಕನೇ ಶತಮಾನದಷ್ಟು ಪ್ರಾಚೀನವಾಗಿದೆಯೆಂದು ಹೇಳಬಹುದಾಗಿದೆ. ಈ ಕಥೆಯು ಸಂಗ್ರಹರೀತಿಯಿಂದ ಮುಂದಿನಂತಿದೆ.

ಬಲರಾಜನು ಹಸ್ತಿನಾಪುರದ ರಾಜ. ಇವನ ಮಂತ್ರಿ ಗರುಡನಿಗೆ ಸೋಮದತ್ತನೆಂಬ ಮಗನಿದ್ದನು. ಸಕಲ ವಿದ್ಯಾಪಾರಂಗತನಾದ ಸೋಮದತ್ತನು ಪಂಚಾಲ ದೇಶ– ಅಹಿಚ್ಛತ್ರಪುರದ ರಾಜ ಶಾಂತಪನಲ್ಲಿ ಮಂತ್ರಿ ಪದವಿ ಪಡೆದನು. ಇವನ ಹೆಂಡತಿ ಯಜ್ಞದತ್ತೆ. ಇವಳು ಗರ್ಭಿಣಿಯಾಗಿರುವಾಗ ಮಾವಿನ ಹಣ್ಣನ್ನು ತಿನ್ನಬೇಕೆಂಬ ಬಯಕೆ ಮೂಡಿತು. ಆಗ ಮಳೆಗಾಲವಾಗಿದ್ದುದರಿಂದ ಮಾವಿನ ಹಣ್ಣಿಗೆ ಅದು ಅಕಾಲ. ಆದರೂ ಸೋಮದತ್ತನು ಮಾವಿನ ಹಣ್ಣಿನ ಶೋಧಕ್ಕಾಗಿ ಆ ನಗರದ ಉಪವನಕ್ಕೆ ಹೋಗುತ್ತಾನೆ. ಅಲಿ ಒಂದು ಮಾವಿನ್ ಮರದ ನೆರಳಲ್ಲಿ ಸಿಮಿತ್ರರೆಂಬ ಮುನಿಗಳು ಧ್ಯಾನಸ್ಥರಾಗಿ ಕುಳಿತಿರುತ್ತಾರೆ ಮತ್ತು ಆ ಮಾವಿನಮರದಲ್ಲಿ ಹಣ್ಣುಗಳಿರುತ್ತವೆ. ಅಕಾಲದಲ್ಲಿ ಆ ಮರವು ಹಣ್ಣುಗಳಿಂದ ತುಂಬಿರುವುದಕ್ಕೆ ಆ ಮುನಿಗಳ ಮಹಿಮೆಯೇ ಕಾರಣವಾಗಿರುವುದೆಂದು ವಿಶ್ವಾಸ ಹೊಂದುತ್ತಾನೆ. ಮಾವಿನಹಣ್ಣುಗಳನ್ನು ಸೇವಕನ ಹಸ್ತ ಮನೆಗೆ ಕಳುಹಿಸುತ್ತಾನೆ. ಅನಂತರ ಧ್ಯಾನದಿಂದ ಬಹಿರ್ಮುಖರಾದ ಆ ಮುನಿಗಳಿಗೆ ವಂದನೆ ಮಡಿ ಧರ್ಮೋಪದೇಶ ಲಡೆಯುತ್ತಾನೆ. ಬಳಿಕ ವೈರಾಗ್ಯ ಹೊಂದಿ ಮುನಿದೀಕ್ಷೆ ಪಡೆದು ಸುಮಿತ್ರ ಮುನಿಗಳ ಬಳಿ ಕೆಲಕಾಲ ವಿದ್ಯಾಭ್ಯಾಸ ನಡೆಸಿ ಮಗಧರಾಜ್ಯದ ಸೌಪಾಳಪುರದ ಪಶ್ಚಿಮ ದಿಕ್ಕಿನಲ್ಲಿರುವ ನಾಭಿಗಿರಿಗೆ ಹೋಗಿ ತಪಸ್ಸು ಮಾಡುತ್ತಿರುತ್ತಾರೆ. ಯಜ್ಞದತ್ತೆಯು ಗಂಡುಮಗುವಿಗೆ ಜನ್ಮವಿತ್ತು ತನ್ನ ಗಂಡನು ಮುನಿದೀಕ್ಷೆ ಪಡೆದು ನಾಭಿಗಿರಿಯಲ್ಲಿ ತಪೋನಿರತನಾಗಿರುವುದನ್ನು ತಿಳಿದು ತನ್ನ ಬಂಧುಗಳೊಡಗೊಂಡು ಅಲ್ಲಿಗೆ ಹೋಗಿ ಮುನಿಯನ್ನು ನಿಂದಿಸಿ ಮಗುವನ್ನು ಆ ಮುನಿಯ ಪಾದದ ಬಳಿಯಿರಿಸಿ ಹಿಂದಿರುಗುತ್ತಾಳೆ. ಇದೇ ಸಮಯಕ್ಕೆ ಅಮರಾವತಿಯಲ್ಲಿ ರಾಜನಾಗಿದ್ದ ವಿದ್ಯಾಧರ

ದಿವಾಕರದೇವನು ತನ್ನ ತಮ್ಮನಿಂದ ಯುದ್ಧದಲ್ಲಿ ಪರಾಜಿತನಾಗಿ ತನ್ನ ಕುಟುಂಬದೊಡನೆ ಕನಕಪುರವನ್ನು ಸೇರಿ ವಾಸಮಾಡುತ್ತಿರುತ್ತಾನೆ. ತೀರ್ಥಯಾತ್ರೆಯ ನಿಮಿತ್ತದಿಂದ ಬಂದು ನಾಭಿಗಿರಿಯಲ್ಲಿ ಮುನಿಗಳ ಪಾದದ ಬಳಿಯಿದ್ದ ಕೂಸನ್ನು ತೆಗೆದುಕೊಂಡು ತನ್ನ ಹೆಂಡತಿಗೆ ಕೊಡುತ್ತಾನೆ ಬಳಿಕ ಮುನಿಗಳಿಗೆ ವಂದನೆ ಮಾಡಿ ಸ್ವಸ್ಥಾನಕ್ಕೆ ತೆರಳಿ ಮಗುವಿನ ಕೈಯಲ್ಲಿದ್ದ ವಜ್ರಚಿಹ್ನೆಯನ್ನು ನೋಡಿ ಅವನಿಗೆ ವಜ್ರಕುಮಾರನೆಂದು ನಾಮಕರಣ ಮಾಡುತ್ತಾರೆ. ವಜ್ರಕುಮಾರನು ಸಕಲ ವಿದ್ಯಾಸಂಪನ್ನನಾಗಿ ಯೌವ್ವನಾವಸ್ಥೆ ಹೊಂದಿ ವಿದ್ಯಾಧರ ಕನ್ಯೆಯರನ್ನು ವಿವಾಹವಾಗುತ್ತಾನೆ ದಿವಾಕರದೇವನ ತಮ್ಮ ನನ್ನು ಯುದ್ಧದಲ್ಲಿ ಸೋಲಿಸಿ ಅಮರಾವತಿ ನಗರದಲ್ಲಿ ಪುನಃ ದಿವಾಕರದೇವನಿಗೆ ರಾಜಪಟ್ಟ ಕಟ್ಟುತ್ತಾನೆ. ಎಲ್ಲೆಡೆಯೂ ಇವನಿಗೆ ಅಪಾರ ಪ್ರಶಂಸೆ ಗೌರವಾದರಗಳು ಸಲ್ಲುತ್ತಿರುವುದನ್ನು ಕಂಡ ದಿವಾಕರದೇವನ ಹೆಂಡತಿ ಮಣಿಮಾಲೆಯು ಇವನಿಂದ ತನ್ನ ಮಗನ ಅಭ್ಯುದಯಕ್ಕೆ ವಿಘ್ನವುಂಟಾಗುವುದೆಂದು ಭಾವಿಸಿ ವಜ್ರಕುಮಾರನಿಗೆ ಅವನ ನಿಜ ಸಂಗತಿಯನ್ನು ತಿಳಿಸುತ್ತಾಳೆ. ವಜ್ರಕುಮಾರನು ಕೂಡಲೆ ಸೋಮದತ್ತ ಮುನಿಯ ಬಳಿ ಹೋಗಲಪೇಕ್ಷೆಪಟ್ಟನಾಗಿ ಎಲ್ಲರೂ ಹೊರಟು ದಕ್ಷಿಣ ಮಧುರೆಯ ಬಳಿಯ ಕ್ಷತ್ರಿಯ ಗುಹೆಯಲ್ಲಿ ತಪಸ್ಸಿನಲ್ಲಿ ನಿರತನಾಗಿದ್ದ ಸೋಮದತ್ತ ಮುನಿಯ ಬಳಿಗೆ ಬರುತ್ತಾರೆ. ಅಲ್ಲಿ ತನ್ನ ಜನ್ಮ ವೃತ್ತಾಂತವನ್ನು ತಿಳಿದ ವಜ್ರಕುಮಾರನು ವೈರಾಗ್ಯದಿಂದ ಮುನಿದೀಕ್ಷೆ ಪಡೆಯುತ್ತಾನೆ. ಕೆಲಸಮಯದಲ್ಲಿಯೇ ಚಾರಣಋದ್ಧಿಸಂಪನ್ನನಾಗುತ್ತಾನೆ.

ದಕ್ಷಿಣ ಮಧುರಾನಗರದಲ್ಲಿ ಪೂತಿ ಗಂಧರಾಜನು ರಾಜ್ಯವಾಳುತ್ತಿರುತ್ತಾನೆ. ಇವನ ಪತ್ನಿ ಊರ್ಮಿಲೆ ಜಿನಧರ್ಮಪರಾಯಣೆ. ಪೂತಿಗಂಧರಾಜನು ಬೌದ್ಧಧರ್ಮೀಯನಾದ ಧರ್ಮಶ್ರೀವಂದಕನು ಸಲಹಿ ಸಾಕಿದ್ದ ಬುದ್ದ ದಾಸಿಯಲ್ಲಿ ಅನುರಕ್ತನಾಗಿ ಮದುವೆಯಾಗಿ ಅವಳ ಇಚ್ಛಾನುವರ್ತಿಯಾಗಿ ನಡೆಯಲಾರಂಭಿಸಿದನು. ಊರ್ಮಿಲೆಯು ಅಷ್ಟಾಹ್ನಿಕಪರ್ವದಲ್ಲಿ ವಿಶೇಷ ಪೂಜೋತ್ಸವಗಳೊಡನೆ ರಥೋತ್ಸವ ನಡೆಸುತ್ತಿದ್ದಳು. ಇದನ್ನು ತಿಳಿದ ಬುದ್ದದಾಸಿಯು ಜಿನೇಂದ್ರನ ರಥಕ್ಕಿಂತ ಮುಂದಾಗಿ ಬುದ್ದನ ರಥದ ಕ್ರಮಣವಾಗಬೇಕೆಂದು ಇಚ್ಛೆಪಟ್ಟಳಾಗಿ ರಾಜನು ಅದೇ ರೀತಿಯಾಗಿ ಆಗಬೇಕೆಂದು ಆಜ್ಞೆಮಾಡಿದನು. ಆಗ ಊರ್ಮಿಲೆಯು ಜಿನೇಂದ್ರನ ರಥವು ಮುಂದಾಗಿ

ಹೋಗುವಂತ್ತಾದಲ್ಲಿ ಮಾತ್ರ ಅನ್ನಪಾನಗಳನ್ನು ತೆಗೆದುಕೊಳ್ಳುವುದಾಗಿ ಪ್ರತಿಜ್ಞೆಮಾಡಿ ಕ್ಷತ್ರಿಯ ಗುಹೆಯಲ್ಲಿದ್ದ ಸೋಮದತ್ತ ಮತ್ತು ವಜ್ರಕುಮಾರ ಮುನಿಗಳ ಬಳಿ ಹೋಗಿ ವಂದನೆ ಮಾಡಿ ಜಿನೇಂದ್ರನ ರಥೋತ್ಸವಕ್ಕೆ ಒದಗಿ ಬಂದಿದ್ದ ಕ್ಷತಿಯನ್ನು ಅವರಿಗೆ ತಿಳಿಸಿದಳು.

ಚಾರಣಋದ್ಧಿ ಸಂಪನ್ನರಾಗಿದ್ದ ವಜ್ರಕುಮಾರಸ್ವಾಮಿಯವರು ವಿದ್ಯಾಧರ ದಿವಾಕರ ದೇವನಲ್ಲಿಗೆ ಹೋಗಿ ಊರ್ಮಿಲೆಯ ಪ್ರತಿಜ್ಞೆಯು ನೆರವೇರುವಂತೆ ಮಾಡಬೇಕೆಂದು ಹೇಳಿದರು. ಕೂಡಲೆ ಅವರು ಮಥುರಾನಗರಕ್ಕೆ ಬಂದು ಜಿನೇಂದ್ರನ ರಥವು ಮುಂದಾಗಿ ನಡೆಯುವಂತೆ ಮಾಡಿ ವೈಭವಯುತವಾಗಿ ಉತ್ಸವಗಳು ನಡೆಯುವಂತೆ ಮಾಡಿದರು.ದಿವಾಕರ ದೇವನು ಮಧುರೆಯ ಬಳಿ ಸ್ತೂಪವನ್ನು ನಿರ್ಮಿಸಿ ಜಿನ ಧರ್ಮದ ವಿಶೇಷಪ್ರಭಾವನೆಯಾಗುವಂತೆ ಮಾಡಿದನು. ಪೂತಿ ಗಂಧರಾಜ. ಬುದ್ಧ ದಾಸಿ ಮತ್ತಿತರರನೇಕರು ಈ ಪ್ರಭಾವನೆಯಿಂದ ಪ್ರಭಾವಿತರಾಗಿ ಜಿನಧರ್ಮವನ್ನು ಸ್ವೀಕರಿಸಿದರು.

ಮೇಲ್ಕಂಡ ದಿಗಂಬಾರ ಅಮ್ನಾಯದ ಕಥೆಯಲ್ಲಿ ಹಾಗೂ ಶ್ವೇತಾಂಬರ ಆಮ್ನಾಯದ ಐತಿಹ್ಯದಲ್ಲಿ. ಬೌದ್ಧಧರ್ಮೀಯ ರಾಜನಿಂದ ಜೈನಧರ್ಮೀಯರ ಮಹೋತ್ಸವದ ಆಚರಣೆಗೆ ವಿಘ್ನವಾಗಿದ್ದು ಅದು ವಜ್ರಸ್ವಾಮಿಯವರಿಂದ ನಿವಾರಣೆಯಾದ ಸಂಗತಿಯು ಸಮಾನತರವಾಗಿದೆ. ಇದಲ್ಲದೆ ಎರಡೂ ಐತಿಹ್ಯಗಳಲ್ಲಿಯೂ ಸೋಪಾರ (=ಸೌಪಾಳ) ನಗರದ ಉಲ್ಲೇಖವಿದೆ. ಆದ್ದರಿಂದ ಪರಸ್ಪರ ಸ್ವತಂತ್ರವಾಧ ಭಿನ್ನ ಮೂಲಗಳ ಈ ಐತಿಹ್ಯಗಳು ಐತಿಹಾಸಿಕ ತಥ್ಯವನ್ನೊಳಗೊಂಡಿರುವುದರ ಬಗ್ಗೆ ಸಂಶಯಪಡುವಂತಿಲ್ಲ–

ವಜ್ರಸ್ವಾಮಿಯವರು ದಕ್ಷಿಣ ಮಧುರೆ ಬಳಿಯ ಕ್ಷತ್ರಿಯ ಗುಹೆಯಲ್ಲಿದ್ದು ತಪೋ ನಿರತರಾಗಿದ್ದರೆಂದು ದಿಗಂಬರ ಆಮ್ನಾಯದ ಕಥಾಂತರ್ಗತ ಐತಿಹ್ಯವು ತಥ್ಯನಿಷ್ಠವಾಗಿದೆಯೆಂದು ಹೇಳಬಹುದಾಗಿದೆ. ತಮಿಳುನಾಡಿನಲ್ಲಿ ಮಧುರೆಯ ಸುತ್ತಮುತ್ತಿನ ಸ್ಥಳಗಳಲ್ಲಿ ಕ್ರಿ. ಪೂ. ೩ನೇ ಶತಮಾನದಷ್ಟು ಪ್ರಾಚೀನವಾದ ಜೈನಧರ್ಮ ಸಂಬಂಧಿ ಅವಶೇಷಗಳಿವೆಯೆಂದು ವಿದ್ವಾಂಸರು ನಿರ್ಣಯತ್ಮಕವಾಗಿ ಹೇಳಿದ್ದಾರೆ. ಮುನಿಗಳು ವಾಸಿಸುತ್ತಿದ್ದ ಅನೇಕ ಗುಹೆಗಳು ಇಲ್ಲಿವೆ[೩೬]. ಆದ್ದರಿಂದ ವಜ್ರಸ್ವಾಮಿಯವರು ಕ್ಷತ್ರಿಯ ಗುಹೆಯಲ್ಲಿದ್ದರೆಂಬ ಐತಿಹ್ಯವು ತಥ್ಯನಿಷ್ಠವಾಗಿದೆಯೆಂದು

ತಿಳಿಯಬಹುದು. (ತೃ) ಭದ್ರಬಾಹು ಸ್ವಾಮಿಯವರು ಶ್ರ. ಬೆಳಗುಳದ ಚಿಕ್ಕ ಬೆಟ್ಟದ ಮೇಲೆ ಸಲ್ಲೇಖನ ಧಾರಣೆ ಮಾಡಿದ ಅನಂತರ ಪ್ರಧಾನಾಚಾರ್ಯರಾಗಿ ನಿಯೋಜಿತರಾಗಿದ್ದ ಅರ್ಹದ್ಬಲಿ ಸ್ವಾಮಿಯವರ ನೇತೃತ್ವದಲ್ಲಿ ದಮಿಳ ನಾಡನ್ನು ಸೇರಿದ ಮುನಿಸಂಘಗಳಲ್ಲಿ ವಜ್ರ ಸ್ವಾಮಿಯವರ ಮುನಿಗಣವೂ ಒಂದಾಗಿದ್ದಿತೆಂದು ತಿಳಿಯಬಹುದಾಗಿದೆ.

ವಜ್ರಸ್ವಾಮಿಯವರು ಸಲ್ಲೇಖನವನ್ನು ತೆಗೆದುಕೊಳ್ಳಲು ನಿರ್ಣಯಿಸಿ ತಮ್ಮ ಶಿಷ್ಯ ವಜ್ರಸೇನಸ್ವಾಮಿಯವರಿಗೆ (ಭದ್ರ ಸಂಘದ) ಆಚಾರ್ಯ ಪದಮಿಯಿತ್ತು ಅನ್ಯತ್ರ ವಿಹಾರ ಮಾಡಲು ಆದೇಶವಿತ್ತರು. ಈ ಸಂದರ್ಭದಲ್ಲಿ ವಜ್ರಸ್ವಾಮಿಯವರು ವಜ್ರಸೇನಸ್ವಾಮಿಯವರಿಗೆ 'ನೀನು ಲಕ್ಷ್ಯಮೌಲ್ಯ ಆಹಾರ ದಾನ ಪಡೆದ ಮಾರನೇ ದಿನ ದುರ್ಭಿಕ್ಷಕಾಲ ಕೊನೆಯಾಗುವುದು' ಎಂದು ಹೇಳಿದ ಭಮಿಷ್ಯವಾಣಿಯಿಂದ ವಜ್ರ ಸ್ವಾಮಿಯವರು ಉತ್ತರದೇಶದಲ್ಲಿ ಹನ್ನೆರಡು ವರ್ಷಗಳ ದುರ್ಭಿಕ್ಷವು ಕೊನೆಗೊಳ್ಳಲಿದ್ದ ಸಮೀಪವರ್ತಿ ಕಾಲದಲ್ಲಿ ಸಲ್ಲೇಖನ ಧಾರಣೆ ಮಾಡಿರುವರೆಂದು ಸುಚಿತವಾಗುವುದು. ಹನ್ನೆರಡು ವರ್ಷಗಳ ದುರ್ಭಿಕ್ಷವು ಮೀ. ನಿ. ಸಂ. ೬೩೧-೬೩೨ರ ಸಮಯದಲ್ಲಿ ಪ್ರಾರಂಭವಾಗಲಿರುವುದನ್ನು ತಿಳಿದು ಉಜ್ಜಯಿನಿಯನ್ನು ಬಿಟ್ಟು ಶ್ರ. ಬೆಳಗುಳದ ಚಿಕ್ಕಬೆಟ್ಟವನ್ನು ತಲುಪಿ ಸಲ್ಲೇಖನ ಧಾರಣೆ ಮಾಡಿರುವರಾದ್ದರಿಂದ ಮೀ. ನಿ. ಸಂ. ೬೪೩-೬೪೪ರ ಸಮಯದಲ್ಲಿ ಆ ದುರ್ಭಿಕ್ಷವು ಅಂತ್ಯಗೊಂಡಿರುವುದೆಂದು ತಿಳಿಯಬಹುದಾಗಿದೆ. ದುರ್ಬಿಕ್ಷವು ಅಂತ್ಯಗೊಳ್ಳುವ ಸ್ವಲ್ಪ ಸಮಯದ ಪೂರ್ವಭಾವಿಯಾಗಿ ವಜ್ರಸ್ವಾಮಿಯವರು ಸಲ್ಲೇಖನಧಾರಣೆ ಮಾಡಿರುವುದರಿಂದ ಮೀ. ನಿ. ಸಂ. ೬೪೧-೬೪೨ರ ಸಮಯದಲ್ಲಿ ವಜ್ರಸ್ವಾಮಿಯವರು ದಿವಂಗತರಾಗಿರುವರೆಂದು ಗಣನೆ ಮಾಡಬಹುದಾಗಿದೆ.

ಆರ್ಯರಕ್ಷಿತಸ್ವಾಮಿಯವರು ವಜ್ರಸ್ವಾಮಿಯವರಲ್ಲಿ ಶ್ರುತಾಧ್ಯಯನಕ್ಕಾಗಿ ಉಜ್ಜಯಿನಿಗೆ ಬಂದರೆಂದೂ

ಅಲ್ಲಿ ವಜ್ರಸ್ವಾಮಿಯವರಿದ್ದಿರಲಿಲ್ಲವಾಗಿ ಭದ್ರಗುಪ್ತ ಸ್ವಾಮಿಯವರ ಬಳಿ ಹೋದರೆಂದು. ಮತ್ತು ಸಲ್ಲೇಖನ ಧಾರಣೆ ಮಾಡಲು ನಿಶ್ಚಯಿಸಿದ್ದ ಭದ್ರಗುಪ್ತಸ್ವಾಮಿಯವರ ಕೋರಿಕೆಯಂತೆ ಅವರಿಗೆ

ನಿರ್ಯಾಪಕಾಚಾರ್ಯರಾಗಿ ನಿಂತರೆಂದೂ ಶ್ವೇತಾಂಬರ ಆಮ್ನಾಯದ ಐತಿಹ್ಯವನ್ನು ಹಿಂದೆ ಹೇಳಿದೆ. ದಿಗಂಬರ ಆಮ್ನಾಯದ (ತೃ) ಭದ್ರಬಾಹು ಸ್ವಾಮಿಯವರನ್ನು ಶ್ವೇತಾಂಬರ ಆಮ್ನಾಯದಲ್ಲಿ ಭದ್ರಗುಪ್ತ ಎಂದು ಹೆಸರಿಸಲಾಗಿದೆ ಎಂದು ಹಿಂದೆ ವಿವರಿಸಿದೆ. ತೃ. ಭದ್ರಬಾಹು ಸ್ವಾಮಿಯವರು ಶ್ರ. ಬೆಳಗುಳದ ಚಿಕ್ಕಬೆಟ್ಟದಲ್ಲಿ ಸಲ್ಲೇಖನ ಧಾರಣೆ ಮಾಡಿ ಒಬ್ಬ ಶಿಷ್ಯನು ಅವರೊಡನೆ ನಿರ್ಯಾಪಕಾಚಾರ್ಯನಾಗಿದ್ದನೆಂದು ಶ್ರ. ಬೆಳಗುಳದ ೧ನೇ ನಂಬರಿನ ಶಾಸನದಿಂದ ಸೂಚಿತವಾಗುವುದಾದ್ದರಿಂದ ಈ ಶಷ್ಯನೇ ಆರ್ಯರಕ್ಷಿತರಾಗಿದ್ದಿರಬೇಕೆಂದು ತಿಳಿಯಬೇಕಾಗುವುದು. ಮುನಿವ್ರತಧಾರಣೆ ಮಾಡುವಲ್ಲಿ ಪೂರ್ವಾಶ್ರಮದ ಹೆಸರನ್ನು ಬಿಟ್ಟು ಮತ್ತೊಂದು ಹೆಸರನ್ನು ಹೊಂದುವ ನಿಯಮವಿದೆ. 'ಆರ್ಯರಕ್ಷಿತ' ಎಂಬುದು ಗೃಹಸ್ಥಪರ್ಯಾಯದ (ಪೂರ್ವಾಶ್ರಮದ) ಹೆಸರಾಗಿರುವುದರಿಂದ ಇವರ ಮುನಿ ಪರ್ಯಾಯದ ಹೆಸರು 'ಪ್ರಭಾಚಂದ್ರ' ಎಂದಾಗಿರಬೇಕೆಂದು ತಿಳಿಯಬೇಕಾಗಿದೆ. ಏಕೆಂದರೆ ಶ್ರವಣ ಬೆಳಗುಳದ ನೇ ಶಾಸನದಲ್ಲಿ ಹೇಳಿರುವಂತೆ ತೃ. ಭದ್ರಬಾಹು ಸ್ವಾಮಿಯವರಿಗೆ ಶ್ರವಣ ಬೆಳಗುಳದಲ್ಲಿ ನಿರ್ಯಾಪಕಾ ಚಾರ್ಯರಾಗಿ ನಿಂತ ಶಿಷ್ಯನ ಹೆಸರು 'ಪ್ರಭಾಚಂದ್ರ' ಎಂದು (ತೃ) ಭದ್ರಬಾಹು ಸ್ವಾಮಿಯವರಲ್ಲಿ ಶ್ರುತಾಧ್ಯಯನ ನಡೆಸಿದ ಶಿಷ್ಯರಲ್ಲಿ ಪ್ರಭಾಚಂದ್ರ ಕೊನೆಯವರಾಗಿರುವರೆಂದು ತಿಳಿಯಬಹುದಾಗಿದೆ. ಇವರು ವಜ್ರಸ್ವಾಮಿಯವರ ಬಳಿ ತಮ್ಮ ಶ್ರುತಾಧ್ಯಯನವನ್ನು ಮುಂದುವರಿಸಿದ್ದಾರೆ. ಅರ್ಹದ್ಬಲಿ ಸ್ವಾಮಿಯವರು ಮೂಲ ಸಂಘವನ್ನು ಪುನರ್ವ್ಯವಸ್ಥೆಗೊಳಿಸಿ ಏರ್ಪಡಿಸಿದ ಐದು ಸಂಘಗಳಲ್ಲೊಂದಾದ ಭದ್ರ ಸಂಘದ ಪ್ರಧಾನಚಾರ್ಯರಾಗಿ ನಿಯೋಜಿತರಾದ ಈ ಹಿಂದೆ ವಿವರಿಸಲಾಗಿದೆ. ಸೇನಗಣವು ಈ ಭದ್ರಸಂಘದ ಶಾಖೆಯಾಗಿದ್ದು, ಪ್ರಭಾಚಂದ್ರರು ಈ ಸೇನಗಣದಲ್ಲಿ ಸೇರಿದ ಕಾರಣದಿಂದ ಇವರು 'ಧರಸೇನ' ಎಂಬ ನೂತನ ಹೆಸರನ್ನು ಹೊಂದಿದರೆಂದು ತಿಳಿಯಬಹುದಾಗಿದೆ. ಭಾಗವಾನ್ ಮಹಾವೀರನ ಹನ್ನೊಂದು ಗಣಧರರಲ್ಲಿ ಕೊನೆಯವರಾಗಿ ನಿರ್ವಾಣಹೊಂದಿದವರು ಸುಧರ್ಮಾ ಸ್ವಾಮಿಯವರು. ಇದರಿಂದ ಭಗವಾನ್ ಮಹಾವೀರನ ಪ್ರಧಾನ ಶಿಷ್ಯಪೀಳಿಗೆ ಸುಧರ್ಮಾಸ್ವಾಮಿಯವರೊಡನೆ ಕೊನೆಗೊಂಡಂತಾಗಿದೆ. ಲೋಹಾರ್ಯ ಎಂಬುದು ಇವರ ಮತ್ತೊಂದು ಹೆಸರು ಶ್ರುತವನ್ನು ಸ್ಮೃತಿಯಲ್ಲಿ ಧಾರಣೆ ಮಾಡಿದ ಶ್ರುತಧರ ಆಚಾರ್ಯ ಪರಂಪರೆಯು ಧರಸೇನರೊಡನೆ ಕೊನೆಗೊಂಡ

ಕಾರಣದಿಂದ ಇವರನ್ನು ಗೌರವಪೂರ್ವಕ ಲೋಹಾರ್ಯ ಎಂದು ಹೆಸರಿಸಲಾಗಿರಬೇಕು. ಆದರೆ ಕಾಲಾಂತರದಲ್ಲಿ ಮೂಲ ಐತಿಹ್ಯದ ವಿಸ್ಮೃತಿಯ ಕಾರಣದಿಂದ 'ಲೋಹಾರ್ಯ' 'ಧರಸೇನ' ಎಂಬ ಹೆಸರುಗಳು ಭಿನ್ನವ್ಯಕ್ತಿಗಳ ಹೆಸರುಗಳಾಗಿ ಪರಿಗಣಿತವಾಗಿವೆ ಎಂದು ಹೇಳಬಹುದಾಗಿದೆ.

ಷಟ್ಖಂಡಾಗಮದ ರಚನೆಯೊಡನೆ ಶ್ರುತವು ಲಿಪಿಬದ್ಧಗೊಂಡ ಪರಂಪರೆ ಪ್ರಾರಂಭವಾಗಿದೆ! ಇದನ್ನು ಲಿಪಿಬದ್ಧಗೊಳಿಸಿದ ಪುಷ್ಪದಂತ ಮತ್ತು ಭೂತಬಲಿಗಳಿಗೆ, ಧರಸೇನಸ್ವಾಮಿಯವರು ತಾವು ಸ್ಮೃತಿಯಲ್ಲಿ ಧಾರಣೆಮಾಡಿದ್ದ ಶ್ರುತವನ್ನು ಉಪದೇಶಿಸಿದ್ದಾರಾದ್ದರಿಂದ ಇವರು ಶ್ರುತವನ್ನು ಸ್ಮೃತಿಯಲ್ಲಿ ಧಾರಣೆ ಮಾಡಿದ್ದ ಶ್ರುತಧರ ಆಚಾರ್ಯ ಪರಂಪರೆಯವರಲ್ಲಿ ಕೊನೆಯವರಾಗಿದ್ದಾರೆ.

ಈ ಹಿಂದಿನ ಐತಿಹಾಸಿಕ ಸಂಗತಿಗಳ ಸಮೀಕ್ಷೆಯಿಂದ ಧರಸೇನರು (ತೃ) ಭದ್ರಬಾಹುಗಳವರಲ್ಲಿ ಶ್ರುತಾಧ್ಯಯನ ನಡೆಸಿದ ಶಿಷ್ಯರಲ್ಲಿ ಕೊನೆಯವರಾಗಿರುವರೆಂಬುದು ವ್ಯಕ್ತಪಟ್ಟಿದೆ. ಆದ್ದರಿಂದ ಶ್ರುತಾವತಾರದ ಐತಿಹ್ಯದಲ್ಲಿ (ತೃ) ಭದ್ರಬಾಹುಸ್ವಾಮಿಯವರ ಉತ್ತರಾಧಿಕಾರಿ ಎನಿಸಿ ಶ್ರುತಧರ ಆಚಾರ್ಯರನ್ನಾಗಿ ಕಾಣಿಸಲಾಗಿರುವ 'ಲೋಹಾರ್ಯ' ಎಂಬ ಹೆಸರು ಧರಸೇನರಿಗೇ ಸಲ್ಲುವ ಮತ್ತೊಂದು ಹೆಸರಾಗಿದೆಯೆಂದು ನಿಶ್ಚಿತವಾಗುವುದಲ್ಲದೆ ಇವರು ವೀ.ನಿ.ಸಂ. ೬೮೩ರಲ್ಲಿ ಎಂದರೆ ಕ್ರಿ.ಶ. (೬೮೩–೫೨೭=) ೧೫೬ರಲ್ಲಿ ದಿವಂಗತರಾಗಿರುವರೆಂದೂ ನಿಶ್ಚಿತವಾಗುವುದು.

ಟಿಪ್ಪಣಿಗಳು

೧ ವಾಸ್ತವವಾಗಿ, ವೃಷಭತೀರ್ಥಂಕರನು ಈ ಅವಸರ್ಪಿಣೀ ಕಾಲದ ಮೂರನೇ ವಿಭಾಗವಾದ ಸುಷಮಾದುಷಮಾ ಕಾಲದಲ್ಲಿ ಜನಿಸಿ ಆ ಕಾಲವು ಅಂತ್ಯವಾಗಲು ಮೂರುವರ್ಷ ಎಂಟು ತಿಂಗಳು ಮತ್ತು ಹದಿನೈದು ದಿನಗಳು ಉಳಿದಿರುವಾಗ ನಿರ್ವಾಣ ಹೊಂದಿದ್ದಾನೆ. ಇದು ಹುಂಡಾವಸರ್ಪಿಣೀಯಲ್ಲಾಗುವ ವಿಶೇಷಗಳಲ್ಲಿ ಒಂದು ; ಹೆಚ್ಚಿನದಕ್ಕೆ ಮಾಘನಂದ್ಯಾಚಾರ್ಯರ 'ಶಾಸ್ತ್ರ ಸಾರ ಸಮುಚ್ಚಯ' (ಪು. ೭) ನೋಡಬೇಕು.

೨ ಗುಣಭಾದ್ರಸ್ವಾಮಿಯವರ ಉತ್ತರಪುರಾಣದಲ್ಲಿ ಭ. ಮಹಾವೀರನ ತಾಯಿಯನ್ನು ಪ್ರಿಯ ಕಾರಿಣಿ ಎಂದು ಹೆಸರಿಸಿದೆ. ಆದರೆ ತ್ರಿಶಲಾ ಎಂಬ ಮತ್ತೂ ಒಂದು ಹೆಸರು ಧವಲಾ

ಮುಂತಾದ ಇತರೆಡೆ ಕಂಡುಬರುತ್ತದೆ: ಶ್ವೇತಾಂಬರ ಆಮ್ನಾಯದನುಸಾರ ಈ ತ್ರಿಶಲಾ ದೇವಿಯು ಚೇಟಕ ರಾಜನ ಭಗಿನಿಯಾಗಿದ್ದಾಳೆ.

೩ ಭ. ಮಹಾವೀರನ ಜನನಾದಿ ಪ್ರಸಂಗಗಳ ಕಾಲಗಣನೆಯನ್ನು ಇಲ್ಲಿ ಷಟ್ ಖಂಡಾಗಮ–ವೇದನಾಖಂಡ–ಕೃತಿ ಅನುಯೋಗ ದ್ವಾರ– ಧವಲಾ ಟೀಕೆ (ಖಂಡ೪. ಭಾಗ ೧. ಪುಸ್ತಕ ೯– ಪ್ರೊ. ಹೀರಾಲಾಲ್ ಜೈನ್ ರವರಿಂದ ಸಂಪಾದಿತ) ಆಧಾರದಿಂದ ಕೊಡಲಾಗಿದೆ. ದೀಕ್ಷೆಯ ವರೆಗಿನ ಕೌಮಾರ್ಯ ವಯಸ್ಸನ್ನು ಧವಲಾದಲ್ಲಿ ೨೮ ವರ್ಷ. ೭ ತಿಂ., ೧೨ ದಿನಗಳೆಂದು ಹೇಳ್ಪಿದೆಯಾದರೆ ಉತ್ತರ ಪುರಾಣದಲ್ಲಿ 'ತ್ರಿಂಶಚ್ಛರತ್' ಮುವ್ವತ್ತು ವರ್ಷಗಳೆಂದು ಹೇಳಿದೆ.ಪ್ರಾಯಶಃ ಇದು ಸ್ಥೂಲರೂಪದ ಗಣನೆಯಿರಬಹುದು. ಹೀಗೆಯೇ ಭ. ಮಹಾವೀರನ ಒಟ್ಟು ಆಯುಷ್ಯವನ್ನು ಧವಲಾದಲ್ಲಿ ೭೧ ವರ್ಷ, ೩ ತಿಂ., ೨೫ ದಿನಗಳೆಂದು ಹೇಳಿದೆ. ಆದರೆ ಇದರಲ್ಲಿ ಗರ್ಭಸ್ಥಕಾಲವೂ ಸೇರಿದೆ. ಇದರಲ್ಲಿ ಗರ್ಭಗತ ಕಾಲವನ್ನು ಕಳೆದಲ್ಲಿ ಜನನಾದಿಯಾಗಿ ೭೦ ವ. ೬ ತಿಂ. ಮತ್ತು ೧೭ ದಿನಗಳ ಪೂರ್ಣಾಯುಷ್ಯವೆಂದು ಗಣನೆಯಾಗುವುದು. ಜನನಾದಿಯಾಗಿಯೇ ಸ್ಥೂಲವಾಗಿ ೭೧ ವ. ೭ ತಿಂಗಳುಗಳನ್ನು ಗಣನೆ ಮಾಡಿದುದರಿಂದ 'ಸನ್ಮತಿ ಶ್ರೀ ವಿಹಾರ'ದಲ್ಲಿ ೧ ವರ್ಷದ ಹೆಚ್ಚಳವಾಗಿರುವ ವ್ಯತ್ಯಾಸವೇರ್ಪಟ್ಟಿದೆ. ಇದರಲ್ಲಿ ದಿನಗಳ ಗಣನೆ ಮಾಡದಿರುವುದರಿಂದ ೭ ತಿಂಗಳು ಎಂಬ ಸ್ಥೂಲ ಗಣನೆಯಾಗಿದೆ.

೪ ವಾಲ್ಯೂಂ ೨೦, ಅಕ್ಟೋಬರ್ ೧೮೯೧ ಮತ್ತು ವಾಲ್ಯೂಂ ೨೧ ಫೆಬ್ರವರಿ– ಮಾರ್ಚ್ ೧೮೯೨.

೫ ನೋಡಿರಿ : ಎಪಿಗ್ರಾಫಿಯ ಕರ್ನಾಟಕ–ಶ್ರವಣ ಬೆಳಗೊಳ' ಪ್ರಕಾಶನ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು, ೧೯೭೩, ಪೀಠಿಕೆ, ಪು. xliv., ಪರಿಚ್ಛೇದ ೩.

೬ ಶಿಲಾ ಶಾಸನ ನಂ. ೪೦ (೬೪), ೪೨ (೬೬), ೪೩ (೧೧೭), ೪೭ (೧೨೭), ೫೦ (೧೪೦), ೫೪ (೬೭), ೧೦೫ (೨೫೪).

೭ ಪರಿಷ್ಕರಣದ ಕಾರಣ ವಿವರಣೆಯನ್ನು 'ಸನ್ಮತಿ ಶ್ರೀ ವಿಹಾರ' ಪು.ಸಂ. ೨೮೪ ರಿಂದ ೩೬೧ರಲ್ಲಿ ಕಾಣಬಹುದು.

೮ ಇವರನ್ನು ಶ್ರವಣ ಬೆಳಗುಳದ ಒಂದನೇ ಶಾಸನದಲ್ಲಿ 'ದೇವ' ಎಂದು ಹೆಸರಿಸಿದೆಯಾದರೆ ಮಿಕ್ಕೆಲ್ಲೆಡೆಗಳಲ್ಲಿ ನಂದಿ ಅಥವಾ ನಂದಿಮಿತ್ರ ಎಂದು ಹೆಸರಿಸಿದೆ.

೯ ಚತುರ್ದಶ ಪೂರ್ವಗಳು ಹನ್ನೆರಡನೆಯದಾದ ದೃಷ್ಟಿವಾದದಲ್ಲಿಯೇ ಅಂತರ್ಗತವಾಗಿವೆ ಯಾದರೂ ಇವುಗಳ ಪ್ರಾಮುಖ್ಯತೆಯ ಕಾರಣದಿಂದಾಗಿಯೋ ಏನೋ ಸಮಸ್ತ ದ್ವಾದಶಾಂಗ ಶ್ರುತಜ್ಞರನ್ನು 'ದ್ವಾದಶಾಂಗ ಚತುರ್ದಶ' ಪೂರ್ವಿಗಳೆಂದು ಹೆಸರಿಸುವ ರೂಢಿಯಿದೆ.

೧೦ ಸಾಧಾರಣವಾಗಿ ಇತರೆಡೆಗಳಲ್ಲಿ ಹನ್ನೊಂದು ಜನ ದಶಪೂರ್ವಿಗಳನ್ನು ಹೇಳಿದೆ. ಆದರೆ ಶ್ರ.ಬೆಳಗುಳದ ಒಂದನೇ ಶಾಸನದಲ್ಲಿ ಹಾಗೂ 'ಇ' ನಂದಿ ಆಮ್ನಾಯ ಪಟ್ಟಾವಲಿಯಲ್ಲಿ ೯ ಜನರನ್ನು ಮಾತ್ರ ಹೆಸರಿಸಿದೆ.

೧೧ ಷ. ಆಗಮ. ಸತ್ ಪ್ರರೂಪಣಾ ೨. ಸಂ. ಪ್ರೊ. ಹೀರಾಲಾಲ್ ಜೈನ್, ಪೀಠಿಕೆ ೮ ಪು. ೫೩–೫೬

೧೨ ನೋಡಿ–ನಂದಿ ಆಮ್ನಾಯ ಸರಸ್ವತೀ ಗಚ್ಛ ಬಲಾತ್ಕಾರ ಗಣದ ಪಟ್ಟಾವಲಿ 'ಎ'

೧೩ ಪಾಕ್ಷಿಕ ಪ್ರತಿಕ್ರಮಣಾಂತರ್ಗತ ಗುರುನಾಮಾವಲಿ ಎಕ್ಸ್‌ಟ್ರಾ ನಂ. ಆಫ್ ದಿ ಜರ್ನಲ್ ಆಫ್ ದಿ ಬಾಂಬೆ ಬ್ರ್ಯಾಂಚ್ ರಾಯಲ್ ಏಸಿಯಾಟಿಕ್ ಸೊಸೈಟಿ–೧೮೮೩.

೧೪ ಕೆಲವಡೆ 'ಗುಪ್ತ ಗುಪ್ತಿ' ಎಂಬುದಾಗಿಯೂ ಹೆಸರಿಸಲಾಗಿದೆ.

೧೫ ಈ ಇಂದ್ರನಂದಿಯವರು ಪ್ರಸಿದ್ದ ಗೊಮ್ಮಟಸಾರದ ರಚನಕಾರರಾದ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಯವರ ಗುರುವಾಗಿರುವರೆಂದು (ಕ್ರಿ. ಶ. ೯–೧೦ನೇ ಶತಮಾನ) ಮತ್ತು ಇವರಿಂದ ರಚಿತವಾಗಿರುವ ಶ್ರುತಾವತಾರ ಒಳಗೊಂಡಿರುವ ವಿಷಯವು ಪ್ರಾಮಾಣಿಕವಾದುದಾಗಿದೆಯೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಷ. ಆಗಮ–ಸತ್ಪ್ರರೂಪಣಾ– ಭಾಗ ೨ ಪೀಠಿಕೆ, ಪು. ೨೨

೧೬ ಹರಿಷೇಣಾಚಾರ್ಯಕೃತ ಬೃಹತ್ಕಥಾ ಕೋಶ, ಕಥಾ ಸಂ. ೧೩೧ (ಪು. ೩೧೮).

೧೭ ಹೋಎರ್ನಲ್‌ರವರ ಕೋಷ್ಟಕವನ್ನನುಸರಿಸಿದೆ.

೧೮ ಷ. ಆಗಮ ಸತ್ಪ್ರರೂಪಣಾ ೧. ಪೀಠಿಕೆ ಪು. ೨೩.

ಖರತರ ಗಚ್ಛ ಪಟ್ಟಾವಲಿ, ಇಂಡಿಯನ್ ಆಂಟಿಕ್ವೆರಿ ವಾಲ್ಯೂಂ, ನಿಟಿ ೧೮೮೨, ಪು. ೨೪೫–೨೫೬.

೨೦ ಶ್ರುತಧರ ಆಚಾರ್ಯರ ಅನುಕ್ರಮದ ಪಟ್ಟಾವಲಿ ನೋಡಿ.

೨೧ ತಪಾಗಚ್ಛ ಪಟ್ಟಾವಲಿ. ಇಂಡಿಯನ್ ಆಂಟಿಕ್ವೆರಿ. ವಾ. xi ೧೦ ಪು. ೨೫೧.

೨೨ ಪಟ್ಟಾವಲಿಯಲ್ಲಿ ಇದನ್ನು ವಿಕ್ರಮಶಕೆಯಾಗಿ ಗಣನೆ ಮಾಡಿದೆ, ಆದರೆ ಶೋಧನೆಯಿಂದ ಇದು ಶಾಲಿವಾಹನ ಶಕೆಯಾಗಿದೆಯೆಂದು ನಿರ್ಧಾರಿತವಾಗುತ್ತದೆ.

೨೩ ನಂ. ಆ. ಪಟ್ಟಾವಲಿ 'ಎ' ಪ್ರತಿಯ ಹೇಳಿಕೆಯಂತೆ ಕುಂದಕುಂದಾಚಾರ್ಯರು ೯೬ ವರ್ಷ ಜೀವಿಸಿದ್ದರು.

೨೪ ಪ್ರಸ್ತುತ ವಿಷಯವನ್ನು ಮೈ. ವಿ. ವಿ. ಕನ್ನಡ ಅಧ್ಯಯನ ಸಂಸ್ಥೆ ಪ್ರಕಾಶನ ಪುಸ್ತಕದ ಪೀಠಿಕೆಯಿಂದ (ಪುಟ.xlii-xliv) ಸಂಗ್ರಹಿಸಿದೆ.

೨೪ 'ಪ್ರಭಾಚಂದ್ರೇಣಾಮಾ' ಎಂಬುದು ಪ್ರಭಾಚಂದ್ರೇಣ ಮತ್ತು ಅಮಾ ಎಂಬ ಪದಗಳು ಸಂಧಿ ಕೂಡಿ ಆಗಿರುವ ಸಂಯುಕ್ತಪದ. ಆಮಾ, ಸಹ, ಸಾಕಂ ಎಂಬವು, ಒಡನೆ, ಒಡಗೂಡಿ, ಜೊತೆಯಾಗಿ, ಎಂಬ ಅರ್ಥ ಹೊಂದಿವೆ. ಆದ್ದರಿಂದ 'ಪ್ರಭಾಚಂದ್ರೇಣಾಮಾ' ಎಂದರೆ ಪ್ರಭಾಚಂದ್ರನೊಡಗೂಡಿ ಎಂದರ್ಥ.

೨೫ 'ಸನ್ಮತಿ ಶ್ರೀ ವಿಹಾರ' ಪು. ೨೨೨–೨೨೯.

೨೬ ಪಟ್ಟಾವಲಿಗಳಲ್ಲಿ ಕೊಡಲಾಗಿರುವ ಕಾಲವನ್ನು ವಿಕ್ರಮಶಕೆಯೊಡನೆ ಸಮೀಕರಿಸಿ ಗಣನೆ ಮಾಡಿದ ಕಾರಣದಿಂದ ಈ ಆಚಾರ್ಯರ ಕಾಲಗಣನೆಯು ಸುಮಾರು ೧೩೬ ವರ್ಷಗಳಷ್ಟು ಹಿಂದಿನದಾಗಿ ಗಣನೆ ಹೊಂದಿ ತಪ್ಪು ಗಣನೆಯಾಗಿದೆ. ಈ ತಪ್ಪಿನಿಂದಾಗಿ ಕುಂದಕುಂದಾಚಾರ್ಯರು ಕ್ರಿ. ಪೂ. ೪೫ರಲ್ಲಿ ದಿವಂಗತರಾದರೆಂಬ ದೋಷಪೂರ್ಣ

ಗಣನೆಯಾಗಿದೆ. ಪಟ್ಟಾವಲಿಗಳ ಈ ಕಾಲವನ್ನು ಶಾಲಿವಾಹನ ಶಕೆಯೊಡನೆ ಸಮೀಕರಿಸಿ ಗಣನೆ ಮಾಡಿದಲ್ಲಿ ಕಾಲಗಣನೆ ಸಮುಚಿತವಾಗುವುದು.

೨೭ ಮಹಾಪುರಾಣ (ಆದಿಪುರಾಣ) ಪರ್ವ–೨ : ಸುಭದ್ರಶ್ಚ ಯಶೋಭದ್ರೋ ಭದ್ರಬಾಹುರ್ಮ ಹಾಯಶಾಃ । ಲೋಹಾರ್ಯ ಶ್ವೇತ್ಯಮೀ ಜ್ಞೇಯಾಃ ಪ್ರಥಮಾಂಗಾಬ್ಧಿಪಾರಗಾಃ ॥ ೧೪೯ ॥

೨೮ ಷಟ್ ಖಂಡಾಗಮ– ಸತ್‌ಪ್ರರೂಪಣಾ ೧ ಪೀಠಿಕೆ. ಪು. ೩೦.

೨೯ ಏವಂ ದ್ವಿವಿಧೋ ದ್ರವ್ಯ– ಭಾವ– ಪುಸ್ತಕಗತಸ್ಸಮಾಗಚ್ಛನ್।

ಗುರುಪರಿಪಾಟ್ಯಾ ಜ್ಞಾತಃ ಸಿದ್ಧಾಂತಃ ಕುಂದಕುಂದಪುರೇ ॥ ೧೬೦ ॥

ಶ್ರೀ ಪದ್ಮನಂದಿಮುನಿನಾ ಸೋಪಿ ದ್ವಾದಶಸಹಸ್ರಪರಿಮಾಣಂ ।

ಗ್ರಂಥ ಪರಿಕರ್ಮಕರ್ತಾ ಷಟ್ ಖಂಡಾದ್ಯತ್ರಿಖಂಡಸ್ಯ ॥ ೧೬೧ ॥

೩೦ ಷಟ್‌ಖಂಡಾಗಮ, ಸತ್ಪ್ರರೂಪಣಾ–೧, ಪೀಠಿಕೆ. ಪು. ೪೬–೪೮.

೩೧ ಬೃಹತ್ಕಥಾಕೋಶ– ಹರಿಷೇಣಾಚಾರ್ಯ ಕೃತ ೨೬ನೇ ಕಥೆ– 'ವ್ಯಂಜನಾರ್ಥೋಭಯ ಶುದ್ಧಿ ಕಥಾನಕಂ'

"ಸೌರಾಷ್ಟ್ರದೇಶದಲ್ಲಿ ಗಿರಿನಗರ ವಿದೆ. ಅಲ್ಲಿ ಧರ್ಮಸೇನನೆಂಬುವನು ರಾಜ. ಅವನ ಹೆಂಡತಿ. ಧರ್ಮಸೇನೆ (೧) ಆ ಪಟ್ಟಣದ ಸಮೀಪದಲ್ಲಿ ಚಂದ್ರಗುಹೆ ಇದೆ; ಅಲ್ಲಿ ಗುರುಧರಸೇನ ಮಹಾಮುನಿ ಇದ್ದಾನೆ. (೨) ಆಚಾರಾಂಗವೆಂಬ ಒಂದು ಅಂಗದ ಜ್ಞಾನಿಯಾಗಿದ್ದ ಅವನು ಶಿಷ್ಯ ಸಮನ್ವಿತನಾಗಿ ವ್ಯಾಖ್ಯಾನ ಮಾಡುತ್ತಾ ಅಲ್ಲಿದ್ದನು. (೩) ಹರಿದ್ರಾಪಶ್ಚಿಮಯಾಮದಲ್ಲಿ ಬೆಳ್ಳಗಿನ ಕಾಂತಿಯುಕ್ತವಾದ ಎರಡು ವೃಷಭಗಳು ಪ್ರದಕ್ಷಿಣೆ ಮಾಡುವುದನ್ನು ಈ ಯತೀ ಶ್ವರನು ಕಂಡನು. (೪) ಪ್ರಭಾತ ಸಮಯದಲ್ಲಿ ದೇವಬಲಿ ಮತ್ತು ಪುಷ್ಪಬಲಿ ಎಂಬಿಬ್ಬರು ಸಾಧುಗಳು ಬಂದರು, ಸ್ತೋತ್ರಮಾಡಿ ಜಿನ– ಯೋಗೀಂದ್ರ ಪಾದಗಳ ಬಳಿ ಕುಳಿತರು (೫) ಕ್ಷಣಕಾಲದ ಬಳಿಕ ಅವರಿಬ್ಬರು ಆ ಮುನೀಶ್ವರನಿಗೆ 'ಸ್ವಾಮಿಯೆ ; ನಿನ್ನಿಂದ (ಮುನೋದ್ಭವ) ಶ್ರುತ ವಿದ್ಯೆಯನ್ನು ಪಡೆಯಲು ಬಂದಿದ್ದೇವೆ' ಎಂದು ಹೇಳಿದರು (೬) ಯೋಗೀಂದ್ರನು ಅವರಿಬ್ಬರ ಮಾತನ್ನು ಕೇಳಿ 'ಸುಸಮಾಹಿತಚೇತಸರಾದ ನಿಮಗೆ ವಿದ್ಯೆ ಕೊಡುವೆನು' ಎಂದು ಹೇಳಿದನು. (೭) ಬಳಿಕ ಪರೀಕ್ಷಿಸುವುದಕ್ಕಾಗಿ ಒಬ್ಬನಿಗೆ ಹೀನವರ್ಣದ

ವಿದ್ಯೆಯನ್ನು ಮತ್ತೊಬ್ಬನಿಗೆ ಅಧಿಕಾಕ್ಷರದಿಂದ ಕೂಡಿದ್ದ ವಿದ್ಯೆಯನ್ನು ಮುನಿನಾಯಕನಿನು ಕೊಟ್ಟನು. (೮) ಅವರಿಬ್ಬರು ಚತುರ್ಥ (ಉಪವಾಸ) ವನ್ನು ತೆಗೆದಿಕೊಂಡು ವಿದ್ಯೆಯನ್ನು ಆರಾಧಿಸಲು ಹೋದರು. ಒಬ್ಬನೆದುರಿಗೆ  ಒಕ್ಕಣ್ಣಿನ ದೇವಿಯೂ ಮತ್ತೊಬ್ಬನೆದುರಿಗೆ (ಹೆಚ್ಚು ಮುಂಚಾಚಿದ) ಉಬ್ಬು ಹಲ್ಲಿನ ದೇವಿಯೂ ಬಂದರು. ವ್ಯಗ್ರ್ರಳಾದ (ವಿಕಾರದ ಅಂಗ ಹೊಂದಿದ – ವ್ಯಂಗಾಂ?) ದೇವತೆಯನ್ನು ನೋಡಿ ಅವರಿಂದ ಯೋಚಿಸಲಾಯಿತು. 'ಕಣೀಕೆ (ಒಕ್ಕಣ್ಣಿನ) ಮತ್ತು ಉಬ್ಬು ಹಲ್ಲಿನ ದೆವಾತೆ ಯಾವಾಗಲಾಗಲಿ ಇರುವುದಿಲ್ಲ' ಎಂದು (೧೦) ಮಂತ್ರ ವ್ಯಾಕರಣ ದಾಧಾರದಿಂದ ವಿದ್ಯೆಯನ್ನು ಶೋಧಿಸಿ. ಊನಾಕ್ಷರ ಮತ್ತು ಅಧಿಕಾಕ್ಷರ ಮಂತ್ರಗಳನ್ನು ಸರಿಪಡಿಸಿದರು (೧೧) ಪುನರಪಿ ಅವರಿಂದ ವಿದ್ಯೆ ಚಿಂತಿಸಲ್ಪಾಟ್ಟಿತು, ಸರ್ವಲಕ್ಷಣ ಸಂಪೂರ್ಣರಾದ ಕರ್ತವ್ಯದ ಬಗ್ಗೆ ಸಮಾಕುಲರಾದ ದೇವಿಯರು ಎದುರಿಗೆ ಬಂದರು. (೧೨) ದೇವತೆಯರನ್ನು ಕಳುಹಿಸಿ ಸಿದ್ಧವಿದ್ಯರೂ, ತಪಸ್ವಿಗಳೂ ಆದ ಆ ಸಾಧುಗಳು ಗುರುವಿನ ಬಳಿ  ಬಂದು ನಡೆದುದನ್ನು ತಿಳಿಸಿದರು (೧೩) 'ತಮ್ಮಿಂದ ಕೊಡಲ್ಪಟ್ಟ ಮಂತ್ರದಲ್ಲಿ ನನ್ನಿಂದ ಒಂದು ಅಕ್ಷರ ಕೊಡಲ್ಪಟ್ಟಿತು, ಹಾಗೆಯೇ ಒಂದು ಅಕ್ಷರವನ್ನು ಕಳೆಯಲಾಯಿತು, (ಇದರಿಂದ) ಮಹಾನ್ ಅತೀಚಾರ ಮಾಡಲ್ಪಟ್ಟಿದೆ. (೧೪) ಆದ್ದರಿಂದ ನಮ್ಮ ಚೇತಃ ಶುದ್ದಿ ಅಪೇಕ್ಷಿಸುವ ನಮಗೆ ಈಗ ಮಾಡಿದಂತಹ ಅತೀಚಾರದ ಪಾಪಕ್ಕೆ ಪ್ರಾಯಶ್ಚಿತ್ತವನ್ನು ಕೊಡು' ಎಂದು ಹೇಳಿದರು. (೧೫) ಮಹಾಸತ್ವ್ತಸಮನ್ವಿತವಾದ ಆ ಮಾತನ್ನು ಕೇಳಿ ಯೋಗಿಯು ಪ್ರೀತನಾಗಿ ವಿನೀತರಾದ ಅವರಿಗೆ ಕೂಡಲೆ ಹೇಳಿದನು (೧೬) 'ಊನ ಮತ್ತು ಅಧಿಕಾಕ್ಷರದ ಆ ವಿದ್ಯೆಗಳು ನಿಮಗೆ ಪರೀಕ್ಷಾರ್ಥವಾಗಿ ಕೊಡಲ್ಪಟ್ಟಿದ್ದುವು. ನಿಮ್ಮಿಂದ ಅಲ್ಪವಾದರೂ ದೋಷವಾಗಿಲ್ಲ' (೧೭) ಹೀಗೆ ಹೇಳಿ, ಹೃಷ್ಟಾತ್ಮನಾದ ಧರಸೇನ ಮುನೀಶ್ವಾರನು, ವಿನೀತರಾದ ಅವರಿಗೆ ಉತ್ಸಾಹದಿಂದ ಆಚಾರಾಂಗವನ್ನು ಕೊಟ್ಟನು (ಉಪದೇಶಿಸಿದನು) (೧೮) ಆಗ ಅವರು ಅಲ್ಪಕಾಲದಲ್ಲಿಯೇ ಸಮಸ್ತ ವಿದ್ಯೆಯನ್ನೂ ಪಡೆದು ದೇವತೆಗಳಿಂದ ಪೂಜಿತರಾಗಿ ತಮ್ಮ ಇಷ್ಟಸ್ಥಾನಕ್ಕೆ ಹೋದರು. (೧೯) ಯಾವ ಪ್ರಕಾರ ಆ ಇಬ್ಬರು ಯೋಗಿಗಳು ಮರೆಮಾಚಿದ ಅರ್ಥದ ಉಭಯಾತ್ಮಕವಾದ ವಿದ್ಯೆಯನ್ನು ಶೋಧಿಸಿ ಶ್ರುತ ಆಚಾರ ಸಂಪನ್ನರಾದರೋ, ಮತ್ತು ಮನುಷ್ಯರಿಂದ (ಹಾಗೂ) ದೇವತೆಗಳಿಂದ ಪೂಜಿತರಾದರೋ (೨೦) ಹಾಗೆ ಈ ಸಾಧುವು ಕೂಡ ವ್ಯಂಜನಾರ್ಥೋಭಯಾತ್ಮಕವಾದ (ಮರೆಮಾಚಿದ ಅರ್ಥದ

ಉಭಯ ತ್ಮಕವಾದ) ಜ್ಞಾನವನ್ನು ಶೋಧಿಸಿ ಪಠನ ಮಾಡುತ್ತಾ, ಬೇಗನೆ ನಿರ್ವಾಣತ್ವವನ್ನು ಹೊಂದುವನು (೨೧).

೩೨ ಖರತರ ಗಚ್ಛ ಮತ್ತು ತಪಾಗಚ್ಛಪಟ್ಟಾವಲಿಗಳು– ಇಂಡಿಯನ್ ಆಂಟಿಕ್ವೆರಿ ವಾಲ್ಯೂಂ xi– ೧೮೮೨, ಪು. ೨೪೫–೨೫೬ ಮತ್ತು ಹೇಮಚಂದ್ರಾಚಾರ್ಯರ ಪರಿಶಿಷ್ಟ ಪರ್ವ.

೩೩ ಪೂ. ಸೂ. ತಪಾಗಚ್ಛಪಟ್ಟಾವಲಿ ನೋಡಿ. ಸ್ಥೂಲಭದ್ರಾಚಾರ್ಯ ಮತ್ತು ಆರ್ಯ ಮಹಾಗಿರಿಯವರು ದಿವಂಗತರಾದ ಸಮಯಗಳ ಬಗ್ಗೆ ಖರತಗಚ್ಛದ ಮತ್ತು ತಪಾಗಚ್ಛದ ಪಟ್ಟಾವಲಿಗಳ ಮಧ್ಯೆ ಇರುವ ವ್ಯತ್ಯಾಸಗಳನ್ನು ಗಮನಿಸಬೇಕು. ಹೀಗೆಯೇ ವಜ್ರಸ್ವಾಮಿಯವರು ಮತ್ತು ಆರ್ಯರಕ್ಷಿತ ಸ್ವಾಮಿಯವರ ಜೀವಿತ ಸಮಯಗಳ ಬಗ್ಗೆಯೂ ಸಂದೇಹ ವ್ಯಕ್ತ ಪಡಿಸುವ ವಿಚಾರವನ್ನು ತಪಾಗಚ್ಛ ಪಟ್ಟಾವಲಿಯಲ್ಲಿ ಕಾಣಬಹುದು.

೩೪ ಚತುಷ್ಕುಲ ಸಮುತ್ಪತ್ತಿ ಪಿತಾಮಹಮಹಂ ವಿಭುಂ ।
ದಶಪೂರ್ವವಿಧಿಂ ವಂದೇ ವಜ್ರಸ್ವಾಮಿ ಮುನೀಶ್ವರಂ ॥

ಪಟ್ಟಾವಲೀ ಸಮುಚ್ಛಯ. ಪು. ೪೭–ಷಟ್ಖಂಡಾಗಮ ; ಸತ್ಪ್ರರೂಪಣಾ ೨ ಮುನ್ನುಡಿ– ಪು. ೩೭ ರಲ್ಲಿರುವ ಉಲ್ಲೇಖದಾಧಾರದಿಂದ.

೩೫ ಷಟ್ ಖಂಡಾಗಮ. ಸತ್‌ಪ್ರರೂಪಣಾ ಭಾಗ ೨. ಮುನ್ನುಡಿ ಪು. ೩೯–೪೧.

೩೬ ಮೇಲೆ ಹೇಳಿದ ಗ್ರಂಥ–ಮುನ್ನುಡಿ ಪು. ೩೭ರ ಉಲ್ಲೇಖ ಮತ್ತು ಪಿ.ಬಿ. ದೇಸಾಯಿ ಅವರ ‘ಜೈನಿಜಂ ಇನ್ ಸೌತ್ ಇಂಡಿಯಾ ಅಂಡ್ ಜೈನ ಎಪಿಗ್ರಾಫ್ಸ್ ‘ಪು. ೨೭–೩೦ ನೋಡಿ.

೩೬ ನಂದಿಸೂತ್ರಸ್ಥವಿಕಾವಲಿಸಿಜಂಬೂಸ್ವಾಮಿಯವರ ಅನಂತರ

ಅ ೧. ಪ್ರಭವ, ೨. ಸಿಜ್ಜಂಭವ, ೩. ಜಸಭದ್ಧ, ೪. ಸಂಭೂಯ, ೫. ಭದ್ದಬಾಹು

೬. ಥೂಲಬದ್ಧ

೭. ಮಹಾಗಿರಿ        ೭ಎ. ಸುಹತ್ಥಿ

| | |
|---|---|
| ೮. ಬುಹುಲ (ಬಲಿಸ್ಸಹ) | ೮. ಸುಸ್ಥಿತ ಮತ್ತು ಸುಪ್ರತಿಬದ್ಧ |
| ೯. ಸಾಇ | |
| ೧೦. ಸಾಮಾಜ್ಞ | (ಕೋಟಕ) (ಕಾಕಂದಿಕ) |
| ೧೧ಸಂಡಿಲ್ಲ | ೯. ಇಂದ್ರದಿನ್ನ |
| ಅಜ್ಜಜೀಯಧರ ? | ೧೦. ದಿನ್ನ |
| ೧೨ ಅಜ್ಜ ಸಮುದ್ದ | ೧೧. ಸಿಂಹಗಿರಿ |
| ೧೩. ಅಜ್ಜ ಮಂಗು (ಸುಯಸಾಯರಪಾರಂಗ) | ೧೪. ವಜ್ರ |
| ೧೪. ಅಜ್ಜಧಮ್ಮ ? | ೧೪. ದುರ್ಬಲಿಕ |
| ೧೫. ಭದ್ದ ಗುತ್ತ | ೧೫ ಚಂದ್ರ |
| ೧೬. ಅಜ್ಜವ ಇರ | ೧೬ ಸಾಮಂತಭದ್ರ |
| ೧೭. ಅಜ್ಜರಕ್ಖಯ | ೧೭ ವೃದ್ಧದೇವ |
| ೧೮. ನಂದಿಲಖವಣ | ೧೮. ಪ್ರದ್ಯೋತನ |
| ೧೯. ಅಜ್ಜನಾಗಹತ್ಥಿ (ಕಮ್ಮಪಯಡಿ ಪಹಾಣ) | ೧೯. ಮಾನದೇವ |
| ೨೦. ರೇವಇ ಣಕ್ಖತ್ತ | ೨೦ ಮಾನತುಂಗ |
| ೨೧. ಬ್ರಹ್ಮದ್ವೀಪ | ೨೧. ವೀರ |
| ೨೨. ಸಿಂಹಾಚಾರ್ಯ | ೨೨. ಜಯದೇವ |
| ೨೩. ಖಂದಿಲಾ ಇರಿಯ | ೨೩. ದೇವಾನಂದ |
| ೨೪. ಹಿಮವಂತ | ೨೪. ವಿಕ್ರಮ |
| ೨೫. ಣಾಗಜುಣಾಯರಿಯ | ೨೫. ನರಸಿಂಹ |
| ೨೬. ಗೋವಿಂದ | ೨೬. ಸಮುದ್ರ |
| ೨೭. ಭೂಯದಿನ್ನ | ೨೭. ಮಾನದೇವ |
| ೨೮. ಲೋಹಿಚ್ಚ | ೨೮. ಸತ್ಯಮಿತ್ರ |

೨೯. ದೂಸಗಣಿ